ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 12 | ಸಂಚಿಕೆ 4 | ಪುಟ 16 |ಜನವರಿ 22-28, 2018| ರೂ. 10/-

web: www.janashakthi.co.in e-mail : js_weekly@yahoo.com

ಮಾರ್ಕ್ಸ್‌ವಾದಿ ವಿಜ್ಞಾನಿ ಜೆ.ಆರ್. ಲಕ್ಷ್ಮಣರಾವ್ ಇನ್ನಿಲ್ಲ












ಸುಪ್ರೀಂ ಕೋರ್ಟ್‌ನಲ್ಲಿ ಗುಡುಗು



ಗುತ್ತಿಗೆ ಹಾಸ್ಟೆಲ್ ಕಾರ್ಮಿಕರು ಮತ್ತೆ ಹೋರಾಟದಲ್ಲಿ



ಜ. 31 : ತಾಮ್ರ ಚಂದ್ರ ಮಿಸ್ ಮಾಡ್ಬೇಡಿ



ಸಂಜೆ 6.37ಕ್ಕೆ ಗ್ರಹಣದೊಂದಿಗೆ ಉಗಮ

ಸುಮಾರು ರಾತ್ರಿ 7.37ರವರೆಗೂ ತಾಮ್ರವರ್ಣದ ಸಂಪೂರ್ಣ ಚಂದ್ರಗ್ರಹಣ

ಮೋದಿ ಸರ್ಕಾರಕ್ಕೆ 60 ಲಕ್ಷ ಸ್ಕೀಂ ಕಾರ್ಮಿಕರ ಎಚ್ಚರಿಕೆ



ಸುಪ್ರಿಂ ಕೋರ್ಟಿನ ಸಮಗ್ರತೆ ಮತ್ತು ಸ್ವಾತಂತ್ರ್ಯದ ವಿಷಯದಲ್ಲಿ ಚೌಕಾಶಿ ಸಲ್ಲದು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜನವರಿ 12 ರಂದು ದೇಶದ ಸರ್ವೋಚ್ಚ ನ್ಯಾಯಾಲಯದ ನಾಲ್ವರು ಹಿರಿಯ ನ್ಯಾಯಾಧೀಶರುಗಳು ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿದ್ದಾರೆ. ಇದೊಂದು ಅಭೂತಪೂರ್ವ ಘಟನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ವ್ಯಕ್ತಪಡಿಸಿದೆ. ಅವರು ಹಲವು ಮಹತ್ವದ ಪ್ರಶ್ನೆಗಳನ್ನು ಎತ್ತಿದ್ದಾರೆ. ಇವು ಒಂದು ಸಂಸ್ಥೆಯಾಗಿ ಸುಪ್ರಿಂ ಕೋರ್ಟಿನ ಮೇಲೆ ಮಹತ್ವದ ಪರಿಣಾಮ ಬೀರುವಂತವು. ಉದಾಹರಣೆಗೆ ಮೊಕದ್ದಮೆಗಳ ವಿಚಾರಣೆಗಳಿಗೆ ಸರದಿ ಪಟ್ಟಿ ಇತ್ಯಾದಿ.

ನ್ಯಾಯಾಂಗದ, ಅದರಲ್ಲೂ ಸುಪ್ರಿಂ ಕೋರ್ಟಿನ ಸಮಗ್ರತೆ ಮತ್ತು ಸ್ವಾತಂತ್ರ್ಯ ಸಂವಿಧಾನದ ಒಂದು ಮಹತ್ವದ ಸ್ಥಂಭ. ಅದರಲ್ಲಿ ಚೌಕಾಸಿ ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಎಲ್ಲ ಪ್ರಶ್ನೆಗಳನ್ನು ದೇಶದಲ್ಲಿ ಸರ್ವೊಚ್ಚ ನ್ಯಾಯಾಲಯದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಮತ್ತು ಪಾರದರ್ಶಕತೆಯನ್ನು ಗಮನದಲ್ಲಿಟ್ಟುಕೊಂಡು ಪರಿಹರಿಸಲಾಗುವುದು ಎಂಬ ಆಶಯವನ್ನು ವ್ಯಕ್ತಪಡಿಸಿದೆ.

ಇದ್ದಕ್ಕಿದ್ದಂತೆ ಹಜ್ ಸಬ್ಸಿಡಿ ರದ್ದಿನ ಹಿಂದೆ ದುರುದ್ದೇಶವಿರುವಂತೆ ಕಾಣುತ್ತದೆ

ಕೇಂದ್ರ ಸರಕಾರ ಇದ್ದಕ್ಕಿದ್ದಂತೆ ಹಜ್ ಯಾತ್ರೆಗೆ ಸಹಾಯ ಧನ ನೀಡಿಕೆಯನ್ನು ಹಿಂತೆಗೆದುಕೊಂಡಿದೆ. ಇದು ಸ್ವೇಚ್ಛಾಚಾರದಿಂದ ಮತ್ತು ಇತರ ಕಾರಣಗಳಿಗಾಗಿ ಕೈಗೊಂಡಿರುವ ದುರುದ್ದೇಶದ ಕ್ರಮ ಇರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ಸಬ್ಸಿಡಿಯನ್ನು ಹತ್ತು ವರ್ಷಗಳಲ್ಲಿ ಕ್ರಮೇಣ ತೆಗೆಯಬೇಕು ಎಂದು 2012ರಲ್ಲಿ ಸುಪ್ರಿಂ ಕೋರ್ಟ್ ಒಂದು ತೀರ್ಪು ನೀಡಿತ್ತು ಎಂಬ ಸಂಗತಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಪ್ರಭುತ್ವದ ಜಾತ್ಯತೀತ ನೀತಿಯ ಪ್ರಕಾರ ವ್ಯಕ್ತಿಗಳಿಗೆ, ಅವರು ಯಾವುದೇ ಧರ್ಮಕ್ಕೆ ಸೇರಿರಲಿ, ಧಾರ್ಮಿಕ ಯಾತ್ರೆಗಳಿಗಾಗಿ ಸಬ್ಸಿಡಿ ಮತ್ತು ನಿಧಿಗಳನ್ನು ನೀಡಬಾರದು ಎಂಬುದು ಸಿಪಿಐ(ಎಂ) ಅಭಿಪ್ರಾಯ, ಆದ್ದರಿಂದ ವೈಯಕ್ತಿಕವಾಗಿ ಧಾರ್ಮಿಕ ಯಾತ್ರೆಗಳಿಗೆ ಹೋಗುವವರಿಗೆ ಕೇಂದ್ರ ಅಥವ ರಾಜ್ಯಸರಕಾರಗಳು ಹಣ ನೀಡಬಾರದು ಎಂಬ ತನ್ನ ನಿಲುವನ್ನು ಅದು ಈ ಸಂದರ್ಭದಲ್ಲಿ ಪುನರುಚ್ಚರಿಸಿದೆ.

ಆದರೆ ಇದನ್ನು ಕೆಲವೇ ಆಯ್ದ ಸಂದರ್ಭಗಳಲ್ಲಿ ಮಾತ್ರ ಅನ್ವಯಿಸುವುದು ಸರಿಯಲ್ಲ. ಉತ್ತರಪ್ರದೇಶ ಸರಕಾರ ಮತ್ತು ಇತರ ಬಿಜೆಪಿ ಸರಕಾರಗಳು ಬೇರೆ ಧರ್ಮಗಳ ಯಾತ್ರೆಗಳಿಗೆ ಹಣ ಖರ್ಚು ಮಾಡುತ್ತಿವೆ. ಹೀಗಿರುವಾಗ ಇದ್ದಕ್ಕಿದ್ದಂತೆ ಸಂಬಂಧಪಟ್ಟ ಯಾರೊಡನೆಯೂ ಸಮಾಲೋಚನೆ ನಡೆಸದೆ ಇದನ್ನು ಮಾತ್ರ ನಿಲ್ಲಿಸಿರುವುದು ಸಹಜವಾಗಿ ಇದರ ಹಿಂದಿರುವ ಉದ್ದೇಶದ ಬಗ್ಗೆ ಸಂದೇಹ ಮೂಡಿಸುತ್ತದೆ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ.

'ಆಧಾರ್' ವಿಚಾರಣೆಯಲ್ಲಿ ಮಧ್ಯಪ್ರವೇಶ: ಸುಪ್ರಿಂ ಕೋರ್ಟ್‌ನಲ್ಲಿ ಎಐಕೆಎಸ್ ಅರ್ಜಿ ಸ್ವೀಕಾರ

ಜನವರಿ 17ರಂದು ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಆರಂಭವಾಗಿರುವ 'ಆಧಾರ್' ಕುರಿತ ವಿಚಾರನೆಯಲ್ಲಿ ಮಧ್ಯಪ್ರವೇಶಿಸಲು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಜನವರಿ 15ರಂದು ಅರ್ಜಿ ಹಾಕಿತ್ತು. ಅದನ್ನು ಸುಪ್ರಿಂ ಕೋರ್ಟ್ ಸ್ವೀಕರಿಸಿದೆ. ಸುಪ್ರಿಂ ಕೋರ್ಟಿನ ಹಿರಿಯ ವಕೀಲ ಪಿ ವಿ ಸುರೇಂದ್ರನಾಥ್ ಎಐಕೆಎಸ್ ಪರವಾಗಿ ವಾದಿಸುತ್ತಾರೆ.

ಆಧಾರ್ (ಗುರಿನಿರ್ದೇಶಿತ ಹಣಕಾಸು ಮತ್ತು ಇತರ ಹಣಕಾಸುಮತ್ತು ಇತರ ಸಬಗಸಿಡಿಗಳು, ಫಲಗಳು ಮತ್ತು ಸೇವೆಗಳು) ಕಾಯ್ದೆ 2016ರ ಅಂಶಗಳನ್ನು ಭಾರತ ಸರಕಾರ ಮತ್ತು ಖಾಸಗಿಯವರು ಕೂಡ ಆ ಕಾಯ್ದೆಯಲ್ಲಿ ಹೇಳಿರದ ವಿಷಯಗಳಿಗೂ ಬಳಸುತ್ತಿದ್ದಾರೆ. ಇದು ಬಡ ರೈತರಿಗೆ ಹಲವಾರು ತೊಂದರೆಗಳನ್ನು, ಕಷ್ಟಗಳನ್ನು ಸೃಷ್ಟಿಸಿರುವ ಹಿನ್ನೆಲೆಯಲ್ಲಿ ಎಐಕೆಎಸ್ ಇದರಲ್ಲಿ ಮಧ್ಯಪ್ರವೇಶಿಸಲು ನಿರ್ಧರಿಸಿದೆ.





60 ಲಕ್ಷ ಸ್ಕೀಂ ಕಾರ್ಮಿಕರ ಯಶಸ್ವಿ ದೇಶವ್ಯಾಪಿ ಮುಷ್ಕರ: ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಅಭಿನಂದನೆ

ಜನವರಿ 17 ರಂದು ಕೇಂದ್ರೀಯ ಕಾರ್ಮಿಕ ಸಂಘನಟೆಗಳ ಕರೆಗೆ ಓಗೊಟ್ಟು ದೇಶಾದ್ಯಂತ ಸುಮಾರು 60 ಲಕ್ಷ ಅಂಗನವಾಡಿ, ಆಶಾ, ಬಿಸಿಯೂಟ ನೌಕರರು ಮುಂತಾದ ಸ್ಕೀಮ್ ನೌಕರರು ಮುಷ್ಕರ ನಡೆಸಿದ್ದಾರೆ. ಸುಮಾರು 20ಲಕ್ಷ ಮಂದಿ ಜಿಲ್ಲಾ ಕೇಂದ್ರಗಳಲ್ಲಿ ಅಂದು ಬೀದಿಗಿಳಿದು ಪ್ರತಿಭಟನಾ ಮತಪ್ರದರ್ಶನ, ರ್‍ಯಾಲಿ, ಧರಣಿ ಇತ್ಯಾದಿಗಳನ್ನು ನಡೆಸಿದ್ದಾರೆ. ನಂತರ ಹಣಕಾಸು ಮಂತ್ರಿಗಳಿಗೆ ತಮ್ಮ ಬೇಡಿಕೆಗಳ ಕುರಿತಾದ ಮನವಿ ಪತ್ರಗಳನ್ನು ಸಲ್ಲಿಸಿದ್ದಾರೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಈ ಯಶಸ್ವಿ ಕಾರ್ಯಾಚರಣೆಗೆ ಸ್ಕೀಂ ನೌಕರರನ್ನು ಅಭಿನಂದಿಸಿವೆ.

1. ಸ್ಕೀಮ್ ನೌಕರರನ್ನು 45ನೇ ಐಎಲ್‌ಸಿ ನಿರ್ಣಯದ ಪ್ರಕಾರ ಕಾರ್ಮಿಕರೆಂದು ಮಾನ್ಯ ಮಾಡಿ 18000ರೂ. ಕನಿಷ್ಟ ಕೂಲಿ ಮತ್ತು ಪೆನ್ಶನ್ ಮುಂತಾದ ಇತರ ಸಾಮಾಜಿಕ ಭದ್ರತೆಗಳನ್ನು ಕೊಡಬೇಕು, 2. ಈ ವರ್ಷದ ಕೇಂದ್ರ ಬಜೆಟಿನಲ್ಲಿ ಕೇಂದ್ರ ಸರಕಾರ ಪ್ರಾಯೋಜಿತ ಐಸಿಡಿಎಸ್ ಮುಂತಾದ ಸ್ಕೀಮುಗಳಿಗೆ ಸಾಕಷ್ಟು ಹಣ ಒದಗಿಸಬೇಕು ಮತ್ತು 3. ಈ ಸ್ಕೀಮುಗಳ ಖಾಸಗೀಕರಣ ಅಥವ ಬೇರಾವ ರೀತಿಯಲ್ಲೂ ಬುಡಮೇಲು ಮಾಡಬಾರದು ಎಂಬ ಮೂರು ಬೇಡಿಕೆಗಳ ಮೇಲೆ ಒಂದು ದಿನದ ದೇಶವ್ಯಾಪಿ ಮುಷ್ಕರ ನಡೆಸಲು ದಿಲ್ಲಿಯಲ್ಲಿ ನವಂಬರ್9–11ರ ವರೆಗೆ ನಡೆದ 'ಮಹಾಪಡಾವ್' ನಿರ್ಧರಿಸಿತ್ತು.

ವಿವಿಧ ರಾಜ್ಯ ಸರಕಾರಗಳ ಬೆದರಿಕೆಗಳನ್ನೂ ಲೆಕ್ಕಿಸದೆ ಸ್ಕೀಂ ನೌಕರರು ದೇಶಾದ್ಯಂತ ಮುಷ್ಕರದಲ್ಲಿ ಭಾಗವಹಿಸಿದರು. ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಸ್ಕೀಮ್ ನೌಕರರು ಮಾತ್ರವೇ ಅಲಲ್, ಸ್ವತಂತ್ರ ಸಂಘಟನೆಗಳಿಗೆ ಸೇರಿದ ಮತ್ತು ಯಾವ ಸಂಘಕ್ಕೂ ಸೇರದ ಸ್ಕೀಮ್ ಕಾರ್ಮಿಕರೂ ಕೂಡ ಇದರಲ್ಲಿ ಭಾಗವಹಿಸಿದರು. ಕರ್ನಾಟಕದಲ್ಲಿ ರಾಜ್ಯದ ನಾಲ್ಕು ಕೇಂದ್ರೀಯ ಮಂತ್ರಿಗಳ ಮುಂದೆ 24 ಗಂಟೆಗಳ ಮಹಾಧರಣಿ ನಡೆಸಿದರು. ಇದು ಜನವರಿ 18 ರಂದೂ ಮುಂದುವರೆಯಿತು.

ರಾಜಧಾನಿ ದಿಲ್ಲಿಯಲ್ಲಿ ಮಂಡಿ ಹೌಸ್‌ನಿಂದ ಸಂಸದ್ ಮಾರ್ಗದ ವರೆಗೆ ಸ್ಕೀಂ ನೌಕರರ ರ್‍ಯಾಲಿಗೆ ಕೇಮದ್ರೀಯ ಕಾರ್ಮಿಕಸ ಂಗಟನೆಗಳ ಅಖಿಲ ಭಾರತ ಮುಖಂಡರು ನೇತೃತ್ವ ನೀಡಿದರು. ನಂತರ ಈ ಮುಖಂಡರು ಹಣಕಾಸು ಮಂತ್ರಾಲಯಕ್ಕೆ ಒಮದು ಮನವಿ ಪತ್ರವನ್ನು ಸಲ್ಲಿಸಿದರು.

2018–19ರ ಕೇಂದ್ರ ಬಜೆಟ್ ನಂತರ ಸರಕಾರದ ಸ್ಪಂದನೆಯನ್ನು ಅವಲಂಭಿಸಿ ಅನಿರ್ದಿಷ್ಟ ಕಾಲದ ಸಾರ್ವತ್ರಿಕ ಮುಷ್ಕರವೂ ಸೇರಿದಂತೆ ಮುಂದಿನ ಕಾರ್ಯಾಚರಣೆಯ ಬಗ್ಗೆ ನಿರ್ಧರಿಸಲಾಗುವುದು ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹೇಳಿವೆ.

ವಿಧಾನಸಭಾ ಚುನಾವಣೆಗಳ ಬಿಜೆಪಿಯ ಚರ್ಚೆಯಲ್ಲಿ ಭದ್ರತಾ ಸಲಹೆಗಾರರಿಗೇನು ಕೆಲಸ?

ಜನವರಿ 14 ರಂದು ಕೇಂದ್ರ ಗೃಹಮಂತ್ರಿಗಳ ನಿವಾಸದಲ್ಲಿ ತ್ರಿಪುರಾ, ಮೇಘಾಲಯ ಮತ್ತು ನಾಗಾಲ್ಯಾಂಡಿನಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳ ಬಗ್ಗೆ ಚರ್ಚಿಸಲು ಬಿಜೆಪಿ ಮತ್ತು ಆರೆಸ್ಸೆಸ್ ಮುಖಂಡರ ಸಭೆ ನಡೆಯಿತು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಸಭೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಕೂಡ ಭಾಗವಹಿಸಿದ್ದರು ಎಂದು ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದು ನಿಜವಾಗಿದ್ದರೆ, ನಿಯಮಾವಳಿಗಳ ಒಂದು ಆಘಾತಕಾರಿ ಉಲ್ಲಂಘನೆಯಾಗಿದೆ ಮತ್ತು ಗಂಭೀರ ದುರ್ವರ್ತನೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ರಾಷ್ಟ್ರೀಯ ಭದ್ರತಾ ಸಲಹೆಗಾರಂತಹ ಹಿರಿಯ ಸರಕಾರೀ ಅಧಿಕಾರಿ ಬಿಜೆಪಿಯ ಚುನಾವಣಾ ಪ್ರಚಾರದ ಚರ್ಚೆಯ ಸಭೆಯಲ್ಲಿ ಹೇಗೆ ತಾನೇ ಹಾಜರಿರಲು ಸಾಧ್ಯ, ಎಂದು ಪ್ರಶ್ನಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಕೇಂದ್ರ ಗೃಹಮಂತ್ರಿಗಳು ಸ್ಪಷೀಕರಿಸಬೇಕು ಎಂದು ಆಗ್ರಹಿಸಿದೆ.

ಚುನಾವಣಾ ಆಯುಕ್ತರಿಗೆ ಪತ್ರ

ಈ ಕುರಿತಂತೆ, ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಬಿಜಾನ್ ಧರ್ ಕೇಂದ್ರ ಚುನಾವಣಾ ಆಯುಕ್ತರಿಗೆ ಜನವರಿ 15ರಂದು ನಿಯಮಾವಳಿಗಳ ಈ ಉಲ್ಲಂಘನೆಯ ಬಗ್ಗೆ ತನಿಖೆ ನಡೆಸಬೇಕು ಎಂದು ದೂರು ಪತ್ರ ಬರೆದಿದ್ದಾರೆ.

ಜನವರಿ 14ರ ಪಿಟಿಐ ಸುದ್ದಿಯ ಪ್ರಕಾರ ಕೇಂದ್ರ ಗೃಹಮಂತ್ರಿಗಳಿ ನಿವಾಸದಲ್ಲಿ ಈಶಾನ್ಯ ಭಾರತದಲ್ಲಿ ಬಿಜೆಪಿ ವ್ಯವಹಾರಗಳ ಉಸ್ತುವಾರಿ ವಹಿಸಿರುವ ರಾಮ್ ಮಾಧವ್, ಹಿರಿಯ ಆರೆಸ್ಸೆಸ್ ಮುಖಂಡ ಕೃಷ್ಣ ಗೋಪಾಲ್ ಭಾಗವಹಿಸಿದ್ದ ಸಭೆಯಲ್ಲಿ ಅಜಿತ್ ದೋವಲ್ ಕೂಡ ಭಾಗವಹಿಸಿದ್ದರು ಎಂಬುದನ್ನು ಆಯುಕ್ತರ ಗಮನಕ್ಕೆ ತರುತ್ತ, ಈ ಸಭೆಯನ್ನು ಈಶಾನ್ಯ ಭಾರತದ ಈ ಮೂರು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆಗಳ ಬಗ್ಗೆ ಚರ್ಚಿಸಲೆಂದೇ ಏರ್ಪಡಿಸಲಾಗಿತ್ತು ಎಂದು ಹೇಳಲಾಗಿದೆ, ಇದರಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರರಂತಹ ಸರಕಾರದ ಮಹತ್ವದ ಹುದ್ದೆಗಳಲ್ಲಿರುವವರ ಹಾಜರಾತಿ ಅನಪೇಕ್ಷಣೀಯ ಮತ್ತು ಆಕ್ಷೇಪಾರ್ಹ ಎಂದಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು 'ಇದು ಚುನಾವಣೆಗಳಲ್ಲಿ ರಾಜಕೀಯ ಪ್ರಯೋಜನ ಗಿಟ್ಟಿಸಲು ಆಡಳಿತದ ನಗ್ನ ದುರ್ಬಳಕೆ, ಇದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ನಿಜವಾದ ಬೆದರಿಕೆಯಲ್ಲದೆ ಬೇರೇನೂ ಅಲ್ಲ ಎಂದು ಅವರು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿದ್ದಾರೆ.

"ತಾವು ಯಾವುದೇ ರಾಜಕೀಯ ಪಕ್ಷ, ಅದು ಆಳುತ್ತಿರುವ ಪಕ್ಷವಾಗಲಿ, ವಿರೋಧದಲ್ಲಿರುವ ಪಕ್ಷವಾಗಲಿ, ಆಡಳಿತದ ದುರುಪಯೋಗ ಮಾಡಿಕೊಂಡು ಅನುಚಿತ ಚುನಾವಣಾ ಅವಕಾಶ ಪಡೆದುಕೊಳ್ಳದಂತೆ ನೋಡಿಕೊಳ್ಳುವ ಅಧಿಕಾರ ಉಳ್ಳವರಾದ್ದರಿಂದ, ಈ ವಿಷಯದಲ್ಲಿ ತನಿಖೆ ನಡೆಸುವಂತೆ ಸೂಕ್ತ ಅಧಿಕಾರಿಗಳಿಗೆ ಆದೇಶ ನೀಡಬೇಕು ಮತ್ತು ಅದು ನಿಜವೆಂದು ಕಂಡರೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಮ್ಮನ್ನು ಕೋರುತ್ತೇನೆ" ಎಂದು ಬಿಜಾನ್ ಧರ್ ಅವರು ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. (ಇದನ್ನು ಕುರಿತ ಬಿಜಾನ್ ಧರ್ ಪತ್ರಿಕಾ ಸಮ್ಮೇಳನ–ಪುಟ 14 ನೋಡಿ)

ಇಸ್ರೇಲಿ ಪ್ರಧಾನ ಮಂತ್ರಿ ಭೇಟಿ ವಿರುದ್ಧ ಎಡಪಕ್ಷಗಳ ಪ್ರತಿಭಟನೆ

ಜನವರಿ 15ರಂದು ದಿಲ್ಲಿಯಲ್ಲಿ ಇಸ್ರೇಲಿ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಹು ಭೇಟಿಯ ವಿರುದ್ಧ ಒಂದು ಆಕ್ರೋಶಭರಿತ ಪ್ರತಿಭಟನೆ ನಡೆಯಿತು. ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ ಮತ್ತು ಸಿಜಿಪಿಯ ದಿಲ್ಲಿ ಘಟಕಗಳು ಇದನ್ನು ಸಂಘಟಿಸಿದ್ದವು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ್ ಕಾರಟ್, ಸಿಪಿಐ ನ ಡಿ.ರಾಜ, ಮತ್ತು ಅತುಲ್‌ಕುಮಾರ್ ಅಂಜನ್, ಸಿಪಿಐ(ಎಂಎಲ್)ನ ರವಿ ರಾವ್, ಸತ್ಯಬಾನ್, ಎಸ್‌ಯುಸಿಐ(ಸಿ)ನ ಸತ್ಯಬಾನ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಅಚಿನ್ ವಣೈಕ್, ಗೀತಾ ಹರಿಹರನ್ ಮುಂತಾದ ಪ್ರತಿಷ್ಠಿತ ಬುದ್ಧಿ ಜೀವಿಗಳೂ ಇದರಲ್ಲಿ ಭಾಗವಹಿಸಿದ್ದರು.

ಪುಟ 7 ನೋಡಿ



ಸಂಪಾದಕೀಯ

ಬಿಜೆಪಿಯ ಮನುವಾದಿ ಮನಸ್ಸನ್ನು ಶುದ್ಧಗೊಳಿಸಬೇಕಾಗಿದೆ

ಇತ್ತೀಚೆಗಷ್ಟೇ ಸಂವಿಧಾನ ಬದಲಾಯಿಸುವ ಬಗ್ಗೆ ಉಡಾಫೆ ಮಾತಾಡಿ ಪಾರ್ಲಿಮೆಟಿನಲ್ಲಿ ಉಗಿಸಿಕೊಂಡ ನಮ್ಮ ಹೊಸ ಕೇಂದ್ರಮಂತ್ರಿ ಅನಂತ ಕುಮಾರ ಹೆಗಡೆ ಪುನಃ ಸೆಕ್ಯುಲರ್ ವಾದಿಗಳ ಮೇಲೆ ಬಿಜೆಪಿಯನ್ನು ವಿರೋಧಿಸುವ ಎಲ್ಲರ ಮೇಲೆ ಹೊಲಸು ಕಾರಿಕೊಳ್ಳುತ್ತಿದ್ದಾರೆ. ಅತ್ತ ಅವರ ಯುವಬೆಂಬಲಿಗರು ಪುನಃ ಶುದ್ಧೀಕರಣದ ಬಗ್ಗೆ ಮಾತನಾಡಿದ್ದಾರೆ. ನಟ ಪ್ರಕಾಶ್ ರೈ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡ ಕಾರಣಕ್ಕಾಗಿ ಶಿರಸಿಯಲ್ಲಿನ ಮಠದ ಆವರಣ ಹಾಗೂ ಕಾರ್ಯಕ್ರಮದ ವೇದಿಕೆಯನ್ನು ಗೋಮೂತ್ರದಿಂದ ಶುದ್ಧೀಕರಿಸಿರುವ ಬಿಜೆಪಿ ಕಾರ್ಯಕರ್ತರ ನಡವಳಿಕೆ ಅಸಂಗತ ಪ್ರಹಸನದಂತೆ ಕಂಡರೂ ಆಘಾತಕಾರಿಯೂ ಹೌದು. ಶಿರಸಿಯ ರಾಘವೇಂದ್ರ ಮಠದಲ್ಲಿ ನಡೆದಿದ್ದ 'ಪ್ರೀತಿ ಪದಗಳ ಪಯಣ' ಆಯೋಜನಾ ಸಮಿತಿಯು ಏರ್ಪಡಿಸಿದ್ದ 'ನಮ್ಮ ಸಂವಿಧಾನ ನಮ್ಮ ಹೆಮ್ಮೆ' ಕಾರ್ಯಕ್ರಮದಲ್ಲಿ ಮಾತನಾಡಿದ್ದ ಪ್ರಕಾಶ್ ರೈ, ಸಂವಿಧಾನ ಬದಲಾಯಿಸುವ ಕುರಿತು ಕೇಂದ್ರ ಸಚಿವ ಅನಂತಕುಮಾರ್ ಹೆಗಡೆ ನೀಡಿದ ಹೇಳಿಕೆಯನ್ನು ಟೀಕಿಸಿದ್ದರು. ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ, 'ಗೋಮಾಂಸ ಸೇವಿಸುವ ಹಾಗೂ ಹಿಂದೂ ದೇವರುಗಳನ್ನು ಅಪಮಾನಿಸುವ ವ್ಯಕ್ತಿಯ ಭೇಟಿಯಿಂದ ಶಿರಸಿ ನಗರವೇ ಅಪವಿತ್ರ ವಾಗಿದೆ' ಎಂದು ಶುದ್ಧೀಕರಣ ಪಡೆಯ ಕಾರ್ಯಕರ್ತರು ಆರೋಪಿಸಿದ್ದಾರೆ. ಇದೆಲ್ಲ ಘಟನೆಗೆ ಕಾರಣವಾದ ಸೋಗಲಾಡಿ ಬುದ್ಧಿಜೀವಿಯನ್ನು ಹಿಂದೂ ಸಮಾಜ ಎಂದೂ ಕ್ಷಮಿಸದು ಎಂದು ಹೇಳಿದ್ದಾರೆ. ಈ ಬಿಜೆಪಿಯ ನಡೆಯಲ್ಲಿ ಅದರ ಹಲವು ಮುಖಗಳು ಬಯಲಾಗುತ್ತವೆ.

ಒಂದು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವವರ ಮೇಲೆ ಸತತ ದಾಳಿ. ಮತ್ತೊಂದು ಕಡೆ ಭಿನ್ನವಾದ ವಿಚಾರಗಳನ್ನು ಪ್ರತಿಪಾದಿಸುವವರನ್ನು ಹೀಗಳೆಯುವ ತೀವ್ರವಾದ ಅಸಹಿಷ್ಣುತೆ. ಇನ್ನೊಂದು ಕಡೆ ಆಹಾರ ಸಂಸ್ಕೃತಿಯ ಮೇಲೆ ದಾಳಿ. ಮಗದೊಂದು ಕಡೆ ರಾಜಕೀಯದಲ್ಲೂ ಬ್ರಾಹ್ಮಣವಾದಿ ಧಾರ್ಮಿಕ ಮಡಿ ಕಲ್ಪನೆಯನ್ನು ಎಳೆದು ತರುವುದು. ಗೋಮೂತ್ರದಿಂದ ಶುದ್ಧಿಕರಣದ ಬಗ್ಗೆ ಬಿಜೆಪಿ-ಸಂಘ ಪರಿವಾರ ಹೀಗೆ ಎಳೆದು ತಂದದ್ದು ಕರ್ನಾಟಕದಲ್ಲೂ ಇದು ಮೊದಲ ಬಾರಿಯಲ್ಲ. ಉಡುಪಿ ಚಲೋ, ಪೇಜಾವರರ ಇಫ್ತರ್ ಕೂಟ, ಮೈಸೂರಿನ ಗೋಮಾಂಸ ಸೇವನೆ ನಂತರವೂ ಇದೇ ರೀತಿಯ ಅಸಂಗತ ನಾಟಕವಾಡಿದ್ದರು. 'ಸ್ವಚ್ಛ ಭಾರತ' 'ಸ್ವಚ್ಛ ಗಂಗಾ' ಎಂಬಿತ್ಯಾದಿ ಘೋಷಣೆಗಳನ್ನು ಕೊಟ್ಟರೂ ದೇಶದಲ್ಲಿ ತುಂಬಬಿರುವ ಹೊಲಸು ನಿರ್ಮೂಲನದತ್ತ ಏನೂ ಮಾಡದಿದ್ದರೂ ಧಾರ್ಮಿಕ ಶುದ್ಧೀಕರಣದ ಬಗ್ಗೆ ಮಾತನಾಡುವುದು ಶುದ್ಧ ಸೋಗಲಾಡಿತನ.

ಬಿಜೆಪಿಯ ಮನುವಾದಿ ಮನಸ್ಸಿನ ಶುದ್ಧಿಕರಣದ ಪರಿಕಲ್ಪನೆ ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ ನಿಲುವು. ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಧಾರ್ಮಿಕ ಕಾರ್ಯಕ್ರಮ ಮಾಡುತ್ತಿರುವುದು ನಾಚಿಕೆಗೇಡಿನ ಕೆಲಸವಾಗಿದೆ. ರಾಷ್ಟ್ರೀಯ ಪಕ್ಷವೊಂದು ಈ ರೀತಿ ಚಿಲ್ಲರೆ ಪ್ರಚಾರಕ್ಕೆ ಇಳಿದಿರುವುದು ಇವರ ಮನಸ್ಥಿತಿ ತೋರಿಸುತ್ತದೆ. ಪ್ರಕಾಶ ರೈ ಮತ್ತು ಆ ಸಮಾವೇಶದಲ್ಲಿ ಭಾಗವಹಿಸಿದವರು ದೇಶ ಮತ್ತು ರಾಜ್ಯದಲ್ಲಿ ಗೌರವಾನ್ವಿತರು. ಸಮಾಜದ ಏಳ್ಗೆಯನ್ನು ಬಯಸುವಂತವರು. ಶಾಂತಿ, ಸೌಹಾರ್ದತೆ ಸಂದೇಶ ಸಾರಿದಂತವರು. ಸ್ವಚ್ಛ ಆಗಬೇಕಾಗಿರುವುದು ಮಲೀನಗೊಂಡ ಬಿಜೆಪಿಯ ಮುನುವಾದಿ ಮನಸ್ಸು.

ಶಾಂತಿ, ಸೌಹಾರ್ದತೆ ಸಂದೇಶಕ್ಕೆ ಮತ್ತು ನಮ್ಮ ಸಂವಿಧಾನ ರಕ್ಷಣೆಯ ಬದ್ಧತೆಯನ್ನು ಸಾರಿದ ಮಹಾನ್ ವ್ಯಕ್ತಿಗಳಿಗೆ ಈ ರೀತಿ ಅಗೌರವ ತೋರಿಸುವ ಮೂಲಕ ಬಿಜೆಪಿ ತನ್ನನ್ನು ತಾನು ಮಲೀನಗೊಳಿಸಿಕೊಂಡಿದೆ. ವಿವಿಧ ಬಗೆಯ ಆಹಾರವನ್ನು ಸೇವಿಸುವ ಜನತೆ ರಾಜ್ಯದಾದ್ಯಂತ ಇದ್ದಾರೆ. ಹಿಂದುಳಿದ ವರ್ಗ, ಬುಡಕಟ್ಟು ಕುಟುಂಬಗಳು ಸಹ ರಾಜ್ಯದಾದ್ಯಂತ ವಿವಿಧ ಬಗೆಯ ಆಹಾರ ಸೇವಿಸುತ್ತಾರೆ ಮನುಷ್ಯರ ಆಹಾರದ ಬಗ್ಗೆ ಬಿಜೆಪಿ ಮಾತನಾಡಿ ಅವಮಾನ ಮಾಡಿರುವುದು ಖಂಡನೀಯ. ಪ್ರಕಾಶ್ ರೈ ಹೇಳಿದಂತೆ ಅವರು ಅಥವಾ ಅವರಂತಹ ಶಾಂತಿ-ಸೌಹಾರ್ದತೆ ಸಂವಿಧಾನಗಳಿಗೆ ಬದ್ಧರಾಗಿರುವವರು ಹೋದಲ್ಲೆಲ್ಲ ದನದ ಮೂತ್ರ ಹಿಡಿದುಕೊಂಡು ಬಿಜೆಪಿ ಓಡಾಡಿ ಶುದ್ಧಗೊಳಿಸುವ ಪ್ರಹಸನ ದಿನನಿತ್ಯ ನಡೆಸುತ್ತಾರೆಯೇ ಎಂಬುದಕ್ಕೆ ಬಿಜೆಪಿ ಉತ್ತರಿಸಬೇಕಾಗಿದೆ.

ಬಿಜೆಪಿಯ ಮನುವಾದಿ ಮನಸ್ಸನ್ನು ಶುದ್ಧಗೊಳಿಸಬೇಕಾಗಿದೆ. ಆದರೆ ಅದು ಬಹುಶಃ ಅಸಾಧ್ಯ. ಜನವರಿ 30ಕ್ಕೆ ರಾಜ್ಯಾದ್ಯಂತ ಮಾನವ ಸರಪಣಿಯಿಂದ ಆರಂಭವಾಗುವ "ಸೌಹಾರ್ದತೆಗಾಗಿ ಕರ್ನಾಟಕ"ದಂತಹ ವ್ಯಾಪಕ ಸತತ ಪ್ರಚಾರಾಂದೋಳನದ ಮೂಲಕ, ಅವರು ಜನರ ಅದರಲ್ಲೂ ಯುವಜನರ ಮನಸ್ಸನ್ನು ಹೊಲಸುಗೊಳಿಸದಂತೆ ತಡೆಯುತ್ತೇವೆ ಎಂದು ಪ್ರತಿಜ್ಞೆ ಮಾಡಬೇಕಾಗಿದೆ.

ಜನವರಿ 30 ರಂದು ಮಾನವ ಸರಪಳಿ ನಿರ್ಮಿಸಿ ಶಾಂತಿ, ಸಾಮರಸ್ಯ ಕಾಪಾಡುವ ಪ್ರತಿಜ್ಞೆ ಮಾಡೋಣ! ಎಲ್ಲೆಡೆ ಸೌಹಾರ್ದ ಸಂದೇಶವನ್ನು ಹರಡೋಣ ಬನ್ನಿ!!

ಶಾಂತಿ, ಸೌಹಾರ್ದ, ಸಹಬಾಳ್ವೆಗೆ ಕನ್ನಡ ನಾಡು ಶತಮಾನಗಳಿಂದಲೂ ಹೆಸರುವಾಸಿಯಾಗಿದೆ.

ನಮ್ಮ ಆದಿಕವಿ ಪಂಪ ಹತ್ತನೆಯ ಶತಮಾನದಲ್ಲಿಯೇ 'ಮನುಷ್ಯ ಜಾತಿ ತಾನೊಂದೆ ವಲಂ'ಎಂದು ಸಾರಿ ಹೇಳಿದ್ದಾನೆ. ಇಪ್ಪತ್ತನೆಯ ಶತಮಾನದಲ್ಲಿ ಮಹಾಕವಿ ಕುವೆಂಪುರವರು ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ನೀಡಿದ್ದಾರೆ. ಶರಣರು, ದಾಸರು, ತತ್ವಪದಕಾರರು, ಸೂಫಿ ಸಂತರು ಕಾಲದಿಂದ ಕಾಲಕ್ಕೆ ಮಾನವ ಸೋದರತ್ವವನ್ನು ಎತ್ತಿ ಹಿಡಿದಿದ್ದಾರೆ.


ಕೋಮುವಾದದ ಜ್ವಾಲೆಯಲ್ಲಿ ಇಡೀ ಭಾರತ ಹೊತ್ತಿ ಉರಿಯುವಾಗಲೂ ಕರ್ನಾಟಕ ಶಾಂತವಾಗಿತ್ತು.

ಇತ್ತೀಚಿನ ದಿನಗಳಲ್ಲಿ ಕೋಮುಸೌಹಾರ್ದವನ್ನು ಕೆಡಿಸಿ ಕೋಮುಜ್ವಾಲೆ ಹಬ್ಬಿಸುವ ಪ್ರಯತ್ನ ನಡೆಯುತ್ತಿದೆ. ರಾಜಕೀಯ ಪ್ರೇರಿತವಾದ ಇಂತಹ ಪ್ರಯತ್ನಗಳು "ಸರ್ವ ಜನಾಂಗದ ಶಾಂತಿಯ ತೋಟ"ವಾಗಿದ್ದ ನಮ್ಮ ಪರಂಪರೆಗೆ ವಿರುದ್ಧವಾಗಿವೆ. ಕೋಮುದ್ವೇಷ ಬಿತ್ತಿ ಬೆಳೆಯುವವರು ಹಿಂದೂಗಳಾಗಿರಲಿ, ಮುಸಲ್ಮಾನರಿರಲಿ, ಮತ್ತಾರೇ ಆಗಿರಲಿ ಅವರು ನಮ್ಮವರಾಗಲು ಸಾಧ್ಯವೇ ಇಲ್ಲ. ಕನ್ನಡ ಪರಂಪರೆಯ ನಿಜ ವಾರಸುದಾರರು ಎಂದಿಗೂ ಕೋಮುವಾದಿಗಳಲ್ಲ, ಉಗ್ರವಾದಿಗಳೂ ಅಲ್ಲ.

ಕೋಮುವಾದಕ್ಕೆ ಪ್ರತಿಯಾಗಿ ಸಾಮರಸ್ಯವನ್ನು, ದ್ವೇಷಕ್ಕೆ ಪ್ರತಿಯಾಗಿ ಸ್ನೇಹವನ್ನು, ಕುತಂತ್ರಕ್ಕೆ ಪ್ರತಿಯಾಗಿ ಪ್ರಾಮಾಣಿಕತೆಯನ್ನು ನಾವು ಎತ್ತಿ ಹಿಡಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸ್ನೇಹದ ಸಾಮರಸ್ಯದ ಸಂದೇಶವನ್ನು ಕರ್ನಾಟಕದ ಎಲ್ಲ ಭಾಗಗಳಲ್ಲಿ ಹರಡುವುದು ಶಾಂತಿಪ್ರಿಯರೆಲ್ಲರ ಕರ್ತವ್ಯವಾಗಬೇಕು.

1948 ಜನವರಿ 30 ರಂದು ಕೋಮುವಾದಿಯೊಬ್ಬನ ಗುಂಡಿಗೆ ಬಲಿಯಾಗಿ ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧಿ ಹುತಾತ್ಮರಾದರು. ಕೋಮುವಾದದ ವಿಷದ ಜ್ವಾಲೆಗೆ ಅಮೃತದ ಕಲಶ ಒಡೆದು ಹೋಯಿತು. ಅದು ಮತ್ತೆ ಮತ್ತೆ ಮರುಕಳಿಸದಂತೆ ಕೋಮುವಾದವನ್ನು ಹತ್ತಿಕ್ಕಲು ಇಂದು ನಾವೆಲ್ಲ ಒಂದುಗೂಡಲೇ ಬೇಕಿದೆ.

2018 ಜನವರಿ 30 ರಂದು ನಾಡಿನಾದ್ಯಂತ 'ಸೌಹಾರ್ದತೆಗಾಗಿ ಕರ್ನಾಟಕ ಮಾನವ ಸರಪಳಿ' ನಿರ್ಮಿಸಲು ನಿರ್ಧರಿಸಲಾಗಿದೆ. ಕರ್ನಾಟಕದಲ್ಲಿ ಕೋಮು ಸಾಮರಸ್ಯವನ್ನು ಹರಡಲು ಶಾಂತಿ ಸಂದೇಶ ಸಾರಲು ಎಲ್ಲ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ, ಮುಖ್ಯ ನಗರ, ಪಟ್ಟಣಗಳಲ್ಲಿ ಈ ಕಾರ್ಯಕ್ರಮ ಏಕಕಾಲಕ್ಕೆ ನಡೆಯಲಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಎಲ್ಲರೂ ಒಂದೆಡೆ ನಿಗದಿತ ಸ್ಥಳಗಳಲ್ಲಿ ಸೇರಿ ಸಂಜೆ 4 ಗಂಟೆಯಿಂದ ಹತ್ತು ನಿಮಿಷಗಳ ಕಾಲ ಕೈ ಕೈ ಹಿಡಿದು, ಅಖಂಡ ಮಾನವ ಸರಪಳಿ ನಿರ್ಮಿಸಲಾಗುವುದು. ಶಾಂತಿ, ಸಾಮರಸ್ಯ ಕಾಪಾಡುವ ಪ್ರತಿಜ್ಞೆ ಸ್ವೀಕರಿಸಲಾಗುವುದು. ಬನ್ನಿ, ಎಲ್ಲಡೆ ಸೌಹಾರ್ದ ಸಂದೇಶವನ್ನು ಹರಡೋಣ.



ಇದು ಪಕ್ಷಾತೀತವಾದ ಮಾನವ ಬಂಧುತ್ವ ಬೆಸೆಯುವ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಸೌಹಾರ್ದತೆಯನ್ನು ಬಯಸುವ ಎಲ್ಲ ಜಾತಿ ಮತ, ಧರ್ಮ, ಭಾಷೆಗಳ ಜನರು ಭಾಗವಹಿಸಿ, ಸಹೃದಯತೆಯಿಂದ ಸಹಾಯ ನೀಡಿ ಈ ಶುಭ ಸಂದರ್ಭವನ್ನು ಸ್ಮರಣಾರ್ಹವನ್ನಾಗಿಸಬೇಕೆಂದು ಎಲ್ಲರಲ್ಲಿಯೂ ಕಳಕಳಿಯ ಮನವಿ ಮಾಡುತ್ತಿದ್ದೇವೆ.

ಸಿದ್ಧತಾ ಸಮಿತಿ

ವೀರಭದ್ರ ಚನ್ನಮಲ್ಲ ಸ್ವಾಮೀಜಿ, ನ್ಯಾ. ವಿ. ಗೋಪಾಲ ಗೌಡ, ಡಾ. ಕೆ ಮರುಳಸಿದ್ದಪ್ಪ, ನಾಡೋಜ ಬರಗೂರು ರಾಮಚಂದ್ರಪ್ಪ, ಪ್ರೊ. ಚಂದ್ರಶೇಖರ ಪಾಟೀಲ್ ಕೋ. ಚೆನ್ನಬಸಪ್ಪ, ನ್ಯಾ. ಎಚ್. ನಾಗಮೋಹನದಾಸ್, ಪ್ರೊ. ಅರವಿಂದ ಮಾಲಗತ್ತಿ, ಡಾ. ಜಿ. ರಾಮಕೃಷ್ಣ, ಡಾ. ಕೆ ಶರೀಫಾ, ಪ್ರೊ. ಸುಕನ್ಯಾ ಮರುತಿ, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಪ್ರೊ. ರವಿವರ್ಮ ಕುಮಾರ್, ಅಮೀರ್ ಜಾನ್ ಖಾದ್ರಿ, ಕುಂ. ವೀರಭದ್ರಪ್ಪ.

ಕುಂದಾಪುರ ತಹಶೀಲ್ದಾರ ಕಛೇರಿಗೆ ನಿವೇಶನ ರಹಿತರ ಮುತ್ತಿಗೆ

ವೆಂಕಟೇಶ ಕೋಣಿ

ಸರಕಾರ ಭೂಮಿಯ ಹಕ್ಕು ಕೊಡುವ ಮಾತನ್ನಾಡಿ ಹಕ್ಕು ಕಸಿಯುವ ಯತ್ನ ನಡೆಸುತ್ತಿದೆ. ಪೊಲೀಸ್ ಬಲದಿಂದ ಹೋರಾಟಗಾರರನ್ನು ನಿವೇಶನ ರಹಿತರನ್ನು ಮಣಿಸುವ ಯತ್ನ ನಡೆಸಲಾಗಿದೆ. ಯಾವುದೇ ಸೂಚನೆ ನೀಡದೇ ಬೆಳ್ಳಂಬೆಳಿಗ್ಗೆ ಕಾರ್ಯಾಚರಣೆಗಿಳಿದ ಕಂದಾಯ ಇಲಾಖೆ ಅಸಾಂವಿದಾನಿಕ ಕ್ರಮದಿಂದ ಕಂದಾವರ ಗ್ರಾಮದ 155 ಮತ್ತು ಕೆದೂರು ಗ್ರಾಮದ 24 ಕುಟುಂಬಗಳಿಗೆ ನೆಲೆ ಒದಗಿಸುವ ಕಾರ್ಯ ಮಾಡದೆ ಏಕಾಏಕಿ ಅವರನ್ನು ತೆರವುಗೊಳಿಸಿ ಬೀದಿಗೆ ಅಟ್ಟಿದೆ. ತಾಲೂಕು ಆಡಳಿತದ ಈ ಕ್ರಮದ ವಿರುದ್ಧ ದಿನಾಂಕ : 16 ಜನವರಿ 2018 ರಂದು ಕುಂದಾಪುರ ತಹಶೀಲ್ದಾರ್ ಕಛೇರಿ ಚಲೋ ಹೋರಾಟ ನಡೆಸಲಾಯಿತು. ಅಂದು ಕುಂದಾಪುರ ಶಾಸ್ತ್ರಿ ವೃತ್ತದಿಂದ ನಿವೇಶನ ರಹಿತರ ಬೃಹತ್ ಪ್ರತಿಭಟನಾ ಮೆರವಣಿಗೆಯ ಮೂಲಕ ತಾಲೂಕು ಕಛೇರಿಗೆ ಮುತ್ತಿಗೆ ಹಾಕಲಾಯಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡುತ್ತಾ ಕಂದಾವರ ಮತ್ತು ಕೆದೂರು ಗ್ರಾಮಗಳ ಬಡನಿವೇಶನ ರಹಿತರ ಸುಮಾರು 180 ಕ್ಕೂ ಹೆಚ್ಚು ಶೆಡ್, ಗುಡಿಸಲುಗಳನ್ನು ನೆಲಸಮ ಮಾಡಿರುವುದರಿಂದ ಬೀದಿ ಪಾಲಾದ ಬಡ ಕುಟುಂಬಗಳಿಗೆ ಆರ್ಥಿಕ ಹಾನಿಯಾಗಿದ್ದು, ಈ ಬಗ್ಗೆ ನಷ್ಟ ಪರಿಹಾರವನ್ನು ಸರಕಾರ ಈ ಕೂಡಲೇ ಕೊಡಬೇಕು, ಬಡ ನಿವೇಶನ ರಹಿತ ಅರ್ಹ ಫಲಾನುಭವಿಗಳನ್ನು ಗುರುತಿಸಿ ಭೂಮಿ ಹಕ್ಕು ಪತ್ರ ಕೊಡಲು ಸೂಕ್ತ ಕ್ರಮ ವಹಿಸಬೇಕು. ಈ ಗ್ರಾಮಗಳಲ್ಲಿ ಸರಕಾರಿ ಜಮೀನನ್ನು ಕೆಲವು ಸ್ಥಾಪಿತ ಹಿತಾಸಕ್ತಿ ವ್ಯಕ್ತಿಗಳು ಅಕ್ರಮವಾಗಿ ಸ್ವಾಧೀನತೆ ಹೊಂದಿರುವುದನ್ನು ತೆರವು ಗೊಳಿಸಿ, ನಿವೇಶನ ರಹಿತರಿಗೆ ಭೂಮಿ ಹಕ್ಕು ಪತ್ರ ಮಂಜೂರು ಮಾಡಬೇಕು. ತಾಲೂಕಿನಾದ್ಯಂತ ಪರಿಶಿಷ್ಠ ಜಾತಿ, ಪಂಗಡಗಳಿಗೆ ಮೀಸಲಿಟ್ಟ ಡಿ.ಸಿ. ಮನ್ನಾ ಸ್ಥಳಗಳನ್ನು ಗುರುತಿಸಿ ಮಂಜೂರು ಮಾಡಬೇಕು, ಎಂದು ಆಗ್ರಹಿಸಿದರು.

ಕುಂದಾಪುರ ತಾಲೂಕು ಪಂಚಾಯತ್ ಕಛೇರಿಯಲ್ಲಿ ನಡೆದ ನಿವೇಶನ ಸಭೆಯ ಪಾಲನಾ ವರದಿಯಲ್ಲಿ ಸೂಚಿಸಿದಂತೆ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಸರಕಾರಿ ಜಾಗ/ಖಾಸಗಿ ಜಾಗ ಗುರುತಿಸಲು ಕಂದಾಯ ನಿರೀಕ್ಷಕರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಕಮಿಟಿಯ ಸಭೆಯನ್ನು ಈ ಕೂಡಲೇ ನಡೆಸಲು ಕ್ರಮ ವಹಿಸಬೇಕು ಎಂದು ಸರಕಾರವನ್ನು ಆಗ್ರಹಿಸಿದರು.

ಸಿ.ಪಿ.ಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಹೋರಾಟಕ್ಕೆ ಬೆಂಬಲಿಸಿ ಮಾತನಾಡಿ, ಕ್ಷೇತ್ರದ ಶಾಸಕರು, ಸಂಸದರು ಬಡವರ ಗೋಳನ್ನು ಪರಿಹರಿಸದೇ ನಿರ್ಲಕ್ಷ ತೋರಿದ್ದಾರೆ. ಚುನಾವಣಾ ಸಂದರ್ಭದಲ್ಲಿ ದಲಿತೋದ್ಧಾರದ ಪೊಳ್ಳು ಭರವಸೆಗಳನ್ನು ನೀಡುತ್ತಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತ ಪಡಿಸಿದರು.



ಸರಕಾರದ ವಸತಿ ಸಚಿವರ ಲಿಖಿತ ಆದೇಶದಂತೆ ನಿವೇಶನಕ್ಕಾಗಿ ಖಾಸಗಿ ಜಾಗವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಎಕ್ರೆ ಒಂದರ ರೂಪಾಯಿ 9 ಲಕ್ಷಕ್ಕೆ ಖರೀದಿಸುವುದಕ್ಕೆ ಜಿಲ್ಲಾಧಿಕಾರಿ ಸೂಕ್ತ ಕ್ರಮ ವಹಿಸಬೇಕು. ಹಾಗೂ ಕೃಷಿ ಕೂಲಿಕಾರರ ಸಂಘದ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಖಾಸಗಿ ಜಾಗ ಖರೀದಿಸಲು ಒಟ್ಟು 193.84ಳಿ ಎಕ್ರೆ ಸ್ಥಳವನ್ನು ಜಿಲ್ಲಾ ಮತ್ತು ತಾಲೂಕು ಆಡಳಿತಕ್ಕೆ ಪ್ರಸ್ತಾವನೆಯ ದಾಖಲೆ ಪತ್ರಗಳನ್ನು ಸಲ್ಲಿಸಲಾಗಿದೆ. ಈ ಅರ್ಜಿಯ ಕಡತದ ಕುರಿತು ಈ ಕೂಡಲೇ ಕ್ರಮ ಕೈಕೊಂಡು ಜಾಗ ಖರೀದಿಸಬೇಕು ಎಂದು ನಿವೇಶನ ರಹಿತ ಹೋರಾಟಗಾರರು ಸರಕಾರವನ್ನು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿಯವರು, ಎಲ್ಲಾ ಬೇಡಿಕೆಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಕ್ಕಾಗಿ ಕಂದಾಯ ಇಲಾಖಾಧಿಕಾರಿಗಳು, ಹಾಗೂ ಕೃಷಿ ಕೂಲಿಕಾರರ ಸಂಘದ ಮುಖಂಡರೊಡನೆ ಸಹಾಯಕ ಕಮೀಶನ್‌ರ್ ಅಧ್ಯಕ್ಷತೆಯಲ್ಲಿ ಜಂಟಿ ಸಭೆ ಜರುಗಿಸಲು ದಿನಾಂಕವನ್ನು ನಿಗದಿಗೊಳಿಸಬೇಕು ಎಂದು ಒತ್ತಾಯಿಸಿದರು.

ಮನೆ, ನಿವೇಶನ ರಹಿತರ ಯಶಸ್ವಿ ಹೋರಾಟಕ್ಕೆ ಸಿಐಟಿಯು ಮುಖಂಡರಾದ ಕೆ. ಶಂಕರ್, ಎಚ್. ನರಸಿಂಹ, ಮಹಾಬಲ ವಡೇರ ಹೋಬಳಿ, ಸುರೇಶ್ ಕಲ್ಲಾಗರ, ಹಾಗೂ ಕೃಷಿ ಕೂಲಿಕಾರರ ಸಂಘದ ಮುಂದಾಳು, ನಾಗರತ್ನ ನಾಡ, ಪದ್ಮಾವತಿ ಶೆಟ್ಟಿ, ಶೀಲಾವತಿ, ಕುಶಲ, ಕಾಂಚನಮಾಲ, ರಮೇಶ್ ಗುಲ್ವಾಡಿ, ಕರಿಯ ದೇವಾಡಿಗ, ಸಂತೋಷ ಹೆಮ್ಮಾಡಿ, ಸಿಂಗಾರಿ ನಾವುಂದ, ಕೃಷ್ಣ ಕಂದಾವರ, ಪ್ರಕಾಶ್ ಕೆದೂರು, ಗೋಪಾಲ ಶೆಟ್ಟಿಗಾರ, ಮೊದಲಾದವರು ನೇತೃತ್ವ ವಹಿಸಿದ್ದರು.

ಮನೆ ಕೆಡವಿದ ಅಧಿಕಾರಿಗಳ ವಿರುದ್ಧ ವಿಟ್ಲದಲ್ಲಿ ಪ್ರತಿಭಟನೆ

ವಾಸುದೇವ ಉಚ್ಚಿಲ್

ಬಂಟ್ವಾಳ ತಾಲೂಕು ವಿಟ್ಲ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕೈಂತಿಲ ಎಂಬಲ್ಲಿ ವೆಂಕಟರಮಣ ಭಟ್ಟರ 3.20 ಎಕ್ರೆ ಭೂಮಿಯನ್ನು ದಿ.ಕಾಂತಪ್ಪ ಆಚಾರಿಯವರು 50 ವರ್ಷಗಳಿಗೂ ಮೀರಿ ಗೇಣಿ ಸಾಗುವಳಿ ಮಾಡಿಕೊಂಡು ಬಂದಿದ್ದರು. ಆ ಭೂಮಿಯ ಪಕ್ಕದಲ್ಲಿ 4.20 ಎಕ್ರೆ ಸರಕಾರಿ ಗುಡ್ಡೆ ಭೂಮಿಯಿದ್ದು ಅದರಲ್ಲೂ ಅವರು ಹಾಗೂ ಕುಟುಂಬದವರು ಸಾಕಷ್ಟು ಗೇರು, ಅಡಿಕೆ ಇತರ ಮರಗಳನ್ನು ಬೆಳೆಸಿ ಭೂಮಿ ಅಭಿವೃದ್ಧಿ ಪಡಿಸಿರುತ್ತಾರೆ. ಜಮೀನಿನಲ್ಲಿ ಅವರು ಕಟ್ಟಿಸಿರುವ ಮನೆ ಭಟ್ಟರ ಖಾಸಗಿ ಜಾಗದಲ್ಲಿತ್ತೋ, ಸರಕಾರಿ ಜಾಗದಲ್ಲಿತ್ತೋ ಎಂದು ಸರಿಯಾದ ಸರ್ವೆ ಮಾಡಿದರೆ ತಿಳಿದೀತು. ಭೂಸುಧಾರಣಾ ಕಾಯಿದೆ ಜಾರಿಯಾದಾಗ ಆಚಾರಿ ಕುಟುಂಬದವರು ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದಾಗ, ಮಂಡಳಿ ಪರಿಶೀಲಿಸಿ, ಆಚಾರಿ ಕುಟುಂಬದ ಪರವಾಗಿಯೇ ಭಟ್ಟರ ಮೂಲ ಒಡೆತನದಾಗಿದ್ದ 3.20 ಎಕ್ರೆ ಭೂಮಿಯನ್ನು ಮಂಜೂರು ಮಾಡಿತ್ತು. ಆದರೆ ಧಣಿಗಳ ಪರವಾಗಿ ಅಧಿಕಾರ ಪತ್ರ ಪಡೆದಿದ್ದ ಈಶ್ವರ ಭಟ್ಟ ಎಂಬವರು ದ.ಕ .ಭೂಸುಧಾರಣಾ ಅಪೀಲು ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದಾಗ, ಪ್ರಾಧಿಕಾರವು 19–8–87 ರಲ್ಲಿ ಕಾಂತಪ್ಪ ಆಚಾರಿಯವರಿಗೆ ನೀಡಿದ್ದ ಮಂಜೂರಾತಿಯನ್ನು ರದ್ದುಪಡಿಸಿರುತ್ತದೆ. ಇದರ ವಿರುದ್ಧ ಆಚಾರಿ ಕುಟುಂಬದವರು ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಹೈಕೋರ್ಟು ಆಚಾರಿ ಕುಟುಂಬದವರು ವಾಸವಿದ್ದ ಮನೆಯನ್ನು ತೆರವು ಮಾಡಲು ಆದೇಶ ನೀಡಿದ್ದು, ಈಗ ಒಂದೂವರೆ ವರ್ಷಗಳ ಹಿಂದೆ ದಿ: 12–8–2016 ರಂದು ಕೋರ್ಟು ಅವಮಾನತು ಹಾಗೂ ಪೋಲೀಸರ ಸಮಕ್ಷಮ ದಣಿಗಳು ಆಚಾರಿ ಕುಟುಂಬವನ್ನು ಒಕ್ಕಲೆಬ್ಬಿಸಿ, ಮನೆಯನ್ನು ಕೆಡವಿ ಹಾಕಿದ್ದಾರೆ.

ಬಳಿಕ ಅತಂತ್ರವಾದ ವಾದಿರಾಜ ಆಚಾರಿ ಕುಟುಂಬದವರು ತಾವು ಅಭಿವೃದ್ಧಿಪಡಿಸಿದ 4.20 ಎಕ್ರೆ ಸರಕಾರಿ ಭೂಮಿಯಲ್ಲಿ ಒಂದು ಚಿಕ್ಕ ಮನೆಯನ್ನು ನಿರ್ಮಿಸಿ ವಾಸವಾಗಿದ್ದಾರೆ. ಅಲ್ಲದೆ ಸದ್ರಿ ಅಭಿವೃದ್ಧಿ ಪಡಿಸಿದ ಸರಕಾರಿ ಭೂಮಿಯನ್ನು ತಮಗೆ ಮಂಜೂರು ಮಾಡಬೇಕೆಂದು ಅಕ್ರಮ–ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಹಿಂದಿನ ದಣಿಗಳ ಪರವಾಗಿ ಅಧಿಕಾರ ಪತ್ರ ಹೊಂದಿರುವ ಮಂಗಳೂರಿನ ಪ್ರಭಾವೀ ವಕೀಲರೊಬ್ಬರು ತಮ್ಮ ವಶ ಬಂದಿರುವ ಖಾಸಗಿ ಜಾಗಕ್ಕೆ ಹೊಂದಿಕೊಂಡಿರುವ ಸರಕಾರೀ ಜಾಗವನ್ನು ಕಬ್ಜಾ ಮಾಡುವ ಉದ್ದೇಶದಿಂದ, ಸಂಚು ಹೂಡಿ ವಾದಿರಾಜ ಆಚಾರಿ ಕುಟುಂಬವನ್ನು ಮತ್ತೆ ಮನೆಕಟ್ಟಿರುವ ಸರಕಾರಿ ಜಾಗದಿಂದಲೂ ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದು, ಬಂಟ್ವಾಳ ತಾಲೂಕು ತಹಶೀಲ್ದಾರರು ಸರಕಾರೀ ಜಾಗ ಖಾಲಿ ಮಾಡುವಂತೆ ವಾದಿರಾಜ ಆಚಾರಿಗೆ ನೋಟೀಸು ನೀಡಿದ್ದರು. ಅಲ್ಲದೆ ವಿಟ್ಲ ಪಟ್ಟಣ ಪಂಚಾಯತ್ ಅಧಿಕಾರಿಗೆ ಮನೆ ಖಾಲಿ ಮಾಡಿಸಲು ಆದೇಶ ನೀಡಿದ್ದರು. ಅದರಂತೆ ದಿ:9–1–2018 ರಂದು ವಿಟ್ಲ ಪಟ್ಟಣ ಪಂಚಾಯತ್ ಅಧಿಕಾರಿ ಪೋಲೀಸು ಸಿಬ್ಬಂದಿಯನ್ನು ಕರೆತಂದು, ವಾದಿರಾಜ ಮತ್ತು ಅವರ ಕುಟುಂಬವನ್ನು ಮನೆಯಿಂದ ಹೊರಗೆ ಹಾಕಿ, ಮನೆ ಕೆಡವಿಸಿ ಹಾಕಿದ್ದಾರೆ. ನಾಲ್ವರು ಚಿಕ್ಕಮಕ್ಕಳನ್ನು ಒಳಗೊಂಡ ಈ ಕುಟುಂಬ ಅಕ್ಷರಶ ಬೀದಿಗೆ ಬಿದ್ದಿದೆ. ಮೊದಲೇ ಕೋರ್ಟು ಕಚೇರಿ ಎಂದು ಅಲೆಯುತ್ತಾ ಕಮ್ಮಾರಿಕೆ ಕೆಲಸ ಮಾಡುವ ವಾದಿರಾಜರಿಗೆ ಸರಿಯಾದ ಆದಾಯವಿಲ್ಲ. ಮನೆ ಇಲ್ಲದೆ ಮರದಡಿ ವಾಸಮಾಡಬೇಕಾದುದು ಬೇರೆ.

ಸಿಪಿಐ(ಎಂ) ವಿಟ್ಲ ಶಾಖೆಯ ಸದಸ್ಯರು ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಘಟಕ ಈ ದುಂಡಾವರ್ತಿಯನ್ನು ಪ್ರತಿಭಟಿಸಿ ದಿ:10–1–2018 ರಂದು ವಿಟ್ಲ ಪಟ್ಟಣ ಪಂಚಾಯತ್ ಮುಂದೆ ಪ್ರದರ್ಶನ ಮಾಡಿದಾಗ, ತಾನು ತಹಶೀಲ್ದಾರರ ಆದೇಶ ಜಾರಿ ಮಾಡಿರುವುದಾಗಿ ಮುಖ್ಯಾಧಿಕಾರಿ ತಿಳಿಸಿರುತ್ತಾರೆ.

ಜನವರಿ 11 ರಂದು ವಿಟ್ಲದ ಪಕ್ಷ ಕಾರ್ಯಕರ್ತರು ಬಂಟ್ವಾಳ ತಾಲೂಕು ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೆ ಬಳಿಕ ತಹಶೀಲ್ದಾರರ ವಿರುದ್ಧವೂ ಪೋಲೀಸು ಠಾಣೆಯಲ್ಲಿ ದೂರು ದಾಖಲಿಸಿ, ಕಾನೂನು ಕ್ರಮಕ್ಕೆ ಮುಂದಾಗಿದ್ದಾರೆ. ಅಲ್ಲದೆ ಗ್ರಾಮಸ್ಥರೇ ಸಹಾಯಧನ ಸಂಗ್ರಹಿಸಿ, ವಾದಿರಾಜ ಆಚಾರಿ ಕುಟುಂಬಕ್ಕೆ ಕೆಡವಿದ ಮನೆ ಬಳಿಯೇ ಶ್ರಮದಾನದಿಂದ ಮನೆಕಟ್ಟಿಸಲು ತೊಡಗಿದ್ದಾರೆ.

ಮತೀಯವಾದಿ ಕೊಲೆಗಳ ವಿರುದ್ಧ ಮಂಗಳೂರಿನಲ್ಲಿ ಜಾತ್ಯಾತೀತ ಪಕ್ಷಗಳ ಧರಣಿ ಸತ್ಯಾಗ್ರಹ:

ಜನವರಿ 3 ರಂದು ಮಂಗಳೂರು ನಗರದ ಕಾಟಿಪಳ್ಳ ಎಂಬಲ್ಲಿ ದೀಪಕ್ ರಾವ್ ಎಂಬ ಯುವಕನನ್ನು ಮುಸ್ಲಿಂ ಯುವಕರು ಕೊಂದುದು, ಇದಕ್ಕೆ ಪ್ರತಿಕಾರವೆಂಬಂತೆ ಕೊಟ್ಟಾರ ಎಂಬಲ್ಲಿ ಬಶೀರ್ ಎಂಬ ಮಧ್ಯ ವಯಸ್ಕನ ಮೇಲೆ ಹಿಂದೂತ್ವ ಪಡೆಗಳ ಕೇಡಿಗಳು ಹಲ್ಲೆ ಮಾಡಿದ್ದಾರೆ. ಆತ 4 ದಿನಗಳ ಬಳಿಕ ಮರಣ ಹೊಂದಿದ್ದಾರೆ. ಈ ಕೊಲೆಗಳು ಮಂಗಳೂರಿನಲ್ಲಿ ಹಾಗೂ ದ.ಕ.ಜಿಲ್ಲೆಯಲ್ಲಿ ಮತ್ತೆ ಮತೀಯ ಕ್ಷೋಭೆಗೆ ಕಾರಣವಾಗಿದೆ. ಈ ಪ್ರಕ್ರಿಯೆ ಕೊನೆಗೊಳ್ಳಬೇಕು, ಪೋಲೀಸರು ಕಾನೂನು ಸುವ್ಯವಸ್ಥೆ ಕಾಪಾಡಬೇಕೆಂದು ಆಗ್ರಹಿಸಿ ಜನವರಿ 18 ರಂದು ಜಾತ್ಯಾತೀತ ಪಕ್ಷಗಳು ಮತ್ತು ಸಂಘಟನೆಗಳ ನೇತೃತ್ವದಲ್ಲಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು.

ಸಿಪಿಐ(ಎಂ) ಪಕ್ಷದ ಪರವಾಗಿ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಮುನೀರ್ ಕಾಟಿಪಳ್ಳ, ಸಿಪಿಐ ನಿಂದ ವಿ.ಕುಕ್ಯಾನ್, ಸೀತಾರಾಮ ಬೇರಿಂಜೆ, ಕಾಂಗ್ರೆಸ್ ಪಕ್ಷದಿಂದ ಇಬ್ರಾಹಿಂ ಕೋಡಿಜಾಲ್, ಜನತಾದಳ ಎಸ್‌ನಿಂದ ವಸಂತ ಪೂಜಾರಿ, ಪ್ರವೀಣ್‌ಚಂದ್ರ ಜೈನ್ ಮಾತನಾಡಿದರು. ದಸಂಸದ (ಕೃಷ್ಣಪ್ಪ ಸ್ಥಾಪಿತ) ರಘು ಎಕ್ಕಾರು, ಮಾನವ ಬಂಧುತ್ವ ವೇದಿಕೆಯ ಕೇಶವ ಧರಣಿ ಕೂಡಾ ಧರಣಿಯನ್ನುದ್ದೇಶಿಸಿ ಮಾತನಾಡಿದರು.



ಹಾಸ್ಟೆಲ್ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಧರಣಿ ಎರಡನೇ ದಿನಕ್ಕೆ

ನೇರ ನೇಮಕಾತಿ ಕ್ರಮದಿಂದಾಗಿ ಕೆಲಸ ಕಳೆದು ಕೊಳ್ಳುವ ಆತಂಕಕ್ಕೆ ಒಳಗಾಗಿರುವ ವಿದ್ಯಾರ್ಥಿ ನಿಲಯಗಳ ಎಲ್ಲಾ 'ಡಿ' ವರ್ಗದ ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ, ಸಮಾನ ಕೆಲಸಕ್ಕೆ ಸಮಾನ ವೇತನ, ಇಲಾಖೆಯಿಂದಲೇ ವೇತನ ಪಾವತಿ, ಏಕರೂಪದ ಸೇವಾ ನಿಯಮಾವಳಿ ಹಾಗೂ ಕಾರ್ಮಿಕ ಕಾನೂನುಗಳ ಜಾರಿಗೆ ಒತ್ತಾಯಿಸಿ 18-01-2018 ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭಿಸಿದ ಅನಿರ್ದಿಷ್ಟ ಸಾಮೂಹಿಕ ಧರಣಿ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆ ಕಾಲೇಜುಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಅಡುಗೆ, ಸ್ವಚ್ಛತೆ, ಕಾವಲು ಕಾಯುವುದು ಮುಂತಾದ ಕೆಲಸಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಮಾಡುತ್ತಾ ಬಂದಿರುವ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವಿಭಾಗಗಳಿಗೆ ಸೇರಿರುವ ನೌಕರರು (ಬಹುಸಂಖ್ಯಾತ ಮಹಿಳೆಯರು) ತಮ್ಮ ಸೇವೆಯನ್ನು ಕಾಯಂ ಮಾಡಿ ಗುತ್ತಿಗೆದಾರರ ಶೋಷಣೆಯಿಂದ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದ್ದರು.

ಈ ನಡುವೆ ಸರ್ಕಾರ 'ಡಿ' ವರ್ಗದ 7 ಸಾವಿರ ಹುದ್ದೆಗಳಿಗೆ ನೇರನೇಮಕಾತಿಯ ಮೂಲಕ 10ನೇ ತರಗತಿ ಪಾಸಾದ ಅಭ್ಯರ್ಥಿಗಳನ್ನು ನೇಮಿಸಲು ಮುಂದಾಯಿತು. ಸರ್ಕಾರದ ಈ ಕ್ರಮದಿಂದ ಸದರಿ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳುವ ಅಪಾಯ ಎದುರಾಯಿತು. ಹೊರಗುತ್ತಿಗೆ ನೌಕರರು ಸರ್ಕಾರದ ಕ್ರಮವನ್ನು ತೀವ್ರವಾಗಿ ವಿರೋಧಿಸಿ ಅನೇಕ ಸಲ ಬೆಂಗಳೂರಿಗೆ ಆಗಮಿಸಿ ದಿನಗಟ್ಟಲೆ ಸತ್ಯಾಗ್ರಹ ನಡೆಸಿದರು.

ಈ ಸಂದರ್ಭದಲ್ಲಿ ಇಲಾಖೆಗಳ ಕೆಲವು ಹಿರಿಯ ಅಧಿಕಾರಿಗಳು



ಕಳಕಳಿಯಿಂದ ಏರ್ಪಡಿಸಿದ ದ್ವಿಪಕ್ಷೀಯ ಚರ್ಚೆಗಳಲ್ಲಿ ನಮ್ಮ ಸೇವೆಯ ಕಾಯಮಾತಿಗೆ ಪರ್ಯಾಯವಾಗಿ ಕೆಲವು ಭರವಸೆಗಳನ್ನು ನೀಡಲಾಯಿತು.

(1) ನೇಮಕಾತಿ ನಿಯಮಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸುವುದನ್ನು ಪರಿಶೀಲಿಸುವುದು.
(2) ಅಥವ ಹಾಲಿ ಹೊರಗುತ್ತಿಗೆ ನೌಕರರು ನಿವೃತ್ತಿ ವಯಸ್ಸು ತಲುಪುವ ವರೆಗೆ ಅವರಿಗೆ ಸೇವಾ ಭದ್ರತೆ ನೀಡುವುದು.
(3) ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು.
(4) ಇಲಾಖೆಯಿಂದಲೇ ವೇತನ ಪಾವತಿ ಮಾಡುವುದು.
(5) ಈಗಾಗಲೇ ಒಂದು ಸುತ್ತು ಚರ್ಚಿಸಲಾದ ಏಕರೂಪಿ ಸೇವಾ ನಿಯಮಾವಳಿಗಳನ್ನು ಅಂತಿಮಗೊಳಿಸಿ ಜಾರಿಗೊಳಿಸುವುದು.
(6) ಅನ್ವಯವಾಗುವ ಎಲ್ಲ ಕಾರ್ಮಿಕ ಕಾನೂನುಗಳನ್ನು ಅನುಷ್ಠಾನಗೊಳಿಸುವುದು.

ಇವುಗಳಲ್ಲದೆ ಹೊರಗುತ್ತಿಗೆ ನೌಕರರ ಪರಿಪೂರ್ಣವಾದ ಸೇವಾ ಸಮೀಕ್ಷೆಯಾಗುವ ವರೆಗೂ ಯಾರನ್ನೂ ಕೆಲಸದಿಂದ ತೆಗೆದು ಹಾಕಲಾಗುವುದಿಲ್ಲ ಎಂದೂ ನೇರ ನೇಮಕಾತಿ ಪ್ರಕ್ರಿಯೆಯಿಂದ ಆಯ್ಕೆಯಾದವರೂ ಬಂದರೂ ಹಾಲಿ ಹೊರಗುತ್ತಿಗೆ ನೌಕರರನ್ನು ಹೊರಹಾಕಲಾಗುವುದಿಲ್ಲ ಎಂದೂ ಭರವಸೆ ನೀಡಲಾಗಿತ್ತು.

ಆದರೆ ಮೇಲಿನ ಭರವಸೆಗಳನ್ನು ಈಡೇರಿಸಲು ಕ್ರಮಕೈಗೊಳ್ಳುವ ಮೊದಲೇ ನೇರ ನೇಮಕಾತಿಯಲ್ಲಿ ಆಯ್ಕೆಯಾದವರಿಗೆ ಇದೇ 22-01-2018 ರಂದು ಅರಮನೆ ಮೈದಾನದಲ್ಲಿ ನೇಮಕಾತಿ ಆದೇಶ ನೀಡಲು ವ್ಯವಸ್ಥೆ ಮಾಡಿಕೊಂಡಿರುವುದು ಹೊರಗುತ್ತಿಗೆ ನೌಕರರಲ್ಲಿ ತೀವ್ರ ಆಘಾತವನ್ನು ಉಂಟುಮಾಡಿದೆ.

ಅನಿವಾರ್ಯವಾಗಿ ಅವರು ಮತ್ತೆ ಬೆಂಗಳೂರಿಗೆ ಬಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಮತ್ತೊಮ್ಮೆ ಅನಿರ್ದಿಷ್ಟ ಸಾಮೂಹಿಕ ಧರಣಿ ಆರಂಭಿಸಿದ್ದಾರೆ. ಅಂದು ಸಂಜೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಶ್ರೀ ಆಂಜನೇಯರವರು ಹೋರಾಟನಿರತ ನೌಕರರ ಮುಖಂಡರನ್ನು ವಿಧಾನಸೌಧಕ್ಕೆ ಕರೆಯಿಸಿ ಮಾತುಕತೆ ನಡೆಸಿದರು. ನಿಯೋಗದಲ್ಲಿ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಸಹಕಾರ್ಯದರ್ಶಿ ಕೆ. ಹನುಮೇಗೌಡ, ಅಲ್ಲದೆ ಆಂಜನೇಯ ರೆಡ್ಡಿ, ಜಂಬಯ್ಯ ನಾಯಕ್, ಹುಲುಗಪ್ಪ ಚಲವಾದಿ, ಶಾಂತವ್ವ ಗಡ್ಡಿಯವರ್, ಚಂದ್ರಿಕಾ ಬೆಳಗಾವಿ ಇದ್ದರು. ಆದರೆ ನೌಕರರ ಸೇವಾ ಭದ್ರತೆಯ ಬಗ್ಗೆ ಸಚಿವರು ಸ್ಪಷ್ಟ ತೀರ್ಮಾನ ನೀಡಲಿಲ್ಲ. ಕೇವಲ 10 ವರ್ಷ ಸೇವೆ ಸಲ್ಲಿಸಿರುವ ಹೊರಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕುವುದಿಲ್ಲವೆಂದೂ ಉಳಿದವರಿಗೆ ಸೇವಾ ಭದ್ರತೆ ನೀಡಲು ಸಾಧ್ಯವಿಲ್ಲವೆಂದು ಹೇಳಿದರು. ಸತ್ಯಾಗ್ರಹದ ಸ್ಥಳಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಉಭಯ ಜಂಟಿ ನಿರ್ದೇಶಕರು ಸಚಿವರ ಮಾತುಗಳನ್ನೇ ಪುನರುಚ್ಛರಿಸಿದರು. ಇದರಿಂದ ತೀವ್ರ ಅಸಮಾಧಾನಗೊಂಡ ನೌಕರರು ತಮ್ಮ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದ್ದಾರೆ.

– ಕೆ. ಹನುಮೇಗೌಡ, ಜನವರಿ 19

ರಾಜ್ಯದ ಬಿಜೆಪಿ ಕೇಂದ್ರ ಮಂತ್ರಿಗಳ ಮೇಲೆ ಸ್ಕೀಂ ಕಾರ್ಮಿಕರ ಒತ್ತಡ



ಜನವರಿ 17ರಂದು ಸ್ಕೀಂ (ಅಂಗನವಾಡಿ, ಬಿಸಿಯೂಟ, ಆಶಾ) ಕಾರ್ಮಿಕರ ಒಂದಿನದ ಅಖಿಲ ಭಾರತ ಮುಷ್ಕರ ರಾಜ್ಯದಲ್ಲೂ ಯಶಸ್ವಿಯಾಗಿತ್ತು. ಆದರೆ ಕರ್ನಾಟಕದ ಸ್ಕೀಂ ಕಾರ್ಮಿಕರು ಒಂದು



ಹೆಜ್ಜೆ ಮುಂದೆ ಹೋಗಿ ಮುಷ್ಕರದ ಜತೆಗೆ ರಾಜ್ಯದ ಬಿಜೆಪಿ ಕೇಂದ್ರ ಮಂತ್ರಿಗಳ ಮನೆ ಅಥವಾ ಅಧಿಕೃತ ಕಚೇರಿ ಮುಂದೆ ಪ್ರತಿಭಟನೆ ಮಾಡಿದರು. ರಾಜ್ಯದ ಬಿಜೆಪಿ ಕೇಂದ್ರ ಮಂತ್ರಿಗಳು ಸ್ಕೀಂ ಕಾರ್ಮಿಕರ ಹಕ್ಕೊತ್ತಾಯಗಳನ್ನು ಈಡೇರಿಸಲು ಸರಕಾರದ ಮೇಲೆ ಒತ್ತಡ ಹೇರಬೇಕೆಂದು ಆಗ್ರಹಿಸಿದರು. ಸಾವಿರಾರು ಕಾರ್ಮಿಕರು ಈ ಪ್ರತಿಭಟನೆಗೆ ತಮ್ಮ ಊರು, ಜಿಲ್ಲೆಗಳಿಂದ ಬೆಂಗಳೂರು, ಶಿರಸಿ, ಬಿಜಾಪುರಗಳಿಗೆ ಬಂದು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಕೇಂದ್ರ ಮಂತ್ರಿಗಳ ಮನೆ/ಕಚೇರಿಗಳಿಗೆ ಅವರು ಭಾರೀ ಮೆರವಣಿಗೆಯಲ್ಲಿ ಬಂದು ಸೇರಿದರು.

ಬೆಂಗಳೂರಲ್ಲಿ ಅನಂತ ಕುಮಾರ್ ಮತ್ತು ಸದಾನಂದ ಗೌಡ ಅವರ ಮನೆ/ಕಚೇರಿಗಳ ಮುಂದೆ ನಡೆದ ಧರಣಿ ಪ್ರತಿಭಟನೆಯ ನಾಯಕತ್ವ ವಹಿಸಿ ಎಸ್ ವರಲಕ್ಷ್ಮಿ ಮತು ಮಾಲಿನಿ ಮೆಸ್ತ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಶಿರಸಿಯಲ್ಲಿ ಅನಂತ್ ಕುಮಾರ ಹೆಗಡೆಯ ಮನೆ ಮುಂದೆ ಧರಣಿಯ ನಾಯಕತ್ವವನ್ನು ಸುನಂದ ಎಚ್.ಎಸ್. ಮತ್ತು ಯುಮುನಾ ಗಾಂವ್ಕರ್ ವಹಿಸಿದರು. ಬಿಜಾಪುರದಲ್ಲಿ ರಮೇಶ್ ಜಿಗಜಿಣಗಿ ಮನೆ ಎದುರು ಪ್ರತಿಭಟನೆಯ ನಾಯಕತ್ವವನ್ನು ಶಾಂತಾ ಘಂಟೆ ವಹಿಸಿದರು. ರಮೇಶ್ ಜಿಗಜಿಣಗಿ ಕಾರ್ಮಿಕರನ್ನು ಭೇಟಿ ಮಾಡಿ ಮನವಿ ಸ್ವೀಕರಿಸಿದರು. ಅನಂತ ಕುಮಾರ್ ಮತ್ತು ಸದಾನಂದ ಗೌಡ ಅವರ ಮನೆ/ಕಚೇರಿಗಳಲ್ಲಿ ಉಪಸ್ಥಿತರಿಲ್ಲದಿದ್ದರೂ ಕಾರ್ಮಿಕರ ನಾಯಕತ್ವ ಭೇಟಿ ಮಾಡಲು ದಿನ ನಿಗದಿ ಮಾಡಿದರು. ಆದರೆ ಅನಂತ್ ಕುಮಾರ ಹೆಗಡೆ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸದಿದ್ದಾಗ ಶಿರಸಿಯಲ್ಲಿ ಅನಿರ್ದಿಷ್ಟವಾಗಿ ಧರಣಿ ಮುಂದುವರೆಸಲಾಯಿತು. ನೇರವಾಗಿ ಕಾರ್ಮಿಕರ ಯೂನಿಯನಿಗೆ ಪ್ರತಿಕ್ರಿಯಿಸದಿದ್ದರೂ ಆಪ್ತ ಸಹಾಯಕರ ಮೂಲಕ ಭೇಟಿಗೆ ದಿನ ನಿಗದಿ ಮಾಡಿದ ಮತ್ತು ಮಾಜಿ ಮುಖ್ಯಮಂತ್ರಿ ರಾಜ್ಯ ಬಿಜೆಪಿಯ ಪರವಾಗಿ ಸ್ಕೀಂ ಕಾರ್ಮಿಕರ ಪ್ರತಿನಿಧಿಗಳನ್ನು ಭೇಟಿ ಮಾಡಲು ಒಪ್ಪಿದ ಹಿನ್ನೆಲೆಯಲ್ಲಿ ಎರಡನೇ ಮದ್ಯಾಹ್ನದ ಹೊತ್ತಿಗೆ ಶಿರಸಿಯಲ್ಲಿ ಧರಣಿ ವಾಪಸು ತೆಗೆದುಕೊಳ್ಳಲಾಯಿತು.





ವಿದ್ಯುತ್ ಗುತ್ತಿಗೆ ಕಾರ್ಮಿಕರ ಸಮಾವೇಶ

ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ, ಗುತ್ತಿಗೆ ಕಾರ್ಮಿಕರನ್ನು ಕೂಡಲೇ ಖಾಯಂ ನೌಕರರೆಂದು ಪರಿಗಣಿಸಲು ಒತ್ತಾಯಿಸಿ ಹಾಗೂ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಗುತ್ತಿಗೆ ಕಾರ್ಮಿಕರನ್ನು ವಜಾಗೊಳಿಸುವುದನ್ನು ತಕ್ಷಣ ನಿಲ್ಲಿಸಲು ಆಗ್ರಹಿಸಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಶನಿನ ರಾಜ್ಯ ಸಮಾವೇಶ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನ ಜನವರಿ 18ರಂದು ಹೊಂಬೆಗೌಡ ಕ್ರೀಡಾಂಗಣದಲ್ಲಿ ನಡೆಯಿತು. ಸಾವಿರಾರು ವಿದ್ಯುತ್ ಗುತ್ತಿಗೆ ಕಾರ್ಮಿಕರು ಸಮಾವೇಶದಲ್ಲಿ ಭಾಗವಹಿಸಿದ್ದರು. ವಿದ್ಯುತ್ ಅವಘಡಕ್ಕೆ ಶಾಶ್ವತ ಅಂಗವಿಕಲತೆಗೆ ತುತ್ತಾಗಿರುವ ಗದಗ ಜಿಲ್ಲೆಯ ರೋಣ ತಾಲೂಕಿನ ಬೆಸಹಡಗಲಿಯ ನಾಗಪ್ಪ ಬಾರಕೇರ ಮತ್ತು ಕುಟುಂಬ ಸಮೇತ ಸಮಾವೇಶದಲ್ಲಿ ಭಾಗವಹಿಸಿದ್ದರು. (ಮುಂದಿನ ವಾರ ವಿವರವಾದ ವರದಿ)

ಏರ್ ಪೋರ್ಟ್ ಕಾರ್ಮಿಕರ ಹೋರಾಟ

ಸಿಐಟಿಯು ನೇತೃತ್ವದಲ್ಲಿ ಏರ್ ಪೋರ್ಟ್ ಕಾರ್ಮಿಕರು ಕೆ.ಐ.ಎ.ಎಲ್.ಸರ್ವೀಸ್ ಪ್ರೋವೈಡಿಂಗ್ ಎಂಪ್ಲಾಯಿಸ್ ಯೂನಿಯನ್ ವತಿಯಿಂದ ದಿನಾಂಕ 15-01-2018 ರಿಂದ 19-01-2018ರವರೆಗೆ ಏರ್ ಇಂಡಿಯಾ ಸ್ಯಾಟ್ಸ್ ಕಂಪನಿಯ ಕಾರ್ಮಿಕರು ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ಐದು ದಿನಗಳ ಸಾಂಕೇತಿಕ ಮುಷ್ಕರವು ಎರಡು ದಿನ ಸಾದಹಳ್ಳಿಯ ಟೋಲ್ ಗೇಟ್ ಬಳಿ ಯಶಸ್ವಿಯಾಗಿಸಿ ಉಳಿದ ದಿನ ಅಂದರೆ ಮೂರನೇ ದಿನದಂದು ಮಾನ್ಯ ಕೇಂದ್ರ ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ನಡೆಯಿತು. ಈ ಹೋರಾಟದಲ್ಲಿ ಕಾನೂನು ಸಲಹೆಗಾರರು ಹಾಗೂ ಸಂಘದ ಪ್ರಧಾನ ಕಾರ್ಯದರ್ಶಿ ಎನ್ ಪ್ರತಾಪ್ ಸಿಂಹರವರು ಭಾಗವಹಿದ್ದರು.

ನಮ್ಮ ಮೆಟ್ರೋ ವಿಸ್ತರಣೆಗೆ ಆಗ್ರಹ

ನಮ್ಮ ಮೆಟ್ರೋ ರೈಲ್ವೆ ಪ್ರಯಾಣ ವ್ಯವಸ್ಥೆಯನ್ನು ಬೆಂಗಳೂರಿನ ಕೈಗಾರಿಕಾ ಪ್ರದೇಶಗಳಿಗೆ ಮತ್ತು ಬೆಂಗಳೂರಿನ ರಿಂಗ್ ರಸ್ತೆಯುವರೆಗೂ ವಿಸ್ತರಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಬೆಂ.ದಕ್ಷಿಣ ಜಿಲ್ಲಾ ಸಮಿತಿಯಿಂದ ಮೆಟ್ರೋ ರೈಲ್ವೆ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸುಪ್ರೀಂ ಜಜ್‌ಗಳ ಪತ್ರಿಕಾಗೋಷ್ಠಿ : ವ್ಯವಸ್ಥೆಯ ಭೀಕರ ಸ್ಥಿತಿಯ ಸೂಚಕ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಕ್ಷಿಪ್ರ ಕ್ರಾಂತಿಯನ್ನು ಎಲ್ಲರೂ ಮರೆಯ ಬಯಸುತ್ತಾರೆ. ಅದೊಂದು ಸಣ್ಣ ತಪ್ಪು ತಿಳುವಳಿಕೆ, ಅದು ಇನ್ನೇನು ಬಗೆಹರಿಯಿತು ಎಂದು ಮಾಧ್ಯಮಗಳು ತೇಪೆ ಹಚ್ಚುತ್ತಿವೆ. ಆದರೆ ಈ ನ್ಯಾಯಾಧೀಶರು ತಮ್ಮ ಹೇಳಿಕೆಗಳನ್ನು ವಾಪಸ್ಸು ತೆಗೆದುಕೊಂಡರೂ ಅವರು ಪರೋಕ್ಷವಾಗಿ ಎತ್ತಿದ ಪ್ರಶ್ನೆಗಳು ಅತ್ಯಂತ ಗಂಭೀರ ಸ್ವರೂಪದ್ದಾಗಿವೆ. ನಮ್ಮ ಇಡೀ ವ್ಯವಸ್ಥೆಯು ತಲುಪುತ್ತಿರುವ ಭೀಕರ ಸ್ಥಿತಿಯ ಕಡೆಗೆ ಬೆರಳು ಮಾಡುತ್ತದೆ. .. .. ..ಅಂದಾಜು 12ಜನ ನ್ಯಾಯಾಧೀಶರು ರಾಮಚಂದ್ರಾಪುರ ಮಠದ ಶ್ರೀಗಳ ವಿರುದ್ಧದ ಕೇಸನ್ನು ಆಲಿಸುವುದಿಲ್ಲವೆಂದು ಹಿಂದೆ ಸರಿದದ್ದು ಗಿನ್ನೆಸ್ ದಾಖಲೆಯಾಗಿದೆ. ಹನ್ನೆರಡು ಜನ ನ್ಯಾಯಾಧೀಶರು ಹಿಂದೆ ಸರಿದದ್ದು ನಮ್ಮೆದುರಿಗೇ ನಡೆದಿರುವ ಪವಾಡವಲ್ಲವೆ? ಆದರೆ ನ್ಯಾಯಾಂಗವನ್ನು ಪ್ರಶ್ನಿಸುವಂತಿಲ್ಲ.


ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಾಧೀಶರು ಪತ್ರಿಕಾಗೋಷ್ಠಿಯನ್ನು ನಡೆಸಿದ್ದು ದೇಶದಲ್ಲಿ ದೊಡ್ಡ ಸಂಚಲನವನ್ನು ಉಂಟುಮಾಡಿದೆ. ಅದು ಅನಿರೀಕ್ಷಿತ ಮಾತ್ರವಲ್ಲ. ಕಲ್ಪಿಸಿಕೊಳ್ಳಲು ಬಹಳ ಕಷ್ಟಕರವಾದದ್ದು. ಕಾರಣವೆಂದರೆ ನಮ್ಮ ದೇಶದಲ್ಲಿ ನ್ಯಾಯಾಂಗ ವ್ಯವಸ್ಥೆಯನ್ನು ಒಂದು ಭದ್ರ ಕೋಟೆಯನ್ನಾಗಿ ಮಾಡಲಾಗಿದೆ. ಅಲ್ಲದೆ ಅದು ಟೀಕೆ, ವಿಮರ್ಶೆ ಹಾಗು ಚರ್ಚೆಗಳು ತಟ್ಟದಂಥ ಪವಿತ್ರ ಸಂಸ್ಥೆಯೆಂದು ಬಿಂಬಿಸಲಾಗಿದೆ. ಚಿಕ್ಕಂದಿನಲ್ಲಿ ನಾವು ಕೇಳುತ್ತಿದ್ದ ನ್ಯಾಯಪೀಠದ ಹಾಗೆ ನಮ್ಮ ನ್ಯಾಯಾಲಯಗಳ ಪೀಠಗಳ ಮೇಲೆ ಕುಳಿತ ನ್ಯಾಯಾಧೀಶರು ಅವರು ಹುಟ್ಟಿ ಬೆಳೆದ ಸಮಾಜದ ಬದುಕಿನ ಯಾವ ಪ್ರಭಾವವೂ ಇಲ್ಲದೇ ದೈವೀಶಕ್ತಿಯು ಮೈಯಲ್ಲಿ ಪ್ರವೇಶಿಸಿದಂತೆ ನ್ಯಾಯ ನೀಡುತ್ತಾರೆ. ಎನ್ನುವ ನಂಬಿಕೆಯೂ ನಮ್ಮಲ್ಲಿ ಬಲವಾಗಿದೆ. ವಾಸ್ತವವೆಂದರೆ ನೀವು ಬೆಂಗಳೂರಿನ ಹೈಕೋರ್ಟಿನ ಕಾರಿಡಾರ್‌ಗಳಲ್ಲಿ, ಸುತ್ತಮುತ್ತ ಓಡಾಡುತ್ತ ಅಲ್ಲಿ ಬರುವ ಕಕ್ಷಿದಾರರ ಮಾತುಗಳನ್ನು ಕೇಳಿದರೆ ಈ ಭ್ರಮೆಗಳೆಲ್ಲವೂ ಹೊರಟು ಹೋಗುತ್ತವೆ. ಯಾವ ನ್ಯಾಯಾಧೀಶರ ಎದುರಿಗೆ ಕೇಸು ಬಂದರೆ ಏನಾಗುತ್ತದೆಯೆಂದು ಕರಾರುವಕ್ಕಾಗಿ ಅನೇಕರು ಮಾತನಾಡುತ್ತಿರುತ್ತಾರೆ. ನಾನೇ ಕೇಳಿರುವ ಹಲವಾರು ಇತರ ಸಂಗತಿಗಳನ್ನು ಇಲ್ಲಿ ಬರೆಯಲಾರೆ. ಬರೆದರೆ ನನಗೆ ಜೀವಾವಧಿ ಶಿಕ್ಷೆ ಗ್ಯಾರಂಟಿ.

ವಾಸ್ತವವು ಸರಳವಾಗಿದೆ. ನಾವೆಲ್ಲಾ ನ್ಯಾಯಾಂಗ ವ್ಯವಸ್ಥೆ ನಮ್ಮ ಅಂತಿಮ ಭದ್ರತೆಯೆಂದೂ, ಎಲ್ಲಾ ಅನ್ಯಾಯಗಳಿಗೆ ಪರಿಹಾರ ಕೊಡಿಸುವ ಏಕಮಾತ್ರ ನಂಬಲರ್ಹವಾದ ಸಂಸ್ಥೆಯೆಂದು ನಂಬಿದ್ದೇವೆ. ಇದನ್ನು ನಮ್ಮ ಸರ್ವೋಚ್ಚ ನ್ಯಾಯಾಲಯವು ತನ್ನ ವಸ್ತುನಿಷ್ಠತೆಯಿಂದ ಅನೇಕ ಸಂದರ್ಭಗಳಲ್ಲಿ ಬೆಂಬಲಿಸಿದೆ. ಆದರೆ ಇತ್ತೀಚಿನ ಸರಕಾರಗಳು ನಿರಂತರವಾಗಿ ನ್ಯಾಯಾಂಗದ ಸ್ವಾಯತ್ತತೆಯ ಮೇಲೆ ದಾಳಿ ಮಾಡುತ್ತಲೇ ಇವೆ. ಈಗಿನ ಕೇಂದ್ರ ಸರಕಾರವು ತನ್ನ ನೇರವಾದ ಹಿಡಿತವನ್ನು ಅಥವಾ ತನಗೆ ಬಹುಮತವಿರುವ ಸಂಸತ್ತಿನ ಹಿಡಿತವನ್ನು ನ್ಯಾಯಾಂಗದ ಮೇಲೆ ವಿಸ್ತರಿಸಲು ಪ್ರಯತ್ನ ಮಾಡುತ್ತಲೇ ಇದೆ. ನ್ಯಾಯಾಧೀಶರ ನೇಮಕಾತಿ, ಕೊಲೇಜಿಯಮ್ ನ ವ್ಯವಸ್ಥೆ, ನ್ಯಾಯಾಧೀಶರ ವರ್ಗಾವಣೆ ಇವುಗಳಲ್ಲಿ ನಿರಂತರ ಹಸ್ತಕ್ಷೇಪ ಮಾಡುತ್ತಲೇ ಇದೆ. ಸಚಿವರಾದ ರವಿಶಂಕರ್ ಅವರು ನೇರವಾಗಿಯೇ ಸರಕಾರ ಹಾಗೂ ನ್ಯಾಯಾಂಗವು ಒಂದೇ ದಿಕ್ಕಿನಲ್ಲಿ ಸಾಗಬೇಕೆಂದು ಪ್ರತಿಪಾದಿಸಿದ್ದಾರೆ. ಇದರ ಜೊತೆಗೆ ನನ್ನಂಥ ಸಾಮಾನ್ಯರಿಗೆ ಸಾಬೀತು ಮಾಡಲು ಸಾಧ್ಯವಿಲ್ಲದಿದ್ದರೂ ಸಂಶಯ ಪಡಲು ಪ್ರಬಲವಾದ ಕಾರಣಗಳನ್ನು ಕೊಡುವ ವಿದ್ಯಮಾನಗಳು ನಡೆಯುತ್ತಲೇ ಇವೆ.

ಉದಾಹರಣೆಗೆ ಗುಜರಾತಿನ ಕೋಮು ಹಿಂಸೆಯಲ್ಲಿ ಶ್ರೀ ನರೇಂದ್ರ ಮೋದಿಯವರ ಪಾತ್ರವೇನಾದರೂ ಇತ್ತೆ ಎನ್ನುವುದನ್ನು ಶೋಧಿಸಲು ಸರ್ವೋಚ್ಚ ನ್ಯಾಯಾಲವು ಒಂದು SIT ಯನ್ನು ರಚಿಸಿತು. ಇದರಲ್ಲಿ 3 ಜನ ಸದಸ್ಯರಿದ್ದರು. ಅವರು ಶ್ರೀ ಮೋದಿಯವರಿಗೆ ಕ್ಲೀನ್ ಚಿಟ್ ಕೊಟ್ಟರು ಹಾಗೂ ನ್ಯಾಯಾಲಯವು ಇದನ್ನು ಒಪ್ಪಿಕೊಂಡಿತು. ಆದರೆ ಈ ಮೂವರಿಗೂ ಮೋದಿಯವರ ಸರಕಾರವು ಆಮೇಲೆ ಅತ್ಯುನ್ನತ ಸ್ಥಾನಗಳನ್ನು ಕೊಟ್ಟಿತು. ಇದು ಕೇವಲ ಕಾಕತಾಳೀಯ ಎಂದು ಯಾವ ಮೂರ್ಖನು ಒಪ್ಪುವುದಿಲ್ಲ. ಈ ರೀತಿ ಅವರಿಗೆ "ಪ್ರತಿಫಲವನ್ನು" ನೀಡಲಾಗುತ್ತದೆ. ಎಂದು ಖಂಡಿತವಾಗಿ ಯಾರೋ ತಿಳಿಸಿರಲೇಬೇಕು. ಹೀಗೆ ಫಲಾನುಭವಿಗಳಾಗಿರುವ ನ್ಯಾಯಾಧೀಶರ ಪಟ್ಟಿಯೇ ಇದೆ. ಹಾಗಿದ್ದರೆ ಈ SIT ಸುಳ್ಳು ವರದಿಯನ್ನು ಈ ಕಾರಣಕ್ಕಾಗಿ ಕೊಟ್ಟಿದೆಯೆನ್ನುವುದು ಸ್ಪಷ್ಟವಲ್ಲವೆ?

ಆದರೆ ನ್ಯಾಯಾಂಗವನ್ನು ಪ್ರಶ್ನಿಸುವುದು ಬ್ರಾಹ್ಮಣ ಹತ್ಯೆಗಿಂತಲೂ ಘೋರ ಪಾಪವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋಮು ಹಿಂಸೆಯಲ್ಲಿ ತೊಡಗಿದವರನ್ನು ಒಂದು "ಗಂಟೆಯಲ್ಲಿಯೇ" ಬೇಲ್ ಕೊಡಿಸಿದೆ ಎಂದು ಅಲ್ಲಿಯ ಸಂಸದರು ಸಾರ್ವಜನಿಕವಾಗಿಯೇ ಹೇಳಿದರು. ಕೊಡಿಸಿದರು ಅಂದರೆ ಏನು? ಕೊಟ್ಟವರು ಯಾಕೆ ಕೊಟ್ಟರು? ಆದರೆ ನ್ಯಾಯಾಂಗವನ್ನು ಪ್ರಶ್ನಿಸುವಂತಿಲ್ಲ. ಅಂದಾಜು 12 ಜನ ನ್ಯಾಯಾಧೀಶರು ರಾಮಚಂದ್ರಾಪುರ ಮಠದ ಶ್ರೀಗಳ ವಿರುದ್ಧದ ಕೇಸನ್ನು ಆಲಿಸುವುದಿಲ್ಲವೆಂದು ಹಿಂದೆ ಸರಿದದ್ದು (recuse ಮಾಡಿಕೊಂಡಿದ್ದು) ಗಿನ್ನೆಸ್ ದಾಖಲೆಯಾಗಿದೆ. ಈ ನ್ಯಾಯಾಧೀಶರು ತಮ್ಮ ವೃತ್ತಿಗೇ ರಾಜೀನಾಮೆ ಕೊಡಬಹುದಿತ್ತಲ್ಲ? ಒಂದು ಕೇಸನ್ನು ಕೇಳದವರು ಇನ್ನೊಂದು ಕೇಸನ್ನು ಕೇಳುವ ನೈತಿಕ ಹಕ್ಕನ್ನು ಹೊಂದಿರುತ್ತಾರೆಯೆ? recuse ಮಾಡಿಕೊಳ್ಳುವುದು ಕಾನೂನಿನ ಪ್ರಕಾರವೇ ಇದೆ. ಆದರೆ ಹನ್ನೆರಡು ಜನ ನ್ಯಾಯಾಧೀಶರು **recuse** ಮಾಡಿಕೊಳ್ಳುವುದು ನಮ್ಮೆದುರಿಗೇ ನಡೆದಿರುವ ಪವಾಡವಲ್ಲವೆ? ಆದರೆ ನ್ಯಾಯಾಂಗವನ್ನು ಪ್ರಶ್ನಿಸುವಂತಿಲ್ಲ.

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಕ್ಷಿಪ್ರ ಕ್ರಾಂತಿಯನ್ನು ಎಲ್ಲರೂ ಮರೆಯ ಬಯಸುತ್ತಾರೆ. ಅದೊಂದು ಸಣ್ಣ ತಪ್ಪು ತಿಳುವಳಿಕೆ, ಅದು ಇನ್ನೇನು ಬಗೆಹರಿಯಿತು ಎಂದು ಮಾಧ್ಯಮಗಳು ತೇಪೆ ಹಚ್ಚುತ್ತಿವೆ. ಆದರೆ ಈ ನ್ಯಾಯಾಧೀಶರು ತಮ್ಮ ಹೇಳಿಕೆಗಳನ್ನು ವಾಪಸ್ಸು ತೆಗೆದುಕೊಂಡರೂ ಅವರು ಪರೋಕ್ಷವಾಗಿ ಎತ್ತಿದ ಪ್ರಶ್ನೆಗಳು ಅತ್ಯಂತ ಗಂಭೀರ ಸ್ವರೂಪದ್ದಾಗಿವೆ. ನಮ್ಮ ಇಡೀ ವ್ಯವಸ್ಥೆಯು ತಲುಪುತ್ತಿರುವ ಭೀಕರ ಸ್ಥಿತಿಯ ಕಡೆಗೆ ಬೆರಳು ಮಾಡುತ್ತದೆ. ಅವರು ಎತ್ತಿದ ಮುಖ್ಯ ಸಮಸ್ಯೆಯೆಂದರೆ ಕೆಲವು ಅತ್ಯಂತ ಮುಖ್ಯ (ಅಂದರೆ ಅವುಗಳ ಪರಿಣಾಮದಲ್ಲಿ) ಕೇಸುಗಳನ್ನು ಹಿರಿಯ ನ್ಯಾಯಾಧೀಶರನ್ನು ಹೊರಗಿಟ್ಟು ಇತರರಿಗೆ ಕೊಡಲಾಗುತ್ತಿದೆಯೆನ್ನುವುದು ಆ ಪ್ರಕರಣಗಳ ಪಟ್ಟಿಯನ್ನು ನೋಡಿದರೆ ಇದು ನಿಜವೇ ಆಗಿದೆ. ಯಾವ ಆಧಾರದ ಮೇಲೆ ಹೇಗೆ ಮಾಡಲಾಯಿತು ಎನ್ನುವುದಕ್ಕೆ ಸರಿಯಾದ ಉತ್ತರಗಳಿಲ್ಲ. ವಿಶೇಷವಾಗಿ ಅಮಿತ್ ಶಾ ಅವರ ಕೇಸು ಖುಲಾಸೆ ಆಗುವವರೆಗೆ ಅದು ಓಡಾಡಿದ ಬಗೆಯನ್ನು ನೋಡಿದವರಿಗೆ ಇದರ ಹಿಂದೆ ಭೀಕರ ವಾಸ್ತವವೊಂದಿದೆ ಎಂದು ಸಂಶಯ ಬಂದೇ ಬರುತ್ತದೆ. ಏಕೆಂದರೆ ಅವರು ನಿರಪರಾಧಿಗಳೇ ಆಗಿದ್ದರೆ ಇಂಥ ಅವಸರವೇಕೆ? ನ್ಯಾಯಾಧೀಶರ ಬದಲಾವಣೆ ಏಕೆ? ಒಂದು ವೇಳೆ ಅವರು ಅಪರಾಧಿಯೇ ಆಗಿದ್ದರೆ ಇಡೀ ಭಾರತದ ರಾಜಕೀಯ ವ್ಯವಸ್ಥೆಯನ್ನು, ಚುನಾವಣೆಗಳನ್ನು ನಿಯಂತ್ರಿಸುತ್ತಿರುವ ವ್ಯಕ್ತಿ ಅವರು ಹಾಗೂ ಅವರನ್ನು ಉಳಿಸಲು ನಾವು ಕಲ್ಪಿಸಿಕೊಳ್ಳಲೂ ಆಗದಿದ್ದುದು ಆಗಿರಬಹುದು ಎನ್ನುವ ಸಂಶಯ ಬರುವುದಿಲ್ಲವೆ? ●



ಸರ್ವೋಚ್ಚ ನ್ಯಾಯಾಲಯದಲ್ಲಿ ಗುಡುಗಿನ ಸದ್ದು



ಸುಪ್ರಿಂ ಕೋರ್ಟಿನ ನಾಲ್ಕು ಅತ್ಯಂತ ಹಿರಿಯ ನ್ಯಾಯಾಧೀಶರುಗಳು ನ್ಯಾಯಾಂಗದ ಸಮಗ್ರತೆ ಮತ್ತು ಸ್ವಾತಂತ್ರ್ಯದ ಮೇಲೆ ಪ್ರಭಾವ ಬೀರುವ ಬಹಳ ಗಹನವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಇವನ್ನು ಚಾಪೆಯ ಅಡಿಗೆ ತಳ್ಳಿಬಿಟ್ಟು ಸುಪ್ರಿಂ ಕೋರ್ಟಿನಲ್ಲಿ ಸಾಮಾನ್ಯಸ್ಥಿತಿ ಮತ್ತು ಶಾಂತಿ ಮತ್ತೆ ನೆಲೆಗೊಂಡಿದೆ ಎಂದು ಸಾರುವುದು ಸರಿಯೆನಿಸುವುದಿಲ್ಲ. ಹಿರಿಯ ನ್ಯಾಯಾಧೀಶರುಗಳ ಮಂಡಳಿ (ಕೊಲೇಜಿಯಂ) ಮತ್ತು ನ್ಯಾಯಾಲಯದ ನ್ಯಾಯಾಧೀಶರುಗಳೆಲ್ಲ ಒಟ್ಟಾಗಿ ಇಲ್ಲಿರುವ ಪ್ರಶ್ನೆಗಳನ್ನು ಪ್ರಜಾಸತ್ತಾತ್ಮಕ ಮತ್ತು ಪಾರದರ್ಶಕ ನೆಲೆಯಲ್ಲಿ ಚರ್ಚಿಸುತ್ತಾರೆ ಮತ್ತು ಪರಿಹರಿಸುತ್ತಾರೆ ಎಂದು ಆಶಿಸಬೇಕಾಗಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಮೂಲಭೂತ ಸುಧಾರಣೆಗಳ ಅಗತ್ಯವಂತೂ ಇದೆ.



ಪ್ರಕಾಶ ಕಾರಟ್

ಸರ್ವೋಚ್ಚ ನ್ಯಾಯಾಲಯದ ನಾಲ್ವರು ಹಿರಿಯ ನ್ಯಾಯಾಧೀಶರು ಜನವರಿ 12ರಂದು ನಡೆಸಿದ ಪತ್ರಿಕಾ ಸಮ್ಮೇಳನ ಭಾರತದ ನ್ಯಾಯಾಂಗ ಇತಿಹಾಸದಲ್ಲೇ ಅಭೂತಪೂರ್ವ. ನ್ಯಾಯಮೂರ್ತಿಗಳಾದ ಜೆ.ಚಲಮೇಶ್ವರ್, ರಂಜನ್ ಗೊಗೊಯ್, ಮದನ್ ಬಿ ಲೊಕುರ್ ಮತ್ತು ಕುರಿಯನ್ ಜೋಸೆಫ್ ಮುಖ್ಯ ನ್ಯಾಯಾಧೀಶರ ನಂತರ ಅತ್ಯಂತ ಹಿರಿಯ ನ್ಯಾಯಾಧೀಶರುಗಳು ಮತ್ತು ನ್ಯಾಯಾಲಯದ ಸರ್ವೋಚ್ಚ ಸಮಿತಿಯಾದ ಐವರು ಸದಸ್ಯರಿರುವ ನ್ಯಾಯಾಧೀಶರ ಮಂಡಳಿ(ಕೊಲೇಜಿಯಂ)ಯ ಸದಸ್ಯರು. ಇವರು ಮುಖ್ಯ ನ್ಯಾಯಾಧೀಶರು ಮೊಕದ್ದಮೆಗಳನ್ನು ಹಂಚುವುದು ಮತ್ತು ನ್ಯಾಯಪೀಠಗಳ ರಚನೆಗೆ ಸಂಬಂಧಪಟ್ಟ ಆಡಳಿತ ವಿಚಾರಗಳಲ್ಲಿ ವ್ಯವಹರಿಸುತ್ತಿರುವ ರೀತಿಯ ಬಗ್ಗೆ ದೂರು ನೀಡುವ ಅತ್ಯಂತ ವಿಶಿಷ್ಟ ಕ್ರಮವನ್ನು ಕೈಗೊಂಡರು.

ಈ ನಾಲ್ವರು ನ್ಯಾಯಾಧೀಶರು ಎರಡು ತಿಂಗಳ ಹಿಂದೆ ಮುಖ್ಯ ನ್ಯಾಯಾಧೀಶರಿಗೆ ಬರೆದಿದ್ದ ಪತ್ರವನ್ನೂ ತೋರಿಸಿದರು. ಇದರಲ್ಲಿ ಅವರು ತಮ್ಮ ಅಹವಾಲುಗಳನ್ನು ವ್ಯಕ್ತಪಡಿಸಿದ್ದರು ಮತ್ತು ಕೊಲೆಜಿಯಂ ಆಗಲೇ ನಿರ್ಧರಿಸಿದ ಮೆಮೊರಂಡಂ ಆಫ್ ಪ್ರೊಸಿಜರ್ (ಎಂಒಪಿ–ಕಾರ್ಯವಿಧಾನ ಪತ್ರ) ಬಗ್ಗೆ ಒಂದು ತೀರ್ಪು ನೀಡಿದ ಪ್ರಕರಣವನ್ನು ಅದರಲ್ಲಿ ಉದಾಹರಣೆಯಾಗಿ ನೀಡಲಾಗಿದೆ. ಈ ಪತ್ರ “ತಮ್ಮ ಇಷ್ಟದ ಪೀಠಗಳ’ ರಚನೆಯ ಬಗ್ಗೆಯೂ ಅವರು ಯಾರೆಂದು ಸ್ಪಷ್ಟವಾಗಿ ನಮೂದಿಸದೆ ಹೇಳಲಾಗಿದೆ ಎಂಬುದು ಮಹತ್ವದ ಸಂಗತಿ.

ಈ ಹಿರಿಯ ನ್ಯಾಯಾಧೀಶರುಗಳು ನ್ಯಾಯಾಂಗದ ಸಮಗ್ರತೆ ಮತ್ತು ಸ್ವಾತಂತ್ರ್ಯದ ಮೇಲೆ ಪ್ರಭಾವ ಬೀರುವ ಬಹಳ ಗಹನವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಅನುಭವವೇದ್ಯ ಪುರಾವೆಗಳು ಅವರ ಆತಂಕಕ್ಕೆ ಕಾರಣವನ್ನು ದೃಢಪಡಿಸುತ್ತಿವೆ. ಉದಾಹರಣೆಗೆ, ಅಯೋಧ್ಯಾ ಪ್ರಕರಣ, ಮತ್ತು ಆಧಾರ್ ಪ್ರಕರಣದಂತಹ ಹಲವು ಪ್ರಮುಖ ಪ್ರಕರಣಗಳಲ್ಲಿ ಈ ನಾಲ್ವರಲ್ಲಿ ಯಾರೂ ಪೀಠದಲ್ಲೆ ಸ್ಥಾನ ಪಡೆದಿಲ್ಲ, ಇನ್ನು ಆ ಪೀಠಗಳ ಮುಖ್ಯಸ್ಥರಾಗಿರುವುದಂತೂ ದೂರದ ಮಾತು. ಆಧಾರ್ ಮೊಕದ್ದಮೆಯಲ್ಲಿ ಅದನ್ನು ಸಂವಿಧಾನ ಪೀಠಕ್ಕೆ ಕಳಿಸಬೇಕು ಎಂದು ಶಿಫಾರಸು ಮಾಡಿದ್ದೇ ನ್ಯಾ.ಚಲಮೇಶ್ವರ್ ಅವರು ಮುಖ್ಯಸ್ಥರಾಗಿದ್ದ ಒಂದು ಪೀಠ. ಆದರೂ ಐವರು ನ್ಯಾಯಾಧೀಶರ ಸಂವಿಧಾನ ಪೀಠವನ್ನು ರಚಿಸಿದಾಗ ಚಲಮೇಶ್ವರ್ ಸೇರಿದಂತೆ ಆ ಪೀಠದ ಯಾರೂ ಅದರಲ್ಲಿ ಸ್ಥಾನ ಪಡೆಯಲಿಲ್ಲ.

ನ್ಯಾ. ಲೋಯ ಪ್ರಕರಣವನ್ನು ನ್ಯಾ..ಅರುಣ್ ಮಿಶ್ರ ಮುಖ್ಯಸ್ಥರಾಗಿರುವ ಹತ್ತನೇ ಪೀಠಕ್ಕೆ ಒಪ್ಪಿಸಿದ್ದು ಮೊಕದ್ದಮೆಗಳ ಸರದಿ ಪಟ್ಟಿ ಮತ್ತು ಪೀಠಗಳ ಸಂಯೋಜನೆಯನ್ನು ನಿರ್ಧರಿಸುವಲ್ಲಿ ಒಂದು ಉದ್ದೇಶಪೂರ್ವಕವಾದ ನಮೂನೆ ಇದೆ ಎಂಬ ಹಿರಿಯ ನ್ಯಾಯಾಧೀಶರುಗಳ ಸಂದೇಹವನ್ನು ದೃಢಪಡಿಸಿದೆಯಷ್ಟೇ.

ವ್ಯಂಗ್ಯಚಿತ್ರ: ಸಂದೀಪ್ ಆಧ್ವರ್ಯು, ಟೈಂಸ್ ಆಫ್ ಇಂಡಿಯ



ಈ ನಾಲ್ವರು ಅತ್ಯಂತ ಹಿರಿಯ ನ್ಯಾಯಾಧೀಶರುಗಳ ಬಗ್ಗೆ ಇರುವ ನಿಲುವು ಪತ್ರಿಕಾಸಮ್ಮೇಳನ ನಡೆದ ಮೂರು ದಿನಗಳ ನಂತರ, ಜನವರಿ 15 ರಂದು, ಸಲಿಂಗತೆಯನ್ನು ಕ್ರಿಮಿನಲ್‌ಗೊಳಿಸಬಾರದೆಂಬ (ಸೆಕ್ಷನ್377) ಮೊಕದ್ದಮೆ ಮತ್ತು ಶಬರಿಮಲೆ ದೇವಸ್ಥಾನದಲ್ಲಿ ಮಹಿಳೆಯರಿಗೆ ಪ್ರವೇಶ ಕುರಿತ ಮೊಕದ್ದಮೆ ಸೇರಿದಂತೆ ಏಳು ಪ್ರಕರಣಗಳ ವಿಚಾರಣೆಗೆ ಸಂವಿಧಾನ ಪೀಠವನ್ನು ಪ್ರಕಟಿಸಿದಾಗ ಮತ್ತೊಮ್ಮೆ ವಿದಿತವಾಯಿತು. ಮುಖ್ಯ ನ್ಯಾಯಾಧೀಶರ ನೇತರತ್ವದ ಪೀಠದಲ್ಲಿ ಈ ನಾಲ್ವರಲ್ಲಿ ಯಾರನ್ನೂ ಸೇರಿಸಲಿಲ್ಲ.

ಇದು ದೇಶದ ಅತ್ಯುನ್ನತ ನ್ಯಾಯಾಲಯ ಎದುರಿಸುತ್ತಿರುವ ಅತ್ಯಂತ ಗಂಭೀರ ಬಿಕ್ಕಟ್ಟು ಎನ್ನುವದರಲ್ಲಿ ಸಂದೇಹವೇನೂ ಇಲ್ಲ. ಇದು ಸಮಸ್ತ ನ್ಯಾಯಾಂಗ ವ್ಯವಸ್ಥೆ ವಿವಿಧ ಸೆಳೆತಗಳು ಮತ್ತು ಒತ್ತಡಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಬರುತ್ತಿದೆ. ಒಂದು ಪ್ರಧಾನ ಬೆದರಿಕೆಯೆಂದರೆ ಕಾರ್ಯಾಂಗ ಉನ್ನತ ನ್ಯಾಯಾಂಗದಲ್ಲಿ ಹಸ್ತಕ್ಷೇಪ ನಡೆಸಲು ಮಾಡುತ್ತಿರುವ ಪ್ರಯತ್ನಗಳು. ಕಳೆದ ಒಂದೂವರೆ ವರ್ಷಗಳಲ್ಲಿ ಮೋದಿ ಸರಕಾರ ‘ಕಾರ್ಯವಿಧಾನ ಪತ್ರ’(ಎಂಒಪಿ)ದಲ್ಲಿ ಕೆಲವು ಕಲಮುಗಳನ್ನು ಸೇರಿಸಬೇಕೆಂದು ಆಗ್ರಹಿಸುವ ಮೂಲಕ ಸುಪ್ರಿಂ ಕೋರ್ಟಿನ ನೇಮಕಗಳನ್ನು ಪರೀಕ್ಷಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಪಡೆಯಲು ಪ್ರಯತ್ನಿಸುತ್ತಿದೆ. ಇವುಗಳಲ್ಲಿ ಒಂದು ಎಂದರೆ ಕೊಲೇಜಿಯಂ (ಹಿರಿಯ ನ್ಯಾಯಾಧೀಶರ ಮಂಡಳಿ) ನ್ಯಾಯಾಧೀಶರೆಂದು ನೇಮಿಸಲು ಹೆಸರುಗಳನ್ನು ಕಳಿಸಿದ ಮೇಲೆ ಅವುಗಳ ರಾಷ್ಟ್ರೀಯ ಭದ್ರತಾ ಪರೀಕ್ಷಣೆ ನಡೆಸಬೇಕು ಎನ್ನುವುದು. ಕಾರ್ಯಾಂಗ ತಳೆಯುವ ಒತ್ತಡ ತಂತ್ರಗಳಿಂದಾಗಿ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ಎಲ್ಲ ಅಪಾಯಗಳೂ ಇವೆ.


ಇಲ್ಲಿ ಅಡಕವಾಗಿರುವ ಗಂಭೀರ ಪ್ರಶ್ನೆಗಳನ್ನು ನೋಡಿದಲ್ಲಿ, ಇವನ್ನು ಚಾಪೆಯ ಅಡಿಗೆ ತಳ್ಳಿಬಿಟ್ಟು ಸುಪ್ರಿಂ ಕೋರ್ಟಿನಲ್ಲಿ ಸಾಮಾನ್ಯಸ್ಥಿತಿ ಮತ್ತು ಶಾಂತಿ ಮತ್ತೆ ನೆಲೆಗೊಂಡಿದೆ ಎಂದು ಸಾರುವುದು ಸರಿಯೆನಿಸುವುದಿಲ್ಲ. ಹಿರಿಯ ನ್ಯಾಯಾಧೀಶರುಗಳ ಮಂಡಳಿ (ಕೊಲೇಜಿಯಂ) ಮತ್ತು ನ್ಯಾಯಾಲಯದ ನ್ಯಾಯಾಧೀಶರುಗಳೆಲ್ಲ ಒಟ್ಟಾಗಿ ಇಲ್ಲಿರುವ ಪ್ರಶ್ನೆಗಳನ್ನು ಪ್ರಜಾಸತ್ತಾತ್ಮಕ ಮತ್ತು ಪಾರದರ್ಶಕ ನೆಲೆಯಲ್ಲಿ ಚರ್ಚಿಸುತ್ತಾರೆ ಮತ್ತು ಪರಿಹರಿಸುತ್ತಾರೆ ಎಂದು ಆಶಿಸಬೇಕಾಗಿದೆ.

ಅಂತಿಮವಾಗಿ, ನ್ಯಾಯಾಂಗ ವ್ಯವಸ್ಥೆಯಲ್ಲಿ ಮೂಲಭೂತ ಸುಧಾರಣೆಗಳ ಅಗತ್ಯವಂತೂ ಇದೆ. ಅವುಗಳಲ್ಲಿ ಒಂದು, ಉನ್ನತ ನ್ಯಾಯಾಂಗದಲ್ಲಿ ನೇಮಕಗಳು ಮತ್ತು ಉಸ್ತುವಾರಿಯ ಪ್ರಶ್ನೆ. ಸಂಸತ್ತು ಅಂಗೀಕರಿಸಿದ ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗ (ಎನ್‌ಜೆಎಸಿ)ವನ್ನು ಸುಪ್ರಿಂ ಕೋರ್ಟ್ ಅಸಂವಿಧಾನಿಕ ಎಂದು ತಳ್ಳಿ ಹಾಕಿದೆ. ನ್ಯಾಯಾಧೀಶರುಗಳ ನೇಮಕದ ಕೊಲೆಜಿಯಂ ವ್ಯವಸ್ಥೆ ತೃಪ್ತಿದಾಯಕವಾಗಿಲ್ಲ, ಅದನ್ನು ಬದಲಿಸಬೇಕಾಗಿದೆ. ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗದಲ್ಲಿದ್ದ ಕೊರತೆಯೆಂದರೆ ಅದರಲ್ಲಿ ಕಾರ್ಯಾಂಗಕ್ಕೆ ಹೆಚ್ಚಿನ ಅಧಿಕಾರ ನಡೆಸುವ ಅವಕಾಶವಿತ್ತು. ಸಿಪಿಐ(ಎಂ) ಪ್ರಜಾಪ್ರಭುತ್ವವಾದಿ ವಕೀಲರ ಸಂಘಟನೆಗಳೊಡಗೂಡಿ ಒಂದು ಹೆಚ್ಚು ವಿಶಾಲ ನೆಲೆಯ ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗ ರಚಿಸಬೇಕು, ಇದು ನೇಮಕಗಳು ಮಾತ್ರವಲ್ಲ, ನ್ಯಾಯಾಧೀಶರುಗಳ ವರ್ತನೆಗಳ ಬಗ್ಗೆ ದೂರುಗಳನ್ನು ಕೂಡ ನಿರ್ವಹಿಸುವಂತದ್ದಾಗಿರಬೇಕು ಎಂದು ಪ್ರತಿಪಾದಿಸುತ್ತ ಬಂದಿದೆ.

ಇಸ್ರೇಲಿ ಪ್ರಧಾನ ಮಂತ್ರಿ ಭೇಟಿ ವಿರುದ್ಧ ಎಡಪಕ್ಷಗಳ ಪ್ರತಿಭಟನೆ

ಪುಟ 2 ರಿಂದ


ಪ್ರಕಾಶ್ ಕಾರಟ್ ಅವರು ಮಾತಾಡುತ್ತ ನರೇಂದ್ರ ಮೋದಿ ಮತ್ತು ನೆತನ್ಯಾಹು ಸೈದ್ಧಾಂತಿಕ ಸಮಾನ ಮನಸ್ಕರು–ಒಬ್ಬರು ಉಗ್ರ ಬಲಪಂಥೀಯ ಯೆಹೂದಿ ರಾಷ್ಟ್ರವಾದವನ್ನು ಪ್ರತಿನಿಧಿಸಿದರೆ, ಇನ್ನೊಬ್ಬರು ಬಲಪಂಥೀಯ ಹಿಂದುತ್ವ ರಾಷ್ಟ್ರವಾದದ ಪ್ರತಿಪಾದಕರು. ಎಂದು ವರ್ಣಿಸಿದರು. ನರೇಂದ್ರ ಮೋದಿಯವರಿಗೆ ನೆತನ್ಯಾಹು ಬಹಳ ಪ್ರಿಯ ವ್ಯಕ್ತಿ. ಆದರೆ ಈತ ತನ್ನ ದೇಶದಲ್ಲಿ ಭ್ರಷ್ಟಾಚಾರದ ಆಪಾದನೆ ಎದುರಿಸುತ್ತಿದ್ದಾರೆ, ಆತ ಇಸ್ರೇಲಿಗೆ ಹಿಂದಿರುಗುವಾಗ ಬಹುಶಃ ಈ ಬಗ್ಗೆ ವಿಚಾರಣೆ ಆರಂಭಾಗಿರುತ್ತದೆ ಎಂದ ಪ್ರಕಾಶ್ ಕಾರಟ್ ಭಾರತ ಈಗ ಇಸ್ರೇಲಿನ ಶಸ್ತ್ರಾಸ್ತ್ರಗಳ ಅತ್ಯಂತ ದೊಡ್ಡ ಖರೀದಿದಾರರಲ್ಲಿ ಒಂದು, ಮೋದಿಯವರು ಭಾರತವನ್ನು ಇಸ್ರೇಲಿನ ಸಾಮರಿಕ ಪಾಲುದಾರನಾಗಿ ಮಾಡಬಯಸುತ್ತಿದ್ದಾರೆ ಎಂದರು.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಬಿಜೆಪಿಯ ಈ ಇಸ್ರೇಲಿ–ಪರ ನಿಲುವಿಗೆ ತದ್ವಿರುದ್ಧವಾಗಿ ಭಾರತ ಸದಾ ಪ್ಯಾಲೆಸ್ತೀನ್ ಪರ ನಿಂತು, ಇಸ್ರೇಲಿ ಆಕ್ರಮಣದ ವಿರುದ್ಧ ಸೌಹಾರ್ದ ವ್ಯಕ್ತಪಡಿಸುತ್ತ ಬಂದಿದೆ. ಈ ನೀತಿಬದ್ಧ ನಿಲುವಿನ ಮೂಲವನ್ನು ಬಹಳ ವರ್ಷಗಳ ಹಿಂದೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರಲ್ಲೇ ಕಾಣಬಹುದು. ಇಸ್ರೇಲಿಗಳು ಪ್ಯಾಲೆಸ್ತೀನ್‌ನಲ್ಲಿ ಅರಬರ ಅನುಮತಿಯಿಂದಲಷ್ಟೇ ನೆಲೆಸಬಹುದು, ಅವರು ಬ್ರಿಟಿಶರ ಬಂದೂಕಿನ ಶಕ್ತಿಯಿಂದ ಪ್ರವೇಶಿಸುವುದು ತಪ್ಪು ಎಂದಿದ್ದರು ಎಂದು ಪ್ರಕಾಶ ಕಾರಟ್ ನೆನಪಿಸಿದರು. ಜೆರುಸಲೇಂ ಇಸ್ರೇಲಿನ ರಾಜಧಾನಿ ಎಂದು ಅಮೆರಿಕಾದ ಅಧ್ಯಕ್ಷರು ಸಾರಿದಾಗ ಅದರ ವಿರುದ್ಧ ಮೋದಿ ಸರಕಾರ ದನಿಯೆತ್ತದಿದ್ದರೂ ವಿಶ್ವ ಸಂಸ್ಥೆಯಲ್ಲಿ ಅದರ ವಿರುದ್ಧ ಭಾರತ ಮತ ಹಾಕಿರುವುದು ಸ್ವಾಗತಾರ್ಹ ಎಂದೂ ಅವರು ಹೇಳಿದರು.


ವ್ಯಂಗ್ಯಚಿತ್ರ: ಸಂದೀಪ್ ಆಧ್ವರ್ಯು, ಟೈಂಸ್ ಆಫ್ ಇಂಡಿಯ



2018 ಜನವರಿ 30 ರಂದು ನಾಡಿನಾದ್ಯಂತ 'ಸೌಹಾರ್ದತೆಗಾಗಿ ಕರ್ನಾಟಕ ಮಾನವ ಸರಪಳಿ' ನಿರ್ಮಿಸಲು ನಿರ್ಧರಿಸಲಾಗಿದೆ. ಕರ್ನಾಟಕದಲ್ಲಿ ಕೋಮು ಸಾಮರಸ್ಯವನ್ನು ಹರಡಲು ಶಾಂತಿ ಸಂದೇಶ ಸಾರಲು ಎಲ್ಲ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ, ಮುಖ್ಯ ನಗರ, ಪಟ್ಟಣಗಳಲ್ಲಿ ಈ ಕಾರ್ಯಕ್ರಮ ಏಕಕಾಲಕ್ಕೆ ನಡೆಯಲಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಎಲ್ಲರೂ ಒಂದೆಡೆ ನಿಗದಿತ ಸ್ಥಳಗಳಲ್ಲಿ ಸೇರಿ ಸಂಜೆ 4 ಗಂಟೆಯಿಂದ ಹತ್ತು ನಿಮಿಷಗಳ ಕಾಲ ಕೈ ಕೈ ಹಿಡಿದು, ಅಖಂಡ ಮಾನವ ಸರಪಳಿ ನಿರ್ಮಿಸಲಾಗುವುದು. ಶಾಂತಿ, ಸಾಮರಸ್ಯ ಕಾಪಾಡುವ ಪ್ರತಿಜ್ಞೆ ಸ್ವೀಕರಿಸಲಾಗುವುದು. ಸಿದ್ಧತಾ ಸಮಿತಿಯ ಮನವಿ ಪುಟ 3ರಲ್ಲಿದೆ. ಈ ನಿಟ್ಟಿನಲ್ಲಿ ನಡೆಯುತ್ತಿರುವ ಚಿರುಸಿನ ಸಿದ್ಧತೆಗಳ ಹಾಗೂ ಇತರ ವಿವರಗಳ ಬಗ್ಗೆ ಒಂದು ಕಿರು ವರದಿ.

ಸೌಹಾರ್ದತೆಗಾಗಿ ಕರ್ನಾಟಕ

ಜನವರಿ 30ರಂದು ರಾಜ್ಯಾದ್ಯಂತ ಮಾನವ ಸರಪಳಿ





ವ್ಯಾಪಕ ಸಿದ್ಧತೆಗಳು

ಶಿವಮೊಗ್ಗ :

ಕುವೆಂಪು ವಿಶ್ವವಿದ್ಯಾಲಯ ಮತ್ತು ಸಾಹಿತ್ಯ ಸಮುದಾಯದ ಸಹಯೋಗದಲ್ಲಿ ಶಿವಮೊಗ್ಗದಲ್ಲಿ ಜನವರಿ 18ರಂದು.. ಕಿರುಚಿತ್ರಗಳ ಪ್ರದರ್ಶನ ಮತ್ತು ಕರ್ನಾಟಕ ಸೌಹಾರ್ದ ಪರಂಪರೆ ಯ ಬಗ್ಗೆ ಸಂವಾದ ನಡೆಯಿತು. ಸಂವಾದಕ್ಕೆ ಕುವೆಂಪು ವಿ.ವಿ.ಯ ಪ್ರೊ. ಪೂರ್ಣಾನಂದ, ಡಾ. ಹಸೀನಾ ಖಾದ್ರಿ, ಡಾ. ಕಿರಣ ಗಾಜನೂರು ಚಾಲನೆ ನೀಡಿದರು. ಪ್ರೊ, ಶಿವಾನಂದ ಕೆಳಗಿನಮನಿ, ಪ್ರೊ. ಕೇಶವಶರ್ಮ, ಪ್ರೊ.ದತ್ತಾತ್ರೇಯ, ಡಾ. ನೆಲ್ಲಿಕಟ್ಟೆ ಸಿದ್ದೇಶ್ ಮುಕ್ತ ಸಂವಾದದಲ್ಲಿ ಭಾಗವಹಿಸಿದರು.



ಶಿವಮೊಗ್ಗ ಪ್ರೆಸ್ ಟ್ರಸ್ಟ್ ಮತ್ತು ಸಾಹಿತ್ಯ ಸಮುದಾಯದ ಸಹಯೋಗದಲ್ಲಿ ಜನವರಿ 12ರಂದು ಪತ್ರಿಕಾ ಭವನದಲ್ಲಿ ಕರ್ನಾಟಕ ಸೌಹಾರ್ದ ಪರಂಪರೆ ಯ ಬಗ್ಗೆ ಸಂವಾದದಲ್ಲಿ ಶಶಿ ಸಂಪಳ್ಳಿ, ಕೆ.ಎಸ್.ವಿಮಲ, ಜಗದೀಶ ಕೊಪ್ಪ, ಎಸ್.ಮಂಜುನಾಥ, ಡಾ. ಕೇಶವ ಶರ್ಮ, ಡಾ. ಕಿರಣ್ ಗಾಜನೂರು, ಕೆ.ಎಸ್.ವಿಮಲ, ಪ್ರಭಾಕರನ್ ಕೆ ಭಾಗವಹಿಸಿದರು.

ಅಕ್ಕಮಹಾದೇವಿಯ ಮಹಿಳಾ ವಿ.ವಿ., ಅಕ್ಕಮಹಾದೇವಿ ಸಂಶೋಧನೆ ಕೌಶಲ್ಯ ಅಭಿವೃದ್ಧಿ ವಿಸ್ತರಣಾ ಕೇಂದ್ರ ಮತ್ತು ಸಾಹಿತ್ಯ ಸಮುದಾಯಗಳ ಸಹಯೋಗದಲ್ಲಿ, ಶಿವಮೊಗ್ಗ ಜಿಲ್ಲೆಯ ಉಡುತಡಿಯಲ್ಲಿ "ಸೌಹಾರ್ದ ಕರ್ನಾಟಕ ಪರಂಪರೆ – ಪ್ರಯೋಗ" ಒಂದು ದಿನದ ಕಾರ್ಯಾಗಾರ. 30 ಡಿಸೆಂಬರ್ 2017ರಂದು ನಡೆಸಲಾಯಿತು.



ಉಡುಪಿ:

ಸೌಹಾರ್ದಕ್ಕಾಗಿ ಕರ್ನಾಟಕ ಉಡುಪಿ ಸಂಚಾಲಕ ಸಮಿತಿಯ ನೇತೃತ್ವದಲ್ಲಿ ಕರಾವಳಿ ಸೌಹಾರ್ದ ಪರಂಪರೆಯ ಸಮಾವೇಶವನ್ನು ಜನವರಿ 15 ರಂದು ಉಡುಪಿಯ ಆದಿ ಉಡುಪಿ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿತ್ತು. ಅಂಕಣಕಾರ ಡಾ.ಬಿ.ಭಾಸ್ಕರರಾವ್, ಸಾಹಿತಿ ಚಂದ್ರಕಲಾ ನಂದಾವರ ಈ ಸಮಾವೇಶದಲ್ಲಿ ವಿಚಾರ ಮಂಡಿಸಿದರು. ಸಮಾಜ ಸೇವಕ ರೆ.ಫಾ.ವಿಲಿಯಂ ಮಾರ್ಟಿಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಮಾವೇಶದ ಬಳಿಕ ಉಡುಪಿ ಜಿಲ್ಲೆಯಲ್ಲಿ ಜನವರಿ 30ರ ಮಾನವ ಸರಪಣಿಯನ್ನು ಯಶಸ್ವಿಗೊಳಿಸುವ ಬಗ್ಗೆ ಸೇರಿದ ಸಂಘಟನೆಯ ಪ್ರತಿನಿಧಿಗಳು ಚರ್ಚೆ ನಡೆಸಿದರು. ಸಂಚಾಲಕರಾದ ಜಿ.ರಾಜಶೇಖರ್, ರಾಜ್ಯ ಸಂಚಾಲಕರಲ್ಲಿ ಒಬ್ಬರಾದ ಎಸ್.ವೈ.ಗುರುಶಾಂತ್, ಪ್ರೊ.ಕೆ.ಫಣಿರಾಜ್ ಸಿಪಿಐ(ಎಂ) ಪಕ್ಷದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ, ಶಶಿಧರ ಗೊಲ್ಲ ಮತ್ತಿತರರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಮಾನವ ಸರಪಣಿಯ ಹಾದಿ

ಬೆಂಗಳೂರಿನ ಮಾನವ ಸರಪಣಿ ಸಿದ್ಧತಾ ಸಮಿತಿಯ ಸಭೆಗಳು, ಬೊಮ್ಮನಹಳ್ಳಿ ಸೇರಿದಂತೆ ಕೆಲವು ಕಡೆ ಸ್ಥಳೀಯ ಸಮಾವೇಶಗಳು ನಡೆದಿದ್ದು, ನಗರದಲ್ಲಿ ಮಾನವ ಸರಪಣಿಯ ಹಾದಿಯನ್ನು ಯೋಜಿಸಲಾಗಿದೆ. ಜನವರಿ 21 ಮತ್ತು 24ರಂದು ದಕ್ಷಿಣ ಹಾಗೂ ಉತ್ತರ ಜಿಲ್ಲಾ ಮಟ್ಟದ ಸಮಾವೇಶಗಳು ನಡೆಯಲಿದ್ದು, ಅಲ್ಲಿ ಈ ಹಾದಿ ಮತ್ತು ಸರಪಣಿಯ ಇತರ ವಿವರಗಳನ್ನು ಅಂತಿಮಗೊಳಿಸಲಾಗುವುದು. ಈ ವರೆಗಿನ ಯೋಜನೆಯಂತೆ ಹಾದಿ ಈ ರೀತಿ ಇರುತ್ತದೆ:

ಬೆಂಗಳೂರು – ತುಮಕೂರು ಹೆದ್ದಾರಿಯಲ್ಲಿ

- ದಾಬಸ್ ಪೇಟೆಯಿಂದ – ನೆಲಮಂಗಲದವರೆಗೆ
- ನೆಲಮಂಗಲದಿಂದ ಕೆನ್ನಾಮೆಟಲ್ ವರೆಗೆ
- ಕೆನ್ನಾಮೆಟಲ್ (ಬಾಗಲಕುಂಟೆ ಬಳಿ) ನಿಂದ ಯಶವಂತಪುರ ಸರ್ಕಲ್ ವರೆಗೆ
- ಯಶವಂತಪುರ ಸರ್ಕಲ್ ನಿಂದ ಐ.ಐ.ಎಸ್.ಸಿ., ಸಂಪಿಗೆ ರಸ್ತೆ ಶೇಷಾದ್ರಿಪುರಂ ರಾಜಭವನ್ ಕೆ.ಆರ್. ಸರ್ಕಲ್ ನೃಪತುಂಗ ಮಾರ್ಗವಾಗಿ ಟೌನ್ ಹಾಲ್ ವರೆಗೆ ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ
- ಟೌನ್ ಹಾಲ್ ನಿಂದ ಮೇಲ್ ಸೇತುವೆ ಮಾರ್ಗವಾಗಿ ಕೆಂಗೇರಿ ವರೆಗೆ


ಮಂಗಳೂರು:

ಮಂಗಳೂರಿನಲ್ಲಿ ಜನವರಿ 11 ರಂದು ಸೌಹಾರ್ದಕ್ಕಾಗಿ ಕರ್ನಾಟಕದ ದ.ಕ.ಜಿಲ್ಲಾ ಸಂಚಾಲಕರಾದ ಚಂದ್ರಕಲಾ ನಂದಾವರ, ವಿಲ್ಫ್ರೆಡ್ ಡಿಸೋಜ, ಮುನೀರ್ ಕಾಟಿಪಳ್ಳ ಅವರ ನೇತೃತ್ವದಲ್ಲಿ ನಡೆದ ಸಿದ್ಧತಾ ಸಭೆಯಲ್ಲಿ ಸಿಪಿಐ(ಎಂ) ದ.ಕ.ಜಿಲ್ಲಾ ಮುಖಂಡರು, ಸಿಪಿಐ ಮುಖಂಡರು, ದಸಂಸ ಪ್ರತಿನಿಧಿಗಳು, ಜೆಡಿಎಸ್ ಜಿಲ್ಲಾ ನಾಯಕರು ಮತ್ತು ಕಾಂಗ್ರೆಸಿನ ಮುಖಂಡರು ಭಾಗವಹಿಸಿ ಮಾನವ ಸರಪಳಿಯನ್ನು ಯಶಸ್ವಿಗೊಳಿಸುವ ಬಗ್ಗೆ ಚರ್ಚಿಸಿದರು.

ಹಗರಿಬೊಮ್ಮನಹಳ್ಳಿಯಲ್ಲಿ "ಸೌಹಾರ್ದತೆಗಾಗಿ ಕರ್ನಾಟಕ" ತಾಲ್ಲೂಕು ಸಮಾವೇಶ ಜನವರಿ 13ರಂದು ಗುರುಭವನದಲ್ಲಿ ನಡೆಯಿತು. ಹಂಪಿ ಕನ್ನಡ ವಿವಿಯ ಅಭಿವೃದ್ಧಿ ಅಧ್ಯಯನ ವಿಭಾಗದ ಡಾ.ಚಂದ್ರ ಪೂಜಾರಿ ಹಾಗೂ ಕೊಪ್ಪಳ ಗವಿಸಿದ್ದೇಶ್ವರ ಮಠದ ಕಡ್ಲಬಾಳು ಶಾಖಾ ಮಠದ ಸೋಮಶಂಕರ ದೇವರು ಸ್ವಾಮೀಜಿಯವರು ಶಾಂತಿಯ ಸಂಕೇತವಾದ ಪಾರಿವಾಳಗಳನ್ನು ಹಾರಿ ಬಿಡುವ ಮೂಲಕ ಉದ್ಘಾಟನೆ ಮಾಡಿದರು

ಮಂಡ್ಯದಲ್ಲಿ ನಡೆದ ಸೌಹಾರ್ದತೆಗಾಗಿ ಕರ್ನಾಟಕ ಮಾನವಸರಪಳಿಯ ಪೂರ್ವಭಾವಿ ಸಮಾವೇಶ ಜನವರಿ 17ರಂದು.. ಮಂಡ್ಯದಲ್ಲಿ ನಡೆಯಿತು. ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯರು ಉದ್ಘಾಟಿಸಿ

ಪುಟ 10 ಕ್ಕೆ



ಹೆಣಗಳ ಮೇಲೆ ರಾಜಕೀಯ ಮಾಡುವವರು ಹಿಂದೂಗಳಲ್ಲ : ಪ್ರಕಾಶ್ ರೈ



ಹೆಣಗಳ ಮೇಲೆ ರಾಜಕೀಯ ಮಾಡುತ್ತಾ ಕೋಮುವಾದ ಹರಡುತ್ತಿರುವವರು, ಅವರು ನಿಜವಾಗಿಯೂ ಹಿಂದೂಗಳಲ್ಲ. ಅವರ ಬಣ್ಣ ಕೇಸರಿಯಲ್ಲ. ಶೀಘ್ರದಲ್ಲಿ ಎಲ್ಲವೂ ಬಯಲಾಗಲಿದೆ ಎಂದು ಚಿತ್ರನಟ ಪ್ರಕಾಶ್ ರೈ ಹೇಳಿದರು.. 'ಪ್ರೀತಿ ಪದಗಳ ಪಯಣ' ಆಯೋಜನಾ ಸಮಿತಿ ಶನಿವಾರ ಶಿರಸಿಯ ರಾಘವೇಂದ್ರ ಮಠದಲ್ಲಿ ಹಮ್ಮಿಕೊಂಡಿದ್ದ 'ನಮ್ಮ ಸಂವಿಧಾನ ನಮ್ಮ ಹೆಮ್ಮೆ' ರಾಜ್ಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಇಲ್ಲಿಯ ಸಂಸದರೊಬ್ಬರು ಇದ್ದಾರೆ. ಅವರಿಗೆ ಸಂವಿಧಾನ ಅಂದರೇನು ಗೊತ್ತಿಲ್ಲ. ನಮ್ಮ ಸಂವಿಧಾನಕ್ಕೊಂದು ಪ್ರಿಆಂಬಲ್ ಇದೆ. ಅಂಬೇಡ್ಕರ್ ಅವರು ಸಂವಿಧಾನ ರಚಿಸುವುದಕ್ಕೆ ಮುಂಚೆ, ಜಾತ್ಯತೀತ – ಸಾರ್ವಭೌಮ – ಪ್ರಜಾಪ್ರಭುತ್ವ ರಾಷ್ಟ್ರವಾಗುವತ್ತ ಆಶಯಗಳಿರಬೇಕು, ಈ ಆಶಯಗಳತ್ತ ಸಂವಿಧಾನ ರಚನೆಯಾಗಬೇಕು ಅಂತ ಗುರುತಿಸಿದ್ದರು. ಸಂವಿಧಾನ ರಚನೆಯಾದ ಮೇಲೆ ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಮುಂದಿನ ದಿನಗಳಲ್ಲಿ ಹಲವು ಬದಲಾವಣೆಗಳಿಂದಾಗಿ ಆ ಸಂವಿಧಾನದಲ್ಲಿರುವ ಕೆಲವು ವಿಷಯಗಳು ಈ ಪ್ರಿಆಂಬಲ್ ಗೆ ವಿರೋಧವಾಗಿದ್ದರೆ ಮಾತ್ರ ಅವನ್ನು ಬದಲಾಯಿಸಬಹುದೇ ಹೊರತು ಸಂವಿಧಾನವನ್ನೇ ಬದಲಾಯಿಸುವುದಲ್ಲ. ಈ ಸಂಸದರು ಕ್ರಿಕೆಟ್ ಆಡಲಿಕ್ಕೆ ಹೋಗಿ ಫುಟ್ ಬಾಲ್ ಆಡುವ ಜನ. ಕ್ರಿಕೆಟ್ ಬಾಲಲ್ಲಿ ಫುಟ್ಬಾಲ್ ಆಡಿದ್ರೆ ಮುಖ ಮೂತಿ ಕಿತ್ತೋಗುತ್ತೆ ಅಷ್ಟೆ! ಅವರಿಗೆ ಬೇಸಿಕ್ ಎಜುಕೇಶನ್ ಇಲ್ಲ. ಎಂದು ಪ್ರಕಾಶ್ ರೈ ಖಾರವಾಗಿ ಹೇಳಿದರು.

ಈ ಭೂಮಿಯ ಮೇಲೆ ಒಂದು ನಂಬಿಕೆಗೆ ಸೇರಿದವರು ಇರಲೇಬಾರದು. ಅವರನ್ನು ಅಳಿಸಿಹಾಕಬೇಕು ಅನ್ನುವವರು ಹಿಂದೂನಾ? ಎಲ್ಲವೂ ಒಂದೇ ಬಣ್ಣ ಆಗಭೇಕು ಅನ್ನುವವನು ಹಿಂದೂನಾ? ಅಲ್ಲ ಅಂತ ನಾನು ನಂಬಿದ್ದೇನೆ. ಈ ದೇಶದ ಒಬ್ಬ ದೊಡ್ಡ ನಾಯಕರು, "ನಾವು ಪ್ರತಿಭಟನೆ ಮಾಡಿದರೆ ಲಾಠೀಚಾರ್ಜ್ ಆಗಬೇಕು, ಟಿಯರ್ ಗ್ಯಾಸ್ ಹೊಡೆಯುವಂಥ ಪ್ರತಿಭಟನೆ ಮಾಡಬೇಕು" ಅಂತ ಹೇಳ್ತಾರೆ. ಹೀಗೆಲ್ಲ ಹೇಳಿಕೊಡೋರು ಹಿಂದೂಗಳಾ? ಎಂದು ರೈ ಪ್ರಶ್ನಿಸಿದರು.

ದೇಶಕ್ಕೆ ದೊಡ್ಡ ರೋಗ ಅಂಟಿದೆ. ಸಂವಿಧಾನದ ಮೇಲೆ ಗೌರವವಿರುವ ಪ್ರತಿಯೊಬ್ಬರೂ ಅದನ್ನು ತೊಲಗಿಸುವ ಕೆಲಸ ಮಾಡಬೇಕು ಎಂದು ಪ್ರಕಾಶ್ ರೈ ಹೇಳಿದರು. ಅಪಾಯಕಾರಿ ಆಗಿರುವ ದೊಡ್ಡ ರೋಗವೊಂದನ್ನು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಹೊಡೆದೋಡಿಸಿ ಆ ಬಳಿಕ ಉಳಿಯುವ ಕೆಮ್ಮು, ನೆಗಡಿಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಯೋಚನೆ ಮಾಡೋಣ ಎಂದು ರೈ ಹೇಳಿದರು.

ನಮಗೆ ನೋವು ಅಷ್ಟೇ ಅಲ್ಲ, ಕೋಪವೂ ಸಿಟ್ಟೂ ಇದೆ. ಸಿಟ್ಟಾಗಬೇಕು ಮನುಷ್ಯ. ಸಿಟ್ಟಾದರೇನೆ ಮನುಷ್ಯ. ಈ ರೀತಿಯ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲ, ಪ್ರತಿ ದಿನ, ಪ್ರತಿ ಕ್ಷಣ, ನಾವು ನಡೆಯುವ ಪ್ರತಿ ಸ್ಥಳದಲ್ಲಿ ನಾವು ಇದನ್ನು ಬಿತ್ತುತ್ತಾ ಹೋಗಬೇಕು. ಧೈರ್ಯವಾಗಿ ಮಾತಾಡಬೇಕು. ಇಲ್ಲದಿದ್ದರೆ ನಮ್ಮ ಮೌನ ನಮ್ಮನ್ನು ಕೊಲ್ಲುತ್ತದೆ ಎಂದು ಪ್ರಕಾಶ್ ರೈ ಕರೆ ಕೊಟ್ಟರು.

ಸಮಾವೇಶದ ಅಧ್ಯಕ್ಷತೆಯನ್ನು ಹಿರಿಯ ಬರಹಗಾರ ರಹಮತ್ ತರೀಕೆರೆ ವಹಿಸಿದ್ದರು. ರಾಜ್ಯದ ಮತ್ತು ದೇಶದ ಹಲವು ಕಡೆಗಳಿಂದ ಬಂದ ನೂರಾರು ಲೇಖಕರು, ಕಲಾವಿದರು, ಚಿಂತಕರು, ಸಾಮಾಜಿಕ–ರಾಜಕೀಯ ಕಾರ್ಯಕರ್ತರು ಸಮಾವೇಶದಲ್ಲೂ ಅದಕ್ಕಿಂತ ಮೊದಲು ನಡೆದ ಸೌಹಾರ್ದ ಮೆರವಣಿಗೆಯಲ್ಲೂ ಭಾಗವಹಿಸಿದ್ದರು. ಅಹ್ಮದಾಬಾದಿನ ಮಾನವ ಹಕ್ಕು ಹೋರಾಟಗಾರ ಮಾರ್ಟಿನ್ ಮಾಕ್ವಾನ್ ಸೌಹಾರ್ದ ಮೆರವಣಿಗೆ ಉದ್ಘಾಟಿಸಿದರು. ಸಾಹಿತಿಗಳಾದ ರಂಜಾನ್ ದರ್ಗಾ, ವಿನಯಾ ಒಕ್ಕುಂದ, ರಾಜೇಂದ್ರ ಚೆನ್ನಿ, ಕೇಶವ ಶರ್ಮ, ಪತ್ರಕರ್ತ ಶಶಿಧರ ಭಟ್, ನಿರ್ದೇಶಕ ಬಿ.ಸುರೇಶ, ನರೇಂದ್ರ ನಾಯಕ್, ಎಸ್. ವರಲಕ್ಷ್ಮಿ, ಕೆ.ಎಸ್.ವಿಮಲಾ, ಮುನೀರ್ ಕಾಟಿಪಳ್ಳ ಮುಂತಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

"ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಆರಂಭದ ಹಂತದಲ್ಲಿ ಇರುವ ದ್ವೇಷದ ಕಿಚ್ಚಿಗೆ ಪ್ರೀತಿಯ ಮುಲಾಮನ್ನು ಹಚ್ಚಿ ದ್ವೇಷದ ಕಿಚ್ಚಿನಿಂದಾಗಿ ಆಗಿರುವ ಗಾಯವನ್ನು ವಾಸಿಮಾಡಬೇಕಾಗಿದೆ. ಇಂತಹ ಪ್ರೀತಿಯನ್ನು ಜನರ ಮನಸ್ಸಿನಲ್ಲಿ ಬಿತ್ತುವ" ಉದ್ದೇಶದಿಂದಲೇ 13 ಜನವರಿ 2018ರಂದು ಉತ್ತರ ಕನ್ನಡ ಸಾಂಸ್ಕೃತಿಕ ಕೇಂದ್ರ ಶಿರಸಿಯಲ್ಲಿ 'ಪ್ರೀತಿ ಪದಗಳ ಪಯಣ' (ಸೌಹಾರ್ದತೆಯೆಡೆಗೆ ನಮ್ಮ ನಡಿಗೆ) ಮತ್ತು 'ನಮ್ಮ ಸಂವಿಧಾನ–ನಮ್ಮ ನಮ್ಮ ಹೆಮ್ಮೆ' ರಾಜ್ಯ ಮಟ್ಟದ ಸಮಾವೇಶವನ್ನು ಆಯೋಜಿಸಲಾಗಿತ್ತು. ಅತ್ಯಂತ ಯಶಸ್ವಿಯಾಗಿ ನಡೆದ ಮತ್ತು ಕರ್ನಾಟಕದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲಾದ ಅದರ ಬಗ್ಗೆ ಒಂದು ವರದಿ.







ಸಮಾವೇಶದಲ್ಲಿ ಆಡಲಾದ ಕೆಲವು ಗಮನಾರ್ಹ ಮಾತುಗಳ ಜಲಕ್ ಇಲ್ಲಿದೆ

ಬೆಂಕಿಗೆ ಬೆಂಕಿ ಉತ್ತರವಾಗದು, ಪ್ರೀತಿ, ಸೌಹಾರ್ದವೇ ಉತ್ತರ ಉತ್ತರ ಕನ್ನಡದಲ್ಲಿ ಗಾಯ ಆಗಿದೆ. ರಕ್ತ ಹರಿಸಿದೆ. ಆ ಗಾಯ ಮಾಯುತ್ತಲೂ ಇದೆ. ಮತ್ತೆ ಅಂಥ ಗಾಯಗಳು ಆಗದಿರಲಿ ಎಂದು ಈ ಸಮಾವೇಶ ಆಯೋಜನೆಗೊಂಡಿದೆ. ಯಾರು ಸತ್ತರೂ ಅದು ಯಾವ ತಾಯಿಯ ಮಗು ಎಂದು ಯೋಚಿಸಬೇಕು ಹೊರತು ಯಾವ ಧರ್ಮದ್ದು ಎಂದು ಯೋಚಿಸಬಾರದು. ಆ ನಿಟ್ಟಿನಲ್ಲಿ ನಮ್ಮ ಸಮಾಜದ ಚಿಂತನೆ ರೂಪುಗೊಳ್ಳಬೇಕು.

ಕೆಲವರು ರಕ್ತಸಿಕ್ತ ಭಾರತದ ಕಲ್ಪನೆಯನ್ನು ನಮ್ಮ ಮುಂದೆ ಇಡುತ್ತಿದ್ದಾರೆ. ಯುದ್ಧ ಮಾಡುತ್ತಲೇ ಇರಬೇಕು, ರಕ್ತ ಹರಿಯುತ್ತಿರಬೇಕು ತಾವು ಚುನಾವಣೆ ಗೆಲ್ಲಬೇಕು ಎಂದು ಅವರು ಬಯಸುತ್ತಾರೆ. ಆದರೆ ನಮ್ಮ ದೇಶದ ಜನರಿಗೊಂದು ವಿವೇಕವಿದೆ. ಈ ವಿವೇಕ ಅವರ ಬಯಕೆಗಳನ್ನು ಈಡೇರಲು ಬಿಡುವುದಿಲ್ಲ.

ನ್ಯಾಯಾಧೀಶರುಗಳೇ ಡೆಮಾಕ್ರಸಿ ಅಪಾಯದಲ್ಲಿದೆ ಎಂದು ಹೇಳುತ್ತಿದ್ದಾರೆ. ಒಂದು ಹೆಣ ಬಿದ್ದರೆ ನಾವು ಗೆಲ್ಲುತ್ತೇವೆ ಅನ್ನುವ ಲೆಕ್ಕಾಚಾರದ ಜನ ಇರುವಾಗ ನಾವು ಡೆಮಾಕ್ರಸಿಯ ಕುರಿತು ಮಾತನಾಡಬೇಕಿದೆ.

ದೇಶದಲ್ಲಿ ಚುನಾವಣೆ ಯಶಸ್ವಿಯಾಗಿ ನಡೆಯುವುದೇ ಡೆಮಾಕ್ರಸಿ ಅಲ್ಲ. ಯಾವ ದೇಶದಲ್ಲಿ ಮನುಷ್ಯ ಸಂಬಂಧಗಳು ಉತ್ತಮವಾಗಿರುತ್ತದೆಯೋ ಆ ದೇಶದ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ ಎಂದರ್ಥ. ಹೊರಗೆ ಗಾಯವಾದರೆ ಗೊತ್ತಾಗುತ್ತದೆ. ಆದರೆ ಭಾರತದ ಒಳಗೆ ರಕ್ತಸ್ರಾವವಾಗುತ್ತಿದೆ. ಮನುಷ್ಯ ಸಂಬಂಧಗಳು ಹದಗೆಡುತ್ತಿವೆ.

ಭಾರತ ಬಹಳ ಸುಂದರವಾದ ದೇಶ. ಕೆಲವೇ ಕೆಲವು ಹುಳುಗಳು ಈ ದೇಶವನ್ನು ಕೊರೆದು ಹಾಳುಗೆಡವುತ್ತಿವೆ. ಆ ಹುಳುಗಳಿಂದ ಹಾನಿಯಾಗದಂತೆ ಕಾಪಾಡಿಕೊಳ್ಳಬೇಕಾದುದು ನಮ್ಮ ಜವಾಬ್ದಾರಿಯಾಗಿದೆ.

ಮಾನವ ಸಂಬಂಧ ಉಳಿಯಲು ಪ್ರೀತಿ, ಸೌಹಾರ್ದವೇ ಉತ್ತರವಾಗುತ್ತದೆಯೇ ವಿನಃ ಬೆಂಕಿಗೆ ಬೆಂಕಿ ಉತ್ತರವಾಗದು. ಸ್ವಾಮಿ ವಿವೇಕಾನಂದ ಹಾಗೂ ಮಹಾತ್ಮ ಗಾಂಧೀಜಿ ಚಿಂತನೆಯಂತೆ ದೇಶ ರೂಪುಗೊಳ್ಳಬೇಕು. ಬೆಂಕಿ ನಂದಿಸಲು ಬೇಕಿರುವುದು ಬೆಂಕಿಯಲ್ಲ, ನೀರು. ಭಾರತದ ಭಾಷೆ ದ್ವೇಷದ ಭಾಷೆಯಲ್ಲ, ಹೃದಯದ ಭಾಷೆ. ಆ ಹೃದಯದ ಭಾಷೆಯನ್ನು ನಮ್ಮದಾಗಿಸಿಕೊಳ್ಳೋಣ.



– ರಹಮತ್ ತರಿಕೆರೆ

ಪುಟ 10 ಕ್ಕೆ

ಜನವರಿ 30ರಂದು ರಾಜ್ಯಾದ್ಯಂತ ಮಾನವ ಸರಪಳಿ..........

ಪುಟ 8 ರಿಂದ

ಮಾತನಾಡಿದರು

ಮಾನವ ಸರಪಳಿ ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹಾಗೂ ಇದನ್ನು ಯಶಸ್ವಿಗೊಳಿಸಲು ಅಖಿಲಕರ್ನಾಟಕ ಸೂಫಿ ಸಂತರ ಸಂಘದ ಪ್ರಮುಖರೊಂದಿಗೆ ಚರ್ಚಿಸಲಾಯಿತು. ಸಂಘದ ರಾಜ್ಯ ಸಂಚಾಲಕರಾದ ಶ್ರೀ ಸೂಫಿ ವಲಿಬಾ ರವರಿಗೆ ಬೆಂಗಳೂರಿನಲ್ಲಿ ಅಧಿಕೃತ ವಾಗಿ ಪತ್ರ ನೀಡಲಾಯಿತು. ಈ ಎಲ್ಲಾ ಕಾರ್ಯಗಳೊಂದಿಗೆ ಜೊತೆಗೂಡುವುದಾಗಿ ಸೂಫಿಗಳು ನುಡಿದರು.

ತುಮಕೂರಿನಲ್ಲಿ ಜನವರಿ 10ರಂದು ವಿಶಾಲ ಸಮಾಲೋಚನಾ ಸಭೆಯಲ್ಲಿ ಹಿರಿಯ ಚಿಂತಕರಾದ ಪ್ರೊ.ದೊರೈರಾಜು, ನಿವೃತ್ತ ಇಂಜನೀಯರ್ ರಾಮಚಂದ್ರ, ಪ್ರೊ.ಜಿ.ಎಂ.ಶ್ರೀನಿವಾಸಯ್ಯ, ತಾಜುದ್ದೀನ್, ಸುಬ್ರಹ್ಮಣ್ಯ, ಬಿ.ಉಮೇಶ್, ಸಿಐಟಿಯು ಸೈಯ್ಯದ್ ಮುಜೀಬ್, ದಲಿತ ಸಂಘಟನೆಗಳ ಮುಖಂಡರಾದ ಪಿ.ಎನ್.ರಾಮಯ್ಯ, ವಕೀಲರಾದ ಕೃಷ್ಣಪ್ಪ, ಎಸ್.ಯು.ಸಿ.ಐ(ಸಿ) ಸ್ವಾಮಿ, ವಿಜ್ಞಾನ ಕೇಂದ್ರದ ಟಿ.ಜಿ.ಶಿವಲಿಂಗಯ್ಯ, ರವಿಶಂಕರ್, ಜಾಕಿರ್ ಹುಸೇನ್, ವಿದ್ಯಾರ್ಥಿ ಮುಖಂಡರಾದ ಮಹಮದ್ ಇನಾಂ, ಮಹಿಳಾ ಸಾಂಸ್ಕೃತಿಕ ಸಂಘಟನೆಯ ಮಂಜುಳಾ ಹಾಗೂ ಎಸ್.ವೈ.ಗುರುಶಾಂತ್ ಮುಂತಾದವರು ಭಾಗವಹಿಸಿದ್ದರು.

ಮೈಸೂರಿನಲ್ಲಿ 23 ಡಿಸೆಂಬರ್ 2017ರಂದು ಸಾಹಿತಿಗಳು, ಪ್ರಗತಿಪರರು, ಹೋರಾಟಗಾರರ ಪೂರ್ವಭಾವಿ ಸಭೆ ನಡೆಯಿತು.

ಬೆಂಗಳೂರಿನ ಬೊಮ್ಮನಹಳ್ಳಿ ಪ್ರದೇಶದಲ್ಲಿ ಮಾನವ ಸರಪಳಿ ಯಶಸ್ಸಿಗಾಗಿ ಜನವರಿ 16ರಂದು ತಯಾರಿ ಸಭೆ ನಡೆಯಿತು. ಸಭೆಯಲ್ಲಿ ಕೆ.ಪ್ರಕಾಶ್ ಮಾನವ ಸರಪಳಿ ಉದ್ದೇಶ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಚಿನ್ಮಯ ಶಿಕ್ಷಣ ಸಂಸ್ಥೆಯ ಛೇರ್ ಮನ್ ವಾಸುದೇವರೆಡ್ಡಿ, ಕವಿತಾರೆಡ್ಡಿ, ಕೆಎನ್ ಉಮೇಶ್, ಸಯ್ಯದ್ ಸರ್ದಾರ್, ಬಾಲಕೃಷ್ಣ ರೆಡ್ಡಿ, ಜಗದೀಶ್ ಗೌಡ, ರವೀಂದ್ರ ಮತ್ತಿತರರು ಭಾಗವಹಿಸಿ ಮಾತನಾಡಿದರು.

ಸೌಹಾರ್ದತೆಗಾಗಿ ಕಾರ್ಮಿಕರು

ಜನವರಿ 14ರಂದು ರಂದು ನಡೆದ ಮೈಸೂರು ಸಿಐಟಿಯು ಜಿಲ್ಲಾ ಸಮಿತಿ ಸಭೆಯಲ್ಲಿ ಸೌಹಾರ್ದತೆಗೆ ಕರ್ನಾಟಕ 30 ಜನವರಿ 2018ರ ಮಾನವ ಸರಪಳಿ ಭಾಗವಾಗಿ ಸೌಹಾರ್ದತೆಗಾಗಿ ಕಾರ್ಮಿಕರು ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಹಾಸನದಲ್ಲಿ ಜನವರಿ 12ರಂದು ನಡೆದ ಜಾತ್ಯಾತೀತ, ದಲಿತ-ಪ್ರಗತಿಪರ ಸಂಘಟನೆಗಳು ಮತ್ತು ಸಮಾನ ಮನಸ್ಕರನ್ನೊಳಗೊಂಡ ಪೂರ್ವ ಸಿದ್ದತಾ ಸಭೆ ಯಶಸ್ವಿಯಾಗಿ ನಡೆಯಿತು. ಹಾಸನದಲ್ಲಿ ಜನವರಿ 17ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಹಿರಿಯ ಸಾಹಿತಿಗಳಾದ ಜ.ಹೊ.ನಾರಾಯಣಸ್ವಾಮಿ, ಹಿರಿಯ ದಲಿತ ಮುಖಂಡರಾದ ನಾರಾಯಣದಾಸ್, ಕ್ರೈಸ್ತ ಮುಖಂಡರಾದ ಫಾದರ್ ಡೇವಿಡ್, ಹಸಿರು ಭೂಮಿ ಪ್ರತಿಷ್ಠಾನದ ಎಸ್.ಎಸ್.ಪಾಷಾ, ಸಿಐಟಿಯು ಜಿಲ್ಲಾ ಅದ್ಯಕ್ಷರಾದ ಧರ್ಮೇಶ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎಚ್.ಆರ್.ನವೀನ್ ಕುಮಾರ್ ಭಾಗವಹಿಸಿದ್ದರು.

ಹಾವೇರಿಯಲ್ಲಿ ಮಾನವ ಸರಪಳಿ ಯಶಸ್ವಿ ಕುರಿತು ಜನವರಿ 17ರಂದು ಪೂರ್ವಭಾವಿ ಸಭೆ ನಡೆಸಲಾಯಿತು. ಸಭೆಯಲ್ಲಿ ರೈತ, ಕಾರ್ಮಿಕ, ಲೈಂಗಿಕ ಅಲ್ಪ ಸಂಖ್ಯಾತರ ಸಂಘ, ಮಹಿಳಾ, ಸಾಹಿತಿಗಳು, ಶಿಕ್ಷಕ, ಉಪನ್ಯಾಸಕರು, ದಲಿತ, ವಿದ್ಯಾರ್ಥಿ-ಯುವಜನ ಸಂಘಟನೆ ಸೇರಿದಂತೆ ಹಲವಾರು ಮುಖಂಡರು ಪಾಲ್ಗೊಂಡಿದ್ದರು.

ಬೆಳ್ತಂಗಡಿ ತಾಲೂಕಿನ ಸಾಹಿತಿಗಳ, ಚಿಂತಕರ, ಪ್ರಗತಿಪರ ಬರಹಗಾರರ, ಪ್ರಗತಿಪರ ಸಂಘಟನೆಗಳ, ಪಕ್ಷಗಳ ಪೂರ್ವಭಾವಿ ದಿನಾಂಕ ಜನವರಿ 19ರಂದು ನಡೆಯಿತು

ಮುಂಬರುವ ಸಮಾವೇಶಗಳು

ಇವಲ್ಲದೆ ಬೆಂಗಳೂರು ದಕ್ಷಿಣ (ಜ. 21) ಜಿಲ್ಲೆಯ, ಬೆಂಗಳೂರು ಉತ್ತರ (ಜ.24) ಜಿಲ್ಲೆಯ, ಮದ್ದೂರು (ಜ. 22), ಚಿಂತಾಮಣಿ (ಜ.22), ರಾಯಚೂರಿನ ಮಸ್ಕಿ (ಜ. 21) ಸೌಹಾರ್ದ ಸಮಾವೇಶಗಳು ನಡೆಯಲಿವೆ.

ಶಿರಸಿಯಲ್ಲಿ ಪ್ರಸಾರಾಂದೋಲನ ಕಾರ್ಯಾಗಾರ

ಜನವರಿ 30ರ ಮಾನವ ಸರಪಣಿಗೆ ಸಾಮಾಜಿಕ ಮಾಧ್ಯಮ ಪ್ರಸಾರಾಂದೋಲನದಲ್ಲಿ ಬಳಸಲು ಮತ್ತು ಸೌಹಾರ್ದ ಕರ್ನಾಟಕಕ್ಕಾಗಿ ಸತತ ಪ್ರಚಾರ-ಪ್ರಕ್ಷೋಭೆ ನಡೆಸಲು ನೆರವಾಗುವ ಪೋಸ್ಟರ್ ಗಳನ್ನು ತಯಾರಿಸಲು ಶಿರಸಿಯಲ್ಲಿ ಜನವರಿ 14ರಂದು ಒಂದು ದಿನದ ಕಾರ್ಯಾಗಾರ ನಡೆಸಲಾಯಿತು. ಕಾರ್ಯಾಗಾರದಲ್ಲಿ 15ಕ್ಕೂ ಹೆಚ್ಚು ರಾಜ್ಯದ ವಿವಿಧ ಭಾಗಗಳಿಂದ ಬಂದ ಕಲಾವಿದರು ಮತ್ತು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದರು. ಕಾರ್ಯಾಗಾರದಲ್ಲಿ ಐದು ರೀತಿಯ ಥೀಮ್ ಗಳ ಕಂಟೆಂಟ್ ಮತ್ತು ಪೋಸ್ಟರುಗಳ ಮೂಲ ಮಾದರಿಯನ್ನು ಯೋಜಿಸಲಾಯಿತು. ಪಂಪನಿಂದ ಜಿ.ಎಸ್.ಶಿವರುದ್ರಪ್ಪ ವರೆಗೆ ಕರ್ನಾಟಕದ ಸೌಹಾರ್ದ ಪರಂಪರೆ ಸಾರುವ ಗದ್ಯ-ಪದ್ಯಗಳ ಸಾಲು ಇರುವಂತಹವು ಒಂದು ಬಗೆ. ಕರ್ನಾಟಕದ ಸೌಹಾರ್ದ ತಾಣಗಳ ಕಿರು ಪರಿಚಯ ಚಿತ್ರ ಇರುವಂತಹವು ಎರಡನೆಯ ಬಗೆ. ಮಾನವ ಸರಪಣಿಯಲ್ಲಿ ಭಾಗವಹಿಸಲು ಕರೆ ಕೊಡುವ ಇಂದಿನ ಕರ್ನಾಟಕದ ವಿವಿಧ ಕ್ಷೇತ್ರಗಳ ನಾಯಕರ ಹೇಳಿಕೆಗಳು ಮೂರನೇಯ ಬಗೆ. ಕರ್ನಾಟಕದಲ್ಲಿ ಸೌಹಾರ್ದತೆ ಬಗ್ಗೆ ಕಮೆಂಟ್ ಮಾಡುವ ಕಾರ್ಟೂನುಗಳು ಇರುವವು ನಾಲ್ಕನೆಯ ಬಗೆ. ಐದನೆಯ ಬಗೆ ಕರ್ನಾಟಕದಲ್ಲಿ ಜೀವಂತವಿರುವ ಸೌಹಾರ್ದ ಬದುಕಿನ ಉತ್ತಮ ಫೋಟೊಗಳು ಇರುವಂಥವು. ಈ ಐದು ಬಗೆಯ ಸುಮಾರು 30 ಪೋಸ್ಟರುಗಳನ್ನು ತಯಾರಿಸಲಾಯಿತು. ಇನ್ನೂ ಹೆಚ್ಚಿನವಕ್ಕೆ ಯೋಜನೆ ಮಾಡಲಾಯಿತು. ಸಾಮಾಜಿಕ ಮಾಧ್ಯಮದಲ್ಲಿ – ಪ್ರಮುಖವಾಗಿ "ಸೌಹಾರ್ದತೆಗಾಗಿ ಕರ್ನಾಟಕ" ಫೇಸ್ ಬುಕ್ ಪುಟ – ಮತ್ತಿತರ ಸಾಮಾಜಿಕ ಮಾಧ್ಯಮ ತಾಣಗಳ ಮೂಲಕ ಇವುಗಳನ್ನು ಬಿಡುಗಡೆ ಮಾಡಲಾಗುವುದು. ಈ ಸಂಚಿಕೆಯಲ್ಲಿ ಈ ಐದು ಬಗೆಯ ಪೋಸ್ಟರುಗಳ ಸ್ಯಾಂಪಲುಗಳನ್ನು ಮುಖಪುಟ, ಪುಟ 3 ಮತ್ತು ಪುಟ 8 ರಲ್ಲಿ ಕೊಡಲಾಗಿದೆ.

ಸಮಾವೇಶದಲ್ಲಿ ಆಡಲಾದ ಕೆಲವು ಗಮನಾರ್ಹ ಮಾತುಗಳ ಜಲಕ್........

ಪುಟ 9 ರಿಂದ

ದೇಶದಲ್ಲಿ ಒಬ್ಬರು ದುಃಖಿಯಾಗಿದ್ದರೂ ಆ ದೇಶವನ್ನು ಸುಖೀ ದೇಶವೆಂದು ಹೇಳಲು ಸಾಧ್ಯವಿಲ್ಲ. ವಾಸ್ತವದಲ್ಲಿ ಸಮಾನತೆ ಇಲ್ಲದ ಯಾವ ದೇಶವೂ ಒಂದು ದೇಶವೆಂದು ಕರೆಸಿಕೊಳ್ಳಲು ಅರ್ಹವಲ್ಲ. ಸ್ವಾತಂತ್ರ್ಯ ಬಂದ 70 ವರ್ಷಗಳ ನಂತರವೂ "ನಿನ್ನ ಜಾತಿ ಯಾವುದು" ಎಂದು ಕೇಳಲಾಗುವ ಈ ನೆಲ ದೇಶವೆಂದು ಹೇಗೆ ಕರೆಸಿಕೊಳ್ಳಬಲ್ಲದು?

– ಮಾರ್ಟಿನ್ ಮಾಕ್ವಾನ್

"ಸಂವಿಧಾನ ಬದಲಿಸುತ್ತೇವೆ" ಅಂದ ಮಹನೀಯರಿಗೆ ಒಂದು ಸಂದೇಶ :

ಸ್ವಾಮಿ, ನೀವು ನಮ್ಮ ಸಂವಿಧಾನವನ್ನು ಬದಲಾಯಿಸುವುದು ಅಸಾಧ್ಯ. ಯಾಕೆಂದರೆ ಬಾಬಾ ಸಾಹೇಬ್ ಅಂಬೇಡ್ಕರರು ನಮ್ಮ ಸಂವಿಧಾನವನ್ನು ಕಾಗದದ ಮೇಲೆ ಬರೆದಿಲ್ಲ, ನಮ್ಮ ಹೃದಯಗಳಲ್ಲಿ ಬರೆದಿದ್ದಾರೆ.

ಸಂವಿಧಾನ ನಮ್ಮ ದೇಶದ ಬಹು ದೊಡ್ಡ ಕನಸು. ಆ ಕನಸನ್ನು ಬಾಬಾ ಸಾಹೇಬರು ಬರೆದಿದ್ದಾರೆ. ಯಾರು ಸಾವಿರಾರು ವರ್ಷಗಳ ಕಾಲ ಕ್ರೌರ್ಯವನ್ನು, ಅವಮಾನವನ್ನು ಸಹಿಸಿಕೊಂಡು ಬಂದರೋ ಅವರನ್ನು ಮನುಷ್ಯರು ಎಂದು ಗುರುತಿಸಿರುವ ಸಂವಿಧಾನವನ್ನು ನೀವು ಏನೂ ಮಾಡಲು ಸಾಧ್ಯವಿಲ್ಲ.

ನಮ್ಮ ಸಂವಿಧಾನದೊಳಗೆ ನಮ್ಮ ನೆನಪುಗಳಿವೆ. ನಾವು ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದ ಸೌಹಾರ್ದತೆಯ ನೆನಪುಗಳು ನಮಗೆ ಇದೆ. ಆ ನೆನಪುಗಳನ್ನು ನೀವು ನಾಶ ಮಾಡಲು ಹೊರಟಿದ್ದೀರಿ. ಅದು ಸಾಧ್ಯವಿಲ್ಲ.

– ರಾಜೇಂದ್ರ ಚೆನ್ನಿ

ಸತ್ತವರು ಮಾತ್ರವಲ್ಲ, ಕೊಲ್ಲುವವರೂ ನಮ್ಮ ಮಕ್ಕಳೇ. ನಮ್ಮ ಅಂಗಳದಲ್ಲಿ, ನಮ್ಮ ಶಾಲೆಯಲ್ಲಿ, ನಮ್ಮ ಕಣ್ಣೆದುರಲ್ಲಿ ಬೆಳೆದ ಮಕ್ಕಳು. ಇಂಥ ಮಕ್ಕಳು ಯಾಕೆ ಅತ್ಯಾಚಾರಿಗಳಾಗುತ್ತಾರೆ? ಯಾಕೆ ಕೊಚ್ಚಿ ಕೊಲ್ಲುವ ಕೊಲೆಗಡುಕರಾಗ್ತಾರೆ? ಯಾವುದೋ ಸಂಘಟನೆಯೆಡೆ ಕೈ ತೋರಿ ಸುಮ್ಮನಾಗುವುದು ಸುಲಭ. ಆದರೆ ನಿಜವಾದ ಕಾರಣ ನಮ್ಮ ಮೌನ. ನಮ್ಮ ಅವಕಾಶವಾದದ, ನಿರ್ಲಕ್ಷ್ಯದ ಮೌನ.

– ಡಾ. ವಿನಯಾ ವಕ್ಕುಂದ

ಸಂವಿಧಾನದ ಸ್ತಂಭಗಳು ಒಂದೊಂದೇ ಕುಸಿಯುತ್ತಿವೆ. ಅವನ್ನು ಕುಸಿದುಬೀಳುವಂತೆ ಮಾಡುತ್ತಿರುವವರು ಯಾರು? ನಾವು ಇಂದು ಮಾತನಾಡಲಾಗದ ಸ್ಥಿತಿ ಇದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾಯದಲ್ಲಿದೆ. ಇದಕ್ಕೆಲ್ಲ ಏನು ಕಾರಣ? ಮಾಧ್ಯಮಗಳ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. 2018ರ ಅಂತ್ಯದ ವೇಳೆಗೆ ಯಾವುದಾದರೂ ವಾಹಿನಿ ಬಿಜೆಪಿ ಹಿಡಿತದಿಂದ ಹೊರತಾಗಿ ಉಳಿಯುತ್ತದೆ ಅನ್ನುವ ನಂಬಿಕೆ ನನಗಿಲ್ಲ.

– ಶಶಿಧರ್ ಭಟ್

ಕೊಲೆಯಾದವರ ಕುಟುಂಬಗಳೂ ಅನಾಥವಾಗುತ್ತವೆ. ಕೊಲೆ ಮಾಡಿದವರ ಕುಟುಂಬಗಳೂ ಅನಾಥವಾಗ್ತವೆ. ಯುವಜನರು. ಅದರಲ್ಲೂ ಕರಾವಳಿಯ ಯುವಜನರು ಕೋಮುವಾದದ ಮೂಲಕ ಅಪರಾಧ ಜಗತ್ತನ್ನು ಪ್ರವೇಶಿಸಿ ಕೊಲೆ ಮಾಡುವತನಕವೂ ಹೋಗುವುದನ್ನು ನಾವು ನೋಡುತ್ತಿದ್ದೇವೆ, ಕರಾವಳಿಯ ಜೈಲುಗಳಲ್ಲಿ ಕೂಡಾ ಹಿಂದೂ ಜೈಲು, ಮುಸ್ಲಿಂ ಜೈಲು ಎಂಬ ವಿಭಜನೆ ಇದೆ. ಒಂದು ಸಣ್ಣ ಕಿಡಿ ಹೊತ್ತಿದರೂ ಎರಡು ತಲೆಗಳು ಉರುಳುವಂಥ ಪರಿಸ್ಥಿತಿ ಅಲ್ಲಿದೆ. ಇಂಥ ಸ್ಥಿತಿಯಿಂದ ಸಮಾಜವನ್ನು ಹೊರತರುವ ಜವಾಬ್ದಾರಿ ನಮ್ಮ ಮೇಲಿದೆ.

ಶಿಕ್ಷಣ, ಅರೋಗ್ಯ, ರೈತರ ಸಂಕಷ್ಟಗಳೇ ಮೊದಲಾದ ಬದುಕಿನ ಮೂಲಭೂತ ಪ್ರಶ್ನೆಗಳಿಂದ ನಮ್ಮ ಗಮನವನ್ನು ಬೇರೆಡೆ ತಿರುಗಿಸುವ ಹುನ್ನಾರಕ್ಕೆ ಬಲಿ ಬೀಳದಂತೆ ನಾವು ಎಚ್ಚರವಹಿಸಬೇಕಿದೆ.

– ಮುನೀರ್ ಕಾಟಿಪಳ್ಳ

ನಾವು ಇಂದು ಫ್ಯಾಸಿಸಮ್ಮಿನ ಹೆಬ್ಬಾಗಿಲಲ್ಲಿ ನಿಂತಿದ್ದೇವೆ. ಫ್ಯಾಸಿಸಮ್ ಅಂದರೆ ಭಯ ಹುಟ್ಟಿಸುವುದು. ಭ್ರಮೆಗಳನ್ನು ಹುಟ್ಟಿಸುವುದು. ವೈರಿಗಳನ್ನು ಹುಟ್ಟಿಸಿ ಅವರ ಮನಸಿನಲ್ಲಿ ಕ್ರೌರ್ಯ ಬೆಳೆಯುವಂತೆ ಪ್ರಚೋದಿಸುವುದು. ಒಟ್ಟಾರೆ ಭಾರತದಲ್ಲಿ ಫ್ಯಾಸಿಸಮ್ಮಿನ ವ್ಯಾಖ್ಯಾನವೆಂದರೆ, ಸಂವಿಧಾನವನ್ನು ಅಳಿಸಿ ಹಾಕುವುದು.

ಇಲ್ಲಿಯ ಜನರು ಸಹಜವಾಗಿ ಜಾತ್ಯತೀತರಾಗಿದ್ದಾರೆ. ಆದರೆ ಇವರನ್ನು ಪ್ರಜ್ಞಾಪೂರ್ವಕವಾಗಿ ಕೋಮುವಾದಿಗಳನ್ನಾಗಿ ಮಾಡಲಾಗುತ್ತಿದೆ. ದುಷ್ಕರ್ಮಿಗಳು ನಾಯಕತ್ವ ವಹಿಸಿದಾಗ ಸಜ್ಜನರು ಮನೆಯಲ್ಲಿ ವಿಶ್ಲೇಷಣೆ ಮಾಡುತ್ತ ಕೂತಿರುತ್ತಾರೆ. ಆದ್ದರಿಂದಲೇ ಕೋಮು ಗಲಭೆಗಳಿಗೆ ಅವಕಾಶ ಸೃಷ್ಟಿಯಾಗುತ್ತದೆ.

– ರಂಜಾನ್ ದರ್ಗಾ

ಮನೆಮನೆಗಳಲ್ಲಿ ಮನಮನಗಳಲ್ಲಿ ಹಚ್ಚೇವು ಪ್ರೀತಿಯ ದೀಪ


ಸಮಾವೇಶದ ಮೊದಲು ನಡೆದ 'ಪ್ರೀತಿ ಪದಗಳ ಪಯಣ' (ಸೌಹಾರ್ದತೆಯೆಡೆಗೆ ನಮ್ಮ ನಡಿಗೆ)ವನ್ನು ಅಹ್ಮದಾಬಾದಿನ ಮಾನವ ಹಕ್ಕು ಹೋರಾಟಗಾರ ಮಾರ್ಟಿನ್ ಮಾಕ್ವಾನ್ ಸೌಹಾರ್ದ ಶಿರಸಿಯ ಬಿಡ್ಕಿಬೈಲಿನಲ್ಲಿರುವ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಉದ್ಘಾಟಿಸಿದರು. ಶಿರಸಿಯ ಮುಖ್ಯ ಬೀದಿಗಳ ಮೂಲಕ ಹಾದು ಸಮಾವೇಶದ ತಾಣವಾದ ರಾಘವೇಂದ್ರ ಕಲ್ಯಾಣ ಮಂಟಪದವರೆಗೆ ನೂರಾರು ಸಾಹಿತಿಗಳು ಕಲಾವಿದರು ಚಿಂತಕರು ಸಾಮಾಜಿಕ-ರಾಜಕೀಯ ಕಾರ್ಯಕರ್ತರು ಈ ಮೌನ ಮೆರವಣಿಗೆಯಲ್ಲಿ ಭಾಗವಹಿಸಿದರು. ಮೆರವಣಿಗೆಯಲ್ಲಿ ಪ್ರತಿರೋಧ-ಪ್ರತಿಭಟನೆಯ ಪ್ರತೀಕವಾಗಿ ಹಲಗೆ ಬಾರಿಸುವುದು ಬಿಟ್ಟರೆ ಯಾವುದೇ ಘೋಷಣೆಗಳು ಇರಲಿಲ್ಲ. ನೂರಾರು ಘೋಷಣೆಗಳು, ಚಿಂತಕರ ಸೌಹಾರ್ದ ಮಾತುಗಳು ಕವನದ ಸಾಲುಗಳು ಪ್ಲೇಕಾರ್ಡುಗಳಲ್ಲಿ ಮಾತ್ರ ಇದ್ದವು. ದಾರಿಯುದ್ದಕ್ಕೂ ಶಿರಸಿಯ ಜನ ಈ ವಿಶಿಷ್ಟ ಮೆರವಣಿಗೆ ನಿಂತು ನೋಡಿದ್ದಲ್ಲದೆ ಪಾನೀಯಗನ್ನು ಕೊಟ್ಟು ಉಪಚರಿಸಿದರು. ಈ ಪಯಣದಲ್ಲಿ ಪ್ಲೇಕಾರ್ಡುಗಳಲ್ಲಿ

ಕಂಡುಬಂದ ಘೋಷಣೆಗಳು ಈ ಕೆಳಗಿನಂತಿವೆ :

- ದೀಪದಿಂದ ದೀಪ ಹಚ್ಚಿ ಬೆಳಗೋಣ ಸಾಲು ದೀಪಗಳ...
- ಸೌಹಾರ್ದ ಕರ್ನಾಟಕ, ಸರ್ವ ಜನಾಂಗದ ಶಾಂತಿಯ ತೋಟ
- ಮನೆಮನೆಗಳಲ್ಲಿ ಮನಮನಗಳಲ್ಲಿ ಹಚ್ಚೇವು ಪ್ರೀತಿಯ ದೀಪ.
- ತಲೆ ಎತ್ತಿ ನಡೆಯುವ, ಸಮಪಾಲು ಪಡೆಯುವ
- ಪ್ರೀತಿ, ಕರುಣೆ ಬಾಳ ಬೆಳೆ, ದ್ವೇಷ-ಹಿಂಸೆ ಜಗದ ಕೊನೆ
- ಹಿಂಸೆಗಾಗಿ ಎತ್ತೋ ಕೈ ತಡೆದು ನಿಲ್ಲಿಸುವಂಥ, ಕಾಲ ಈಗ ಬಂದೇ ಬಂದಿತು
- ದ್ವೇಷ ಗಾಯಗೊಳಿಸುವುದು, ಸೌಹಾರ್ದ ಮಾಯಿಸುವುದು
- ಬೆಂಕಿ ಹಚ್ಚುವುದಿಲ್ಲ ಹಣತೆ ಬೆಳಗುತ್ತೇವೆ.
- ಊರ ನೆಮ್ಮದಿ ಭವ್ಯ ಭವಿಷ್ಯದ ಹಾದಿ
- ದ್ವೇಷ ಬಿಡಿ ಶಾಂತಿ ಕಾಪಾಡಿ
- ಶಿಶುವ ಹಡೆಯದ ನಿಮಗೆ, ಕೊಲ್ಲುವ ಹಕ್ಕಿದೆಯೆ?
- ಸಾಯಿಸುವವನಿಗೆ, ಬದುಕುವ ನೈತಿಕತೆಯೆಲ್ಲಿದೆ?

ಮಾರ್ಕ್ಸ್‌ವಾದಿ ಪ್ರೊ. ಜೆ.ಆರ್.ಲಕ್ಷ್ಮಣರಾವ್ ಇನ್ನಿಲ್ಲ

ವಿ.ಎನ್.ಲಕ್ಷ್ಮೀನಾರಾಯಣ



ಪ್ರೊ. ಜೆ.ಆರ್.ಲಕ್ಷ್ಮಣರಾವ್ ಅವರನ್ನು ಬಲ್ಲವರು ಪರಿಚಯಿಸುವಾಗ ಸಾಮಾನ್ಯವಾಗಿ ಹೇಳುವ ಮಾತುಗಳೆಂದರೆ ಅವರು ಜನಪ್ರಿಯ ವಿಜ್ಞಾನ ಲೇಖಕರು, ಪ್ರಗತಿಪರ ಚಿಂತಕರು, ಶಿಷ್ಯರಿಗೆ ಅತ್ಯಂತ ಪ್ರೀತಿಪಾತ್ರರಾದ ಅಧ್ಯಾಪಕರು, ಸಂಗೀತಪ್ರೇಮಿಗಳು ಮತ್ತು ವೈಜ್ಞಾನಿಕ ಮನೋಭಾವವನ್ನು ತಮ್ಮ ಸುತ್ತಲಿನ ಜನರಲ್ಲಿ ಪರಿಸರದಲ್ಲಿ ಪ್ರಸರಿಸಲು ಶ್ರಮಿಸಿದವರು. ಅಷ್ಟೇ ಅಲ್ಲ, ಅಣುವಿದ್ಯುತ್ ಉತ್ಪಾದನೆ ಮನುಕುಲಕ್ಕೆ ಅತ್ಯಂತ ಅಪಾಯಕಾರಿಯಾದ ತಂತ್ರಜ್ಞಾನವಾದ್ದರಿಂದ ತಿರಸ್ಕರಿಸಬೇಕೆಂದು ಪ್ರತಿಪಾದಿಸಿದ, ಬಲವಾಗಿ ವಿರೋಧಿಸಿದ ಪ್ರಜ್ಞಾವಂತ ಕಾರ್ಯಕರ್ತರು.

ಪ್ರೊ. ಜೆ.ಆರ್.ಲಕ್ಷ್ಮಣರಾವ್ ರವರ ವಿಜ್ಞಾನ ಬರಹಗಳನ್ನು ಮಾತ್ರ ಓದಿ ಮೆಚ್ಚಿಕೊಂಡ ಅನೇಕರಿಗೆ ಅವರು ತಮ್ಮ ಬೌದ್ಧಿಕ ಚಿಂತನೆ–ನಿಲುವುಗಳಿಗೆ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ತಳಹದಿಯನ್ನಾಗಿ ಮಾಡಿಕೊಂಡವರು ಎಂಬುದು ತಿಳಿದಿರಲಾರದು. ಮಾತ್ರವಲ್ಲ ಸಾಮಾಜಿಕ ಬದಲಾವಣೆಯನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡು ಜನಪರವಾದ ನ್ಯಾಯ–ಸುಖ–ನೆಮ್ಮದಿಗಳನ್ನು ಸಾಧಿಸಲು ಇರುವ ಏಕೈಕ ಸಮಗ್ರ ತಾತ್ವಿಕ ದೃಷ್ಟಿಕೋನ ಮಾರ್ಕ್ಸ್‌ವಾದವೇ ಎಂಬುದನ್ನು ಅಸಂದಿಗ್ಧವಾಗಿ ಪ್ರತಿಪಾದಿಸುತ್ತಿದ್ದ ವಿಜ್ಞಾನಿ ಎಂಬುದೂ ಅನೇಕರಿಗೆ ಗೊತ್ತಿಲ್ಲ. ಗೊತ್ತಿದ್ದರೂ ವಿಜ್ಞಾನಿಯಾದವನು ಮಾರ್ಕ್ಸ್‌ವಾದಿಯೂ ಆಗಿರುವುದು ಸಾಧ್ಯವೆ? ಎಂಬ ಪ್ರಶ್ನೆ ಒಳಗೊಳಗೇ ಕಾಡುತ್ತದೆ.

ಏಳು ವರ್ಷಗಳ ಹಿಂದೆ ಅವರೊಂದಿಗೆ ನಡೆಸಿದ ಮಾತುಕತೆಯಲ್ಲಿ ನಾನು ಲಕ್ಷ್ಮಣರಾವ್ ಅವರನ್ನು ಕೇಳಿದ ಮೊದಲ ಪ್ರಶ್ನೆ–

"ಸರ್ ನೀವು ಮಾರ್ಕ್ಸ್‌ವಾದವನ್ನು ಒಳಗೊಂಡ ಬಗೆ ಹೇಗೆ?'

ಅದಕ್ಕೆ ಉತ್ತರವಾಗಿ ಮತ್ತು ನಾನು ಕೇಳುತ್ತಲೇ ಹೋದ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಪ್ರೊ.ಜೆ.ಆರ್. ಎಲ್. ಹೇಳಿದ್ದನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದೇನೆ.

ಗಾಂಧೀಜಿಯನ್ನು ವಿರೋಧಿಸಿ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದ ಸುಭಾಸ್‌ಚಂದ್ರಬೋಸ್ ಆಗ ಹೈಸ್ಕೂಲಿನಲ್ಲಿ ಓದುತ್ತಿದ್ದ ಲಕ್ಷ್ಮಣರಾವ್‌ಗೆ, ರಾಜಕೀಯ ತತ್ವಗಳ ಬಗ್ಗೆ ಏನೊಂದೂ ತಿಳಿಯದ ಆ ವಯಸ್ಸಿನಲ್ಲಿ, ಅವರ ಪಾಲಿನ ಹೀರೋ. ವೈಯ್ಯಕ್ತಿಕವಾಗಿ ಗಾಂಧೀಜಿಯ ಬಗ್ಗೆ ಅಪಾರ ಗೌರವ. ಆದರೆ ಅವರ ತತ್ವಗಳ ಬಗ್ಗೆ ಪ್ರೀತಿಯಿಲ್ಲ. ಸುಭಾಸ್‌ಚಂದ್ರರ ಬಗ್ಗೆ ಅಭಿಮಾನ. ಎರಡೂ ಒಟ್ಟಿಗೆ ಸಾಧ್ಯವೆ? ಸಾಧ್ಯ. ಡಯಲೆಕ್ಟಿಕ್ಸ್ ಅಂದರೆ ಅದೇ ಅಲ್ಲವೆ?

ಇಂಟರ್‌ಮೀಡಿಯಟ್‌ಗೆ ಬರುವ ಹೊತ್ತಿಗೆ ಕೆ. ಶ್ರೀನಿವಾಸನ್ (ಭೌತಶಾಸ್ತ್ರ) ಪರಿಚಯಿಸಿದ ಎಂ.ಎನ್. ರಾಯ್. ಮುಖೇನದ ಮಾರ್ಕ್ಸ್‌ವಾದ. ವಿಜ್ಞಾನದ ಬಗ್ಗೆ ಅಷ್ಟೊಂದು ನಿಷ್ಠೆ–ಪ್ರೀತಿಗಳಿರುವ ಜೆ.ಆರ್.ಎಲ್. ಅದನ್ನು ಸಾಮಾಜಿಕ ನೆಲೆಗೆ ವಿಸ್ತರಿಸಬಾರದೇಕೆ? ಎಂಬ ಮಿತ್ರನ ಸಲಹೆಯಿಂದಾಗಿ ಎಡಪಂಥದ ಪರಿಚಯ ಆಯಿತು. ಆನರ್ಸ್‌ನಲ್ಲಿ ಮತ್ತೊಬ್ಬ ಕೆ. ಶ್ರೀನಿವಾಸನ್ (ರಸಾಯನ ಶಾಸ್ತ್ರ) ಪರಿಚಯಿಸಿದ ಮತ್ತೊಂದು ಮಗ್ಗುಲಿನಿಂದ ಪರಿಚಯಿಸಿದ ಮಾರ್ಕ್ಸ್‌ವಾದ. ಎರಡರಲ್ಲಿ ಯಾವುದು ಹೆಚ್ಚು ಸಮ್ಮತ? ಜೆ.ಆರ್. ಎಲ್ ಗೆ ಕಂಡಂತೆ ಎಮ್.ಎನ್.ರಾಯ್ ನಿಷ್ಠರು 'ಬೌದ್ಧಿಕ ಸ್ನಾಬ್'ಗಳು. 'ನನಗೆ ಮಾತ್ರ ಗೊತ್ತು– ನಿನಗೆ ಗೊತ್ತಿಲ್ಲ' ಎಂಬಂಥ ಧೋರಣೆಯಿಂದ ಬೀಗುವ ಹಿರಿತನದ ಅಹಂ ಉಳ್ಳವರು. ಆದರೆ, ಮಾರ್ಕ್ಸ್‌ವಾದಿಗಳು ಹಾಗಲ್ಲ. ಸಮಾನ ನೆಲೆಯಲ್ಲಿ ನಿಂತು ವಾಗ್ವಾದ ನಡೆಸುವವರು. ಆದ್ದರಿಂದ ಜೆ.ಆರ್. ಎಲ್. ಆರಿಸಿಕೊಂಡಿದ್ದು ಮಾರ್ಕ್ಸ್‌ವಾದವನ್ನು. ಹೀಗೆ ಅವರ ವೈಜ್ಞಾನಿಕ ಮನೋವೃತ್ತಿಗೆ ಸಂಗತವಾಗಿ ಬೌದ್ಧಿಕ ಸಂತೋಷವನ್ನು ಕೊಟ್ಟ ಸಾಮಾಜಿಕ ಮತ್ತು ರಾಜಕೀಯ ತಾತ್ವಿಕತೆ ಮಾರ್ಕ್ಸ್‌ವಾದ. ಕಾಲಕಳೆದಂತೆ ಕಮ್ಯುನಿಸ್ಟ್ ಪಕ್ಷದಲ್ಲಿ ಸಕ್ರಿಯರಾಗಿದ್ದ ಕಾಮ್ರೇಡ್ ಉಪಾಧ್ಯಾಯ ಮತ್ತು ಆನಂತರ 'ನಿರಂಜನ'ರೆಂದು ಸಾಹಿತ್ಯಕ್ಷೇತ್ರದಲ್ಲಿ ಹೆಸರು ಮಾಡಿದ ಕಾಮ್ರೇಡ್ ಕುಳುಕುಂದ ಶಿವರಾಯ, ಪೊನ್ನಯ್ಯ ಸಹೋದರರು ಹೀಗೆ ಅನೇಕ ಕಾಮ್ರೇಡ್‌ಗಳ ಸಂಪರ್ಕಕ್ಕೆ ಬಂದರು. ಆದರೂ ಜೆ.ಆರ್.ಎಲ್ ತಮ್ಮ ಸ್ವಭಾವದಿಂದಾಗಿ ರಾಜಕೀಯ ಕಾರ್ಯಕರ್ತರಾಗಲಿಲ್ಲ. ಅವರೇ ಹೇಳುವಂತೆ ಒಬ್ಬ ಕಮ್ಯುನಿಸ್ಟ್ ಕಾರ್ಯಕರ್ತ ಎನ್ನುವುದಕ್ಕಿಂತಾ ಎಡಪಂಥೀಯ ಬುದ್ಧಿಜೀವಿ ಎನ್ನುವುದೇ ಹೆಚ್ಚು ಸೂಕ್ತ.

ಪ್ರಶ್ನೆ: ಬೌದ್ಧಿಕ ಸಂತೋಷವನ್ನು ಕೊಡುವುದಕ್ಕಾದರೆ ಬೇರಾವುದಾದರೂ ತಾತ್ವಿಕ ದೃಷ್ಟಿ ಆಗಬಹುದಿತ್ತಲ್ಲ? ಮಾರ್ಕ್ಸ್‌ವಾದವೇ ಏಕೆ? ಭಾರತೀಯ ತತ್ವಶಾಸ್ತ್ರ, ಪಾಶ್ಚಿಮಾತ್ಯ ತತ್ವಶಾಸ್ತ್ರಗಳಲ್ಲಿ ಯಾವುದಾದರೂ ಆಗಬಹುದಿತ್ತಲ್ಲ?

ಇಲ್ಲ. ಅವೆಲ್ಲಾ ಊಹಾತ್ಮಕಸತ್ವವನ್ನು ಅನ್ವೇಷಿಸುವ ತರ್ಕವನ್ನು ಆಧರಿಸಿದವು. ವಾಸ್ತವವನ್ನು ಆಧರಿಸಿ ನಮ್ಮ ದಿನನಿತ್ಯದ ಅನುಭವಗಳನ್ನು ತರ್ಕಬದ್ಧವಾಗಿ ವಿವರಿಸುವ ತಾತ್ವಿಕತೆ ಮಾರ್ಕ್ಸ್‌ವಾದವೊಂದೇ. ಸಾಮಾಜಿಕ ಸತ್ವಗಳನ್ನು ಗತಿತಾರ್ಕಿಕ ವಿಧಾನದಲ್ಲಿ ಕಂಡುಕೊಳ್ಳುವ ಅದರ ವಿಧಾನ ವೈಜ್ಞಾನಿಕ ವಿಧಾನಕ್ಕೆ ಹೊಂದುವಂಥದು. ಆದ್ದರಿಂದಲೇ ಯೂನಿವರ್ಸ್ ಆಫ್ ಸೈನ್ಸ್ ಬರೆದ ಹೈಮನ್ ಲೆವಿನ್, ಬರ್ನಾಲ್ ಮುಂತಾದ ವಿಶ್ವದ ಅನೇಕ ಹೆಸರಾಂತ ವಿಜ್ಞಾನಿಗಳು ತಮ್ಮನ್ನು ಮಾರ್ಕ್ಸ್‌ವಾದಿಗಳೆಂದು ಗುರುತಿಸಿಕೊಂಡಿದ್ದಾರೆ.

ಪ್ರಶ್ನೆ: ಆದರೆ, ಮಾರ್ಕ್ಸ್‌ವಾದಕ್ಕೆ ಮೊದಲಿನಿಂದಲೂ ಒಂದು 'ಕಳಂಕ' ಅಂಟಿಕೊಂಡು ಬಂದಿದೆ. ಅದು 'ಹಿಂಸೆಯನ್ನು ಪ್ರತಿಪಾದಿಸುತ್ತದೆ.' ನಿಮಗೂ ಹಾಗೆನ್ನಿಸಿದ್ದಿದೆಯೆ?


ಮಾರ್ಕ್ಸ್‌ವಾದ ಹಿಂಸೆಯನ್ನು ಪ್ರತಿಪಾದಿಸುವುದಿಲ್ಲ. ಹಿಂಸೆ ಇರುವುದು ವಾದದಲ್ಲಿ ಅಲ್ಲ. ನಿಸರ್ಗದಲ್ಲೇ ಹಿಂಸೆಯಿದೆ. ಹಳೆಯದರ ಅವನತಿಯಲ್ಲಿ, ಹೊಸದರ ಹುಟ್ಟಿನಲ್ಲಿ ಹಿಂಸೆಯಿದೆ. ಅದು ಅಪರಿಹಾರ್ಯ. ಅನಿವಾರ್ಯ. ಸಾಮಾಜಿಕ ಬದಲಾವಣೆಯಲ್ಲಿರುವ ಈ ಹಿಂಸೆಯನ್ನು ಮಾರ್ಕ್ಸ್‌ವಾದ ವಿವರಿಸುತ್ತದೆಯೇ ಹೊರತು ಪ್ರತಿಪಾದಿಸುವುದಿಲ್ಲ.

ಪ್ರಶ್ನೆ: ಗಾಂಧಿವಾದಿಗಳು ಅಹಿಂಸೆಯನ್ನು ಪ್ರತಿಪಾದಿಸುತ್ತಾರೆ. ಅವರ ಆಶಯದ ಕಲ್ಯಾಣಸಮಾಜವನ್ನು ಸಾಕ್ಷಾತ್ಕರಿಸಿಕೊಳ್ಳಲು ಹಿಂಸೆ ಅನಿವಾರ್ಯವಲ್ಲ ಎನ್ನುತ್ತಾರೆ. ಲೋಹಿಯಾವಾದಿಗಳೂ ಸಹ ಹಿಂಸೆಯನ್ನು ಕಳಚಿದ ಮಾರ್ಕ್ಸ್‌ವಾದವೇ ಗಾಂಧಿವಾದ ಎನ್ನುವ ಅರ್ಥದಲ್ಲಿ ಮಾರ್ಕ್ಸ್‌ವಾದದ ಪುರಸ್ಕಾರ–ತಿರಸ್ಕಾರ ಎರಡನ್ನೂ ಮಾಡುತ್ತಾರೆ. ಅಂಥದ್ದೊಂದು ಪಾಕ ಸಾಧ್ಯವೆ?

ಆಶಯ ಸರಿಯಾಗಿದೆ. ಆದರೆ ಅದು ವಾಸ್ತವವಾಗಿ ಸಾಧ್ಯವಾಗದ್ದು. ಇದರ ಅರ್ಥ ನಾನು ಹಿಂಸೆಯನ್ನು ಬಯಸುತ್ತಿಲ್ಲ. ಅದು ಅನಿವಾರ್ಯ ಅಷ್ಟೆ.

ಪ್ರಶ್ನೆ: ಅಸಮಾನತೆ, ಶೋಷಣೆ ಮತ್ತು ಅನ್ಯಾಯಗಳಿಂದ ಮುಕ್ತವಾದ ಸಮಸಮಾಜವನ್ನು ಕಟ್ಟಲು ಬೇಕಾದಷ್ಟು ದಾರಿಗಳಿರಬಹುದಲ್ಲವೆ? ಮಾರ್ಕ್ಸ್‌ವಾದವೇ ಏಕೆ? ಉದಾಹರಣೆಗೆ, ಗಾಂಧಿವಾದ, ಅಥವಾ ಈಚಿನ ದಿನಗಳಲ್ಲಿ ಅನೇಕರು ಪ್ರತಿಪಾದಿಸುತ್ತಿರುವ ಎಡ–ಬಲ ಎರಡೂ ಅಲ್ಲದ, ಎರಡರ ಪಾಕವಾಗಿರಬಹುದಾದ ಮಧ್ಯಮ ಮಾರ್ಗ ಯಾಕಾಗಬಾರದು?

ನಾನು ಮಾರ್ಕ್ಸ್‌ವಾದವನ್ನು ತುಂಬಾ ಆಳವಾಗಿ ಅಭ್ಯಾಸಮಾಡಿಲ್ಲ. ಆದರೆ ನನಗಿರುವ ಸೀಮಿತ ಅಭ್ಯಾಸದಿಂದ ಹೇಳುವುದಾದರೆ ಬೇರೆಲ್ಲಾ ಮಾರ್ಗಗಳು ಸಮಾಜವನ್ನು ಇಡಿಯಾಗಿ ನೋಡುವುದಿಲ್ಲ. ಕೆಲವು ಸಮಸ್ಯೆಗಳ ಪರಿಹಾರಕ್ಕೆ ಕೆಲವು ಮಾರ್ಗಗಳು ಸ್ವಲ್ಪದೂರದ ವರೆಗೆ ಸರಿಯಾಗಬಹುದು. ಅವೆಲ್ಲಾ ಸಮಸ್ಯೆಯನ್ನು ಆಂಶಿಕವಾಗಿ ನೋಡುತ್ತವೆ. ಸಮಗ್ರವಾಗಿ ನೋಡುವುದಿಲ್ಲ. ಮಾರ್ಕ್ಸ್‌ವಾದಕ್ಕೆ ಮಾತ್ರ ಸಮಗ್ರ ದೃಷ್ಟಿ ಸಾಧ್ಯ.



'ಇಂದಿನ ಸಂದರ್ಭದಲ್ಲಿ ಬಂಡವಾಳವಾದದ ಕೈ ಮೇಲಾಗಿದೆ, ಮಾರ್ಕ್ಸ್‌ವಾದ ಅದರ ಮುಂದೆ ಬಲಹೀನವಾಗಿದೆ. ಎಡಪಂಥೀಯರು ಜಾಗತಿಕವಾಗಿ ಬಹುಸಂಖ್ಯಾತರಾಗಿದ್ದರೂ ಕ್ರಾಂತಿ ಸಂಭವಿಸಿಲ್ಲ' ಎನ್ನುವ ಭಾವನೆ ನಮ್ಮಲ್ಲನೇಕರಿಗೆ ಇದೆ. ಏನು ಕಾರಣ ಇರಬಹುದು?

ಆಗಿಲ್ಲ ಎಂದರೆ, ಇಲ್ಲಿಯತನಕ ಆಗಿಲ್ಲ, ಅಷ್ಟೆ. ಕ್ರಾಂತಿ ಸಂಭವಿಸಲು ಬೇಕಾದ ಸಂದರ್ಭಗಳು ನಿರಪೇಕ್ಷವಾಗಿ ಒದಗುವವರೆಗೂ ನಾವು ಕಾಯಬೇಕು. ನಮ್ಮ ವ್ಯಕ್ತಿಗತ ಆಸೆಯಿಂದ ಅದು ಸಾಧಿತವಾಗುವುದಿಲ್ಲ.

ಪ್ರಶ್ನೆ: ಆದರೆ, ಈ ದಿಕ್ಕಿನಲ್ಲಿ ನಮ್ಮ ಕಮ್ಯುನಿಸ್ಟ್ ಪಕ್ಷಗಳು ಬಿಡಿ ಬಿಡಿಯಾಗಿ ಕೆಲಸಮಾಡುತ್ತಿವೆಯಲ್ಲ?

ಹೌದು ಅವೆಲ್ಲಾ ಒಂದಾಗಬೇಕು. ಒಂದೇ ವೇದಿಕೆಗೆ ಬರಬೇಕು. ಇದು ನನ್ನ ವ್ಯಕ್ತಿಗತ ಅಪೇಕ್ಷೆ.

ಅದಾಗಲೇ 90 ವರ್ಷಗಳ ತುಂಬುಜೀವನ ನಡೆಸಿದ್ದ ಮಾರ್ಕ್ಸ್‌ವಾದಿ, ನಿರೀಶ್ವರವಾದಿ ಜೆ.ಆರ್. ಎಲ್. ಅವರ ಆಶಾವಾದಿತ್ವ, ಅಚಲ ನಿಷ್ಠೆ, ನಾವು ಬಯಸುವ ಸಾಮಾಜಿಕ ಬದಲಾವಣೆಗಾಗಿ ಚಡಪಡಿಸುವ ನಮ್ಮಂಥವರಲ್ಲಿ ಕಾಣಿಸಿಕೊಳ್ಳಬಹುದಾದ ನಿರಾಶೆಯನ್ನು ಒದ್ದೋಡಿಸುತ್ತದೆ. ಭರವಸೆ, ಶಕ್ತಿ ಚೈತನ್ಯಗಳನ್ನು ತುಂಬುತ್ತದೆ.

ಜೆ.ಆರ್. ಲಕ್ಷ್ಮಣರಾವ್ ಅವರಂಥ ಮಾರ್ಕ್ಸ್‌ವಾದಿ– ಬರಹಗಾರರು–ಚಿಂತಕರು–ಚಳುವಳಿಗಾರರ ಬಗ್ಗೆ ಮಾತನಾಡುವಾಗ ಅನೇಕ ಬರಹಗಾರರು, ಬುದ್ಧಿಜೀವಿಗಳು, ಸಾಹಿತ್ಯಕ ವೇದಿಕೆಗಳಿಂದ ಅಧಿಕಾರಯುತವಾಗಿ ಹೇಳುವ ಮಾತುಗಳಲ್ಲಿ ಸಹೃದಯಿ, ಹಿರಿಯ ಜೀವ, ಆದರ್ಶತಂದೆ, ಹೆಂಡತಿಯನ್ನು ಸಮಾನವಾಗಿ ಕಂಡ ಪತಿ, ಸಂಗೀತ ಪ್ರೇಮಿ, ಸುಸಂಸ್ಕೃತ, ಪ್ರಗತಿಪರ ಲೇಖಕ, ವೈಜ್ಞಾನಿಕ ದೃಷ್ಟಿಯ ಚಿಂತಕ, ಹೀಗೆ ಏನೆಲ್ಲಾ ವಿಶೇಷಣಗಳಿರುತ್ತವೆ. ಆದರೆ ಅವರು ಮಾರ್ಕ್ಸ್‌ವಾದಿಯಾಗಿದ್ದರು ಎಂಬುದನ್ನು ಹೇಳಲು ಈ ಜನರು ಸಂಕೋಚಪಡುತ್ತಾರೆ. ಅಥವಾ ಅವರು ಮಾರ್ಕ್ಸ್‌ವಾದಿಯಾಗಿದ್ದರೂ ಸಹ ಇವೆಲ್ಲಾ ವಿಶೇಷಣಗಳಿಗೆ ಪಾತ್ರರಾಗಿದ್ದಾರೆ ಎಂಬರ್ಥಬರುವಂತೆ ಹೇಳಿ ಮಾರ್ಕ್ಸ್‌ವಾದದ ಬಗೆಗೆ ತಮಗಿರುವ ಅಜ್ಞಾನವನ್ನು, ವರ್ಗಹಿತಾಸಕ್ತಿ ಪ್ರೇರಿತವಾದ ಪೂರ್ವಗ್ರಹವನ್ನು ಹೊರಗೆಡುವುತ್ತಾರೆ. 97 ವರ್ಷಗಳ ತುಂಬು ಜೀವನವನ್ನು ನಡೆಸುತ್ತಾ ಕಾಲವಶರಾದ ಜೆ.ಆರ್. ಲಕ್ಷ್ಮಣರಾವ್ ಮಾರ್ಕ್ಸ್‌ವಾದ ಬಗೆಗಿನ ತಮ್ಮ ಅಚಲ ನಿಷ್ಠೆಯಿಂದಾಗಿಯೇ ಸಮಗ್ರ ದೃಷ್ಟಿಯ ಗತಿತಾರ್ಕಿಕ ಭೌತಿಕತೆಯ ಪೂರ್ಣಾರ್ಥದಲ್ಲಿ ಮನುಷ್ಯರಾಗಿ ಮೇಲಿನ ಎಲ್ಲಾ ವಿಶೇಷಣಗಳಿಗೂ ಪಾತ್ರರಾದವರು ಎಂಬುದನ್ನು ವಿಶೇಷವಾಗಿ ನೆನೆಯಬೇಕು.

ಜನವರಿ 31, 2018 ರ ಗ್ರಹಣದ ಉತ್ತಮ ವೀಕ್ಷಣೆ ಹೇಗೆ?

ಗ್ರಹಣದ ಮುನ್ನವೇ ವೀಕ್ಷಣೆಯ ಯೋಜನೆ ಮಾಡಿಕೊಳ್ಳುವುದು ಬಹಳ ಮಹತ್ತರವಾದ ಅಂಶ.

ಉಪಕರಣಗಳು:

ವೀಕ್ಷಣೆಗೆ ವಿಶೇಷ ಉಪಕರಣಗಳೇನೂ ಬೇಕಾಗಿಲ್ಲ. ಬರಿಗಣ್ಣಿನಿಂದಲೇ ವೀಕ್ಷಿಸಿ ಆನಂದಿಸಬಹುದು. ಗ್ರಹಣದ ಮುನ್ನ, ಗ್ರಹಣದ ಸಂದರ್ಭದಲ್ಲಿ ಮತ್ತು ನಂತರದಲ್ಲಿ ಬರಿಗಣ್ಣಿನ ವೀಕ್ಷಣೆ ಏನೂ ಅಪಾಯವಿಲ್ಲ. ಸಾಧ್ಯವಿದ್ದಲ್ಲಿ ಗ್ರಹಣದ ವಿವಿಧ ಹಂತಗಳನ್ನು ವೀಕ್ಷಿಸಲು ಬೈನಾಕ್ಯುಲರ್ಸ್ ಅಥವಾ ದೂರದರ್ಶಕ ಬಳಸಬಹುದು. ಸಂಪೂರ್ಣ ಗ್ರಹಣದ ಸಮಯ, ಒಟ್ಟಾರೆ ಗ್ರಹಣದ ಸಮಯವನ್ನು ಬರೆದುಕೊಳ್ಳಲು ಗಡಿಯಾರ, ಪೆನ್ನು, ಕಾಗದ ಮತ್ತು ಫೋಟೋ ತೆಗೆಯಲು ಕ್ಯಾಮರಾ ಇಟ್ಟುಕೊಳ್ಳಬಹುದು.

ಹಂತ 1: ಚಂದ್ರೋದಯದ ಸಮಯ, ನೀವಿರುವ ಸ್ಥಳದಲ್ಲಿ ಸಂಪೂರ್ಣ ಮತ್ತು ಪಾರ್ಶ್ವಗ್ರಹಣಗಳ ಸಮಯವನ್ನು ಮೊದಲೇ ತಿಳಿದುಕೊಳ್ಳಿ. ಚಂದ್ರೋದಯದ ಸಮಯವೆಂದರೆ ಚಂದ್ರ ದಿಗಂತವನ್ನು ದಾಟಿ ಮೇಲೆ ಬರುವ ಸಮಯ. ಇದನ್ನು ವಿವಿಧ ವೆಬ್‌ಸೈಟುಗಳಿಂದ ಪಡೆಯಬಹುದು. (ಉದಾ:www.timeanddate.com.) ಕರ್ನಾಟಕದಲ್ಲಿ 2018 ರ ಜನವರಿ 31 ರಂದು ಚಂದ್ರೋದಯದ ಸಮಯದ ವ್ಯಾಪ್ತಿ : 18.13 ಗಂಟೆಯಿಂದ (ಉದಾ: ಮುಳಬಾಗಿಲು) 18.28 ಗಂಟೆಯವರೆಗೆ (ಉದಾ: ಕಾರವಾರ) ಇರುತ್ತದೆ.

ಹಂತ 2: 2018 ರ ಜನವರಿ 31 ಕ್ಕೆ ಮುನ್ನವೇ ವೀಕ್ಷಣೆಗೆ ಸೂಕ್ತ ಸ್ಥಳವನ್ನು ಗುರುತಿಸಿಕೊಳ್ಳಿ:

– ಪೂರ್ವ (ನಿಖರವೆಂದರೆ ಪೂರ್ವೋತ್ತರ) ದಿಶೆಯಲ್ಲಿ ಗ್ರಹಣವು ಸ್ಪಷ್ಟವಾಗಿ ಕಾಣುವುದು. ದೊಡ್ಡ ದೊಡ್ಡ ಕಟ್ಟಡಗಳು. ಮರಗಳು, ಬೆಟ್ಟಗಳು ಅಡ್ಡವಿಲ್ಲದಂತೆ, ದಿಗಂತದ ಹತ್ತಿರ ಚಂದ್ರೋದಯ ಸ್ಪಷ್ಟವಾಗಿ ಕಾಣುವಂತಹ ಸ್ಥಳವಾಗಿರಲಿ. ಎತ್ತರದ ಪ್ರದೇಶದಲ್ಲಿ ನಿಂತು ವೀಕ್ಷಿಸುವುದು ಒಳ್ಳೆಯದು (ಎತ್ತರದ ಕಟ್ಟಡ ಅಥವಾ ಬೆಟ್ಟದ ತುದಿ)

ಗ್ರಹಣ ವೀಕ್ಷಣೆಗೆ ಬಂದ ಜನರೆಲ್ಲ ಯಾವುದೇ ತೊಂದರೆಯಿಲ್ಲದೆ ವೀಕ್ಷಿಸುವಂತಹ ಸುರಕ್ಷಿತ ಪ್ರದೇಶವಾಗಿರಲಿ.

ವೀಕ್ಷಣೆಗೆ ಆಯ್ಕೆ ಮಾಡಿಕೊಂಡ ಸ್ಥಳ ಕತ್ತಲೆಯಿಂದ ಕೂಡಿದ್ದಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ, ಕಾರಣ ಗ್ರಹಣದ ಚಂದ್ರ ಮಸುಕಾಗಿರುತ್ತದೆ. ನಗರದ ಬೆಳಕು ಮಾಲಿನ್ಯದಿಂದ ಹೊರಗಿರುವ ಪ್ರದೇಶಗಳು ವೀಕ್ಷಣೆಗೆ ಹೆಚ್ಚು ಪರಿಣಾಮಕಾರಿ. ಹಳ್ಳಿಗಳು ಮತ್ತು ಜನವಸತಿ ಪ್ರದೇಶಗಳಲ್ಲಿ ಸ್ವಲ್ಪ ಸಮಯ ಬೀದಿ ದೀಪಗಳನ್ನು ಆರಿಸಲು ಕೋರಬಹುದು.

ಹಂತ 3: ಜನವರಿ 2ರ ಹುಣ್ಣಿಮೆಯಂದು ಅಥವಾ ಹತ್ತಿರದ ದಿನಗಳಂದು ನಿಮ್ಮ ಗ್ರಹಣ ವೀಕ್ಷಣೆಯ ಸ್ಥಳವನ್ನು ಪರೀಕ್ಷಿಸಿಕೊಳ್ಳುವುದು ಒಳ್ಳೆಯದು

(ಜನವರಿ 31, 2018 ರ ಗ್ರಹಣದ ಬಗ್ಗೆ ಮೂಲ ಲೇಖನ ಪುಟ 16ರಲ್ಲಿ ಇದೆ)

ಇತ್ತ ಜನಗಳ ಮೇಲೆ ದಾಖಲೆ ಹಣದುಬ್ಬರದ ಹೊರೆ –ಅತ್ತ ರೈತಾಪಿಗಳಿಗೆ ಮತ್ತಷ್ಟು ಬೆಲೆಕುಸಿತದ ಭೀತಿ



ವೇದರಾಜ ಎನ್.ಕೆ.

ಡಿಸೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ದರ ಕಳೆದ 17ತಿಂಗಳುಗಳಲ್ಲೇ ಅತಿ ಹೆಚ್ಚಿನ ಮಟ್ಟಕ್ಕೆ ಏರಿರುವ ಸುದ್ದಿ ಬಂದಿದೆ. ಗ್ರಾಹಕ ಬೆಲೆ ಸೂಚ್ಯಂಕ ಕಳೆದ ಡಿಸೆಂರ್‌ನಲ್ಲಿ 3.41% ಇದ್ದದ್ದು ಈ ಡಿಸೆಂಬರ್‌ನಲ್ಲಿ 5.2%ಕ್ಕೆ ಏರಿದೆ. ನವಂಬರ್‌ನಲ್ಲಿ ಇದು 4.88% ಇತ್ತು. ಆಹಾರ ಮತ್ತು ಇಂಧನ ಬೆಲೆಗಳ ಏರಿಕೆಗಳಿಂದಾಗಿ ಹಣದುಬ್ಬರ ದರ ಏರಿದೆ ಎನ್ನಲಾಗಿದೆ.

ಕಚ್ಚಾತೈಲದ ಬೆಲೆ ಇನ್ನೂ ಏರುವ ಸಂಭವವಿದ್ದು ಇದುವರೆಗೆ ಕಡಿಮೆ ಬೆಲೆಯ ಪ್ರಯೋಜನವನ್ನು ತಾನೇ ಬಾಚಿಕೊಳ್ಳುತ್ತಿದ್ದ ಸರಕಾರಕ್ಕೆ ಒಂದು ತಲೆನೋವಾಗಬಹುದು ಎನ್ನಲಾಗುತ್ತಿದೆ. ಆದರೆ ಆ ತಲೆನೋವನ್ನು ಕೂಡ ಅದು ಜನಗಳ ಮೇಲೆ ದಾಟಿಸುವುದಿಲ್ಲ ಎಂಬ ಭರವಸೆಯೇನೂ ಇಲ್ಲ.

ಇದೇ ಅವಧಿಯಲ್ಲಿ, ಅಂದರೆ ಡಿಸೆಂಬರ್ 2017 ರಲ್ಲಿ ಕೈಗಾರಿಕಾ ಉತ್ಪಾದನೆ 17 ತಿಂಗಳಲ್ಲೇ ಅತಿ ಹೆಚ್ಚು ಮಟ್ಟಕ್ಕೇರಿದೆಯಲ್ಲ ಎಂದು 'ಭಕ್ತ'ರು ಬೊಟ್ಟುಮಾಡಿ ತೋರುತ್ತಿದ್ದಾರೆ. ಆದರೆ ಇದು ಬಹು ಮಟ್ಟಿಗೆ ನವಂಬರ್ 2016ರಲ್ಲಿ ತಂದ ನೋಟುರದ್ಧತಿಯಿಂದಾಗಿ ಆದ ಭಾರೀ ಇಳಿಕೆಯನ್ನು ಆಧರಿಸಿದ ಅಂಕವಾದ್ದರಿಂದ, ಕೇವಲ ಅಂಕಿ-ಅಂಶದ 'ಲೀಲೆ'ಯಷ್ಟೇ, ವಾಸ್ತವವಾಗಿ ದಾಖಲೆ ಏರಿಕೆಯಂತೂ ಅಲ್ಲ ಎಂದು ಕೆಲವು ಪರಿಣಿತರು ಹೇಳುತ್ತಿದ್ದಾರೆ.

ಈ ನಡುವೆ ಗೋದಿ, ತೊಗರಿ, ಕಡಲೆ, ಜೋಳ, ಸಜ್ಜೆ, ಮುಸುಕಿನ ಜೋಳ, ಜೀರಿಗೆ, ಅರಶಿಣ, ಕೊತ್ತಂಬರಿ, ಸಾಸಿವೆ ಈ ಬೆಳೆಗಳ ಬೆಲೆಗಳು ಕುಸಿಯುತ್ತಿವೆ ಅಥವ ಸದ್ಯದಲ್ಲೇ ಕುಸಿಯುವ ಸಾಧ್ಯತೆ ಇದೆ ಎಂದು ವರದಿಯಾಗಿದೆ, ಆಲೂಗಡ್ಡೆ ಬೆಲೆಗಳು ಕುಸಿದು ಉತ್ತರಪ್ರದೇಶದಲ್ಲಿ ರೈತರು ಅವನ್ನು ಬೀದಿಗೆ ಚೆಲ್ಲಿ ಪ್ರತಿಭಟಿಸಿದ್ದು ಇತ್ತೀಚಿನ ಸುದ್ದಿ.

ಹಿಂಗಾರು ಉತ್ಪಾದನೆ ವಿಪರೀತ ಹೆಚ್ಚಿರುವುದರಿಂದ ಹೀಗಾಗುತ್ತಿದೆಯಂತೆ.

ಇಕನಾಮಿಕ್ ಟೈಮ್ಸ್‌ನಲ್ಲಿ ಪ್ರಕಟವಾಗಿರುವ ವರದಿಗಳ ಪ್ರಕಾರ ಮಧ್ಯಪ್ರದೇಶದ ಇಂದೋರ್ ಮಂಡಿಯಲ್ಲಿ ಕಡಲೆಯ ಬೆಲೆ ಎಂಎಸ್‌ಪಿ ಅಂದರೆ ಕನಿಷ್ಟ ಬೆಂಬಲ ಬೆಲೆಗಿಂತ 12% ಕೆಳಗಿಳಿದಿದೆ. ಮಹಾರಾಷ್ಟ್ರದ ಲಾಟೂರ್‌ನ ಎಪಿಎಂಸಿಯಲ್ಲಿ ತೊಗರಿ ಬೇಳೆ ಬೆಲೆ ಎಂಎಸ್‌ಪಿಗಿಂತ 20% ಕೆಳಗಿದೆ. ಇದು ಇನ್ನಷ್ಟು ಇಳಿಯುವ ಭಯವಿದೆ.

ಗುಜರಾತ್ ಮತ್ತು ತೆಲಂಗಾಣದಲ್ಲಿ ಕೊತ್ತಂಬರಿ ಮತ್ತು ಅರಿಷಿಣ ಬೆಲೆಗಳು ಇಳಿಯುತ್ತಿದ್ದು, ಅವು ಮತ್ತಷ್ಟು ಕುಸಿಯುವ ಸಾಧ್ಯತೆಗಳಿವೆಯಂತೆ.

ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ಜೋಳ ಮತ್ತು ಸಜ್ಜೆಯ ಬೆಲೆಗಳು ಎಂಎಸ್‌ಪಿಗಿಂತ ಕೆಳಗಿವೆ.

ರಾಜಸ್ಥಾನದ ಕೋಟಾದಲ್ಲಿ ಗೋದಿಯ ಬೆಲೆ ಗಳು ಎಂಎಸ್‌ಪಿಗಿಂರ 7ರಿಂದ 10% ಕೆಳಗಿದೆ.

ಭಾರತೀಯ ಕಾಳು ಮತ್ತು ಧಾನ್ಯಗಳ ಸಂಘದ ಉಪಾಧ್ಯಕ್ಷ ಬಿಮಲ್ ಕೊಠಾರಿ "ಸರಕಾರ ದೊಡ್ಡ ಪ್ರಮಾನದಲ್ಲಿ ಖರೀದಿ ನಡೆಸಿದರೆ ಮಾತ್ರವೇ ಕುಸಿತ ತಡೆಯಲು ಸಾಧ್ಯ" ಎಂದಿದ್ದಾರೆ.

ಆದರೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆಯ 'ಅಚ್ಛೇ ದಿನ್' ಭರವಸೆ ಕೇವಲ ಲೊಳಲೊಟ್ಟೆಯಾಗಿರುವ ಸಂದರ್ಭದಲ್ಲಿ ಅದಕ್ಕಿಂತ ಎಷ್ಟೋ ಕೆಳಮಟ್ಟದಲ್ಲಿ ನಿಗದಿ ಮಾಡಿರುವ ಎಂಎಸ್‌ಪಿ ಕೂಡ ಸಿಗುವ ಲಕ್ಷಣಗಳೂ ಇಲ್ಲದಿರುವುದು ರೈತಾಪಿ ಜನಗಳಿಗೆ ಇನ್ನಷ್ಟು ಕೆಟ್ಟ ದಿನಗಳ ಮುನ್ಸೂಚನೆ ನೀಡಿದೆ. ಈ ಕನಿಷ್ಟ ಬೆಂಬಲ ಬೆಲೆಗಳಲ್ಲಿಯೂ ಅವರ ಉತ್ಪನ್ನಗಳನ್ನು ಖರೀದಿಸಬೇಕಾಗಿರುವುದು ಈಗ ಒಂದು 'ಗಂಭೀರ ವಿಷಯ' ಎಂದು ಈ ಸರಕಾರದ ಕೃಷಿ ಮಂತ್ರಿಗಳು ಹೇಳಿರುವುದಾಗಿ ವರದಿಯಾಗಿದೆ.

ಘನತೆ, ಸಬಲೀಕರಣ, ತುಷ್ಟೀಕರಣ ಇತ್ಯಾದಿ

ತ್ರಿವಳಿ ತಲಾಖ್ ವಿಷಯದಲ್ಲಿ ಮುಸ್ಲಿಂ ಮಹಿಳೆಯರ ಸಬಲೀಕರಣದ ನಂತರ ಒಟ್ಟು ಮುಸ್ಲಿಂ ಸಮುದಾಯದ ಸಬಲೀಕರಣದ ಇನ್ನೊಂದು ಹೆಜ್ಜೆ ಇಟ್ಟಿರುವುದಾಗಿ ಅಚ್ಛೇ ದಿನ್ ಮಂದಿ ಹೇಳುತ್ತಿದ್ದಾರೆ. ಈ ವಾರ ಹಜ್ ಯಾತ್ರೆಗೆ ಸಬ್ಸಿಡಿಯನ್ನು ರದ್ದು ಮಾಡುವ ಮೂಲಕ ಒಂದೆಡೆ ತಾನು ಸುಪ್ರಿಂ ಕೋರ್ಟ್ ಆದೇಶವನ್ನು ಪಾಲಿಸಿದ್ದೇನೆ, ಇನ್ನೊಂದೆಡೆಯಲ್ಲಿ "ಅಲ್ಪಸಂಖ್ಯಾತರನ್ನು ಘನತೆಯೊಂದಿಗೆ ಮತ್ತು ತುಷ್ಟೀಕರಣವಿಲ್ಲದೆ ಸಬಲೀಕರಿಸುವ ಮೋದಿ ಸರಕಾರದ ಪ್ರಯತ್ನಗಳ ಭಾಗ ಇದು" ಎಂದು ಅಲ್ಪಸಂಖ್ಯಾತ ವ್ಯವಹಾರಗಳ ಮಂತ್ರಿಗಳು ಹೇಳಿದ್ದಾರೆ.

ಇದರಲ್ಲಿ ಒಂದಂತೂ ಅರೆಸತ್ಯ. ಏಕೆಂದರೆ ಸುಪ್ರಿಂ ಕೋರ್ಟ್ 2012 ರಲ್ಲಿ ನೀಡಿದ ತೀರ್ಪು ಹಜ್ ಸಬ್ಸಿಡಿಯನ್ನು ಕ್ರಮೇಣ ಹತ್ತು ವರ್ಷಗಳಲ್ಲಿ ತೆಗೆಯಬೇಕು ಎಂದಿತ್ತು ಎಂದು ಪರಿಣಿತರು ಹೇಳಿದ್ದಾರೆ.

ಇನ್ನೊಂದನ್ನು ಏನೆನ್ನಬೇಕು? ವೈಯಕ್ತಿಕ ಧಾರ್ಮಿಕ ಯಾತ್ರೆಗಳಿಗೆ ಒಂದು ಜಾತ್ಯತೀತ ಪ್ರಭುತ್ವದ ಖಜಾನೆಯಿಂದ, ಅಂದರೆ ತೆರಿಗೆದಾರರಿಂದ ಸಂಗ್ರಹಿಸಿದ ಹಣವನ್ನು ಬಳಸಬಾರದು. ಎಂಬುದನ್ನು ಎಲ್ಲ ಜಾತ್ಯತೀತವಾದಿಗಳೂ ಒಪ್ಪುತ್ತಾರೆ. ಇದು ಎಲ್ಲ ಧರ್ಮಾವಲಂಬಿಗಳಿಗೂ ಅನ್ವಯವಾಗಬೇಕು ಎಂದೂ ಅವರು ಹೇಳುತ್ತಾರೆ. ಆದರೆ ಘನತೆ ಮತ್ತು ತುಷ್ಟೀಕರಣದ ಪ್ರಶ್ನೆ ಇಲ್ಲಿ ಬಂದಿರುವುದೇಕೆ?.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾಕಾರಟ್ ಕೇಳಿರುವಂತೆ, ಹಜ್ ಯಾತ್ರೆಗೆ ಸಬ್ಸಿಡಿಗಳನ್ನು ರದ್ದು ಮಾಡಿ ಮುಸ್ಲಿಮರಿಗೆ ಘನತೆಯನ್ನು ಮರಳಿಸುವ ಸರಕಾರ, ಅದೇ ರೀತಿ ಉತ್ತರಪ್ರದೇಶದಲ್ಲಿ ಕೈಲಾಸ-ಮಾನಸಸರೋವರ ಯಾತ್ರೆಗೆ ಯೋಗಿ ಸರಕಾರ ಬಂದ ಮೇಲೆ ಕೊಡುತ್ತಿರುವ ಭಾರೀ ಮೊತ್ತವನ್ನು ನಿಲ್ಲಿಸಿ ಹಿಂದೂ ಯಾತ್ರಿಗಳ ಘನತೆಯನ್ನೂ ಯಾಕೆ ಅವರಿಗೆ ಮರಳಿಸಬಾರದು? ಮಕ್ಕಾಗೆ ಹೋಗಲು ಸಬ್ಸಿಡಿ ಕೊಡುವುದು ತುಷ್ಟೀಕರಣವಾದರೆ, ಮಾನಸರೋವರ, ಅಯೋಧ್ಯೆ ಮತ್ತಿತರ ಯಾತ್ರಾಸ್ಥಳಗಳಿಗೆ ಹೋಗಲು ಕೊಡುವ ಸಬ್ಸಿಡಿ ಸಬಲೀಕರಣ ಹೇಗಾಗುತ್ತದೆ ಎಂದು ಬೃಂದಾ ಕಾರಟ್ ಕೇಳುತ್ತಾರೆ. ಮೂರೂವರೆ ವರ್ಷಗಳ ಅಚ್ಛೇದಿನ್‌ಗಳ ನಂತರ ಬಹುಶಃ ಇಂತಹ ಪ್ರಶ್ನೆಗಳಿಗೆ ಉತ್ತರ ಸ್ವಯಂವೇದ್ಯ.

"ಆಧಾರ್ ಕುರಿತ ಸಾರ್ವಜನಿಕ ರಾಗಾಲಾಪನೆ ನಡೆಸಿರುವವರು ಯಾರು?"

ಕೊನೆಗೂ ಆಧಾರ್ ಕುರಿತ ಹಲವಾರು ಮೊಕದ್ದಮೆಗಳ ಅಂತಿಮ ವಿಚಾರಣೆ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಆರಂಭವಾಗಿದೆ. ಕಳೆದ ವಾರವಷ್ಟೇ ಟ್ರಿಬ್ಯೂನ್ ಪತ್ರಿಕೆಯಲ್ಲಿ ಹೇಗೆ ಕೇವಲ 500ರೂ. ತೆತ್ತು 120 ಕೋಟಿ ನಾಗರಿಕರ ಮಾಹಿತಿಗಳನ್ನು ಪಡೆಯಲು ಸಾಧ್ಯವಾಗಿದ ಎಂಬುದನ್ನು ಬಯಲಿಗೆಳೆದ ಲೇಖನ ಪ್ರಕಟವಾದಾಗ ಈ ಯೋಜನೆಯ 'ರೂವಾರಿ' ನಂದನ್ ನೀಲೆಕಣಿ ಆಧಾರ್ ದೂಷಣೆಗೆ ಒಂದು ಸಂಯೋಜಿತ ರಾಗಾಲಾಪನೆ ನಡೆಸಲಾಗುತ್ತಿದೆ ಎಂದು ಹರಿಹಾಯ್ದಿದ್ದರು. ನಂತರ ಅವರ ಯುಐಡಿಎಐ (ಭಾರತ ವಿಶಿಷ್ಟ ಗುರುತು ಪ್ರಾಧಿಕಾರ) ಮಾಹಿತಿ ಸೋರದಂತೆಮಾಡಲು 'ವರ್ಚುವಲ್ ಐಡೆಂಟಿಟಿ' ಸಂಖ್ಯೆಯ ವ್ಯವಸ್ಥೆ ಕಲ್ಪಿಸಿರುವುದಾಗಿ ಹೇಳಿ ಸೋರಿಕೆಯಾಗಿದೆ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಿತು ಎಂಬುದು ಬೇರೆ ಮಾತು. ಮತ್ತು ಇನ್ನೆರಡು ದಿನಗಳ ನಂತರ ಮುಖವನ್ನು ಗುರುತಿಸುವ ಅಂಶವನ್ನು ಇನ್ನು ಮುಮದೆ ಸೇರಿಸಲಾಗುವುದು ಎಂಬ ಸುದ್ದಿಯನ್ನೂ ಕೊಡಲಾಯಿತು, ಈ ಹಿಂದೆಯೂ ಸೋರಿಕೆಯ, ದುರುಪಯೋಗದ ಸುದ್ದಿಗಳು ಬಂದಾಗಲೆಲ್ಲ ಇಂತಹುದೇ ಮಾತುಗಳು ಕೇಳಬಂದಿದ್ದವು

ತಮಾಷೆಯೆಂದರೆ ಜನವರಿ 17ರ ಮುಂಜಾನೆ ಅಂದರೆ ಸುಪ್ರಿಂ ಕೋರ್ಟಿನಲ್ಲಿ ವಿಚಾರಣೆ ಆರಂಭವಾಗುವ ಕೆಲವೇ ಗಂಟೆಗಳ ಮೊದಲು ದೇಶದ ಎರಡು ದೊಡ್ಡ ಇಂಗ್ಲಿಷ್ ಪತ್ರಿಕೆಗಳಲ್ಲಿ ಸಂಪಾದಕೀಯ ಪುಟದಲ್ಲಿ ನೀಲೇಕಣಿಯವರ ದೀರ್ಘ ಲೇಖನ ಪ್ರಕಟವಾಗಿದೆ. ಅದರ ಶಿರೋನಾಮೆ "ನಾವೆಲ್ಲ ಇದರಲ್ಲಿ ಜತೆಗಿದ್ದೇವೆ". ಅದರ ಕೆಳಗೆ ಉಪ ಶಿರೋನಾಮೆ- "ಆಧಾರ್ ಒಂದು ರಹಸ್ಯ ವೀಕ್ಷಣೆಯ ನರಕರೂಪವನ್ನು ಕಟ್ಟುತ್ತಿಲ್ಲ, ಪ್ರಭುತ್ವಕ್ಕೆ ಎದುರಾಗಿ ವೈಯಕ್ತಿಕ ಅಸ್ತಿತೆಯನ್ನು ಎತ್ತಿ ಹಿಡಿಯುತ್ತದೆ".

ಇಷ್ಟಕ್ಕೇ ನಿಲ್ಲಲಿಲ್ಲ. **ನೀಲೇಕಣಿಯವರ ಈ ಲೇಖನದ ಬಗ್ಗೆ ಹಲವಾರು**


ಕೃಪೆ: ಆಲ್ಟ್ ನ್ಯೂಸ್

ಕೇಂದ್ರ ಮಂತ್ರಿಗಳೂ ಸೇರಿದಂತೆ ಆಳುವ ಪಕ್ಷದ ಮುಖಂಡರು #ಆಧಾರ್‌ಮಿಥ್‌ಬಸ್ಟರ್ (ಅಂದರೆ ಸುಳ್ಳುಪುರಾಣವನ್ನು ಒಡೆಯುವವರು) ಹ್ಯಾಶ್‌ಟ್ಯಾಗ್ ಅಡಿಯಲ್ಲಿ ಟ್ವೀಟ್ ಮಾಡಿದ್ದಾರೆ. ಈ ಹಿಂದೆ #ಡಿಮಾನಿಟೈಸೇಶನ್‌ಸಕ್ಸಸ್ (ನೋಟುರದ್ದತಿಯಶಸ್ವಿ) ಎಂಬ ಪ್ರಚಾರದ ರೀತಿಯಲ್ಲೇ ಹೇಗೆ ಮಾದರಿ ಟ್ವೀಟ್‌ಗಳನ್ನು ಸೃಷ್ಟಿಸಲಾಗಿದ ಎಂದು 'ಆಲ್ಟ್ ನ್ಯೂಸ್' ವೆಬ್ ಸುದ್ದಿ ತಾಣ ವರದಿ ಮಾಡಿದೆ.

ಇದರ ಹಿಂದಿನ ದಿನ ಆಧಾರ್ ಕುರಿತ ಪ್ರಾಧಿಕಾರ ಯುಐಡಿಎಐ ಆಧಾರ್ ಕುರಿತು ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳಿಗೆ ಉತ್ತರ ಎಂಬಂತಹ ಪೂರ್ಣ ಪುಟದ ಜಾಹೀರಾತುಗಳನ್ನು ಪ್ರಕಟಿಸಿತು.

ಆಲ್ಟ್ ನ್ಯೂಸ್ ಈ ವರದಿಗೆ ಕೊಟ್ಟ ಶಿರೋನಾಮೆ-"ಆಧಾರ್ ಕುರಿತ ಸಾರ್ವಜನಿಕ ರಾಗಾಲಾಪನೆ ನಡೆಸಿರುವವರು ಯಾರು?"

ಇದು ಎಲ್ಲ ಪ್ರಜಾಪ್ರಭುತ್ವವಾದಿಗಳ ಪ್ರಶ್ನೆ ಕೂಡ.

ಸುಳ್ಳುಗಳ ಸರದಾರರು

'ಅಚ್ಛೇ ದಿನ್'ಗಳ ಒಂದು ಹೊಸ ಲಕ್ಷಣವೆಂದರೆ ಸುಳ್ಳು ಸುದ್ದಿಗಳ ಯೋಜಿತ ಪ್ರಸಾರ. ಸಹಜವಾಗಿ ಇದರಲ್ಲಿ ಕೇಸರೀ ಪಡೆಗಳದ್ದೇ ಮೇಲುಗೈ. ನಿಜ, ಈಗ ಇತರರು ಕೂಡ ತೀವ್ರ ಸ್ಪರ್ಧೆ ನೀಡುತ್ತಿದ್ದಾರೆ.

ಇಂತಹ ಸುಳ್ಳು ಸುದ್ದಿಗಳ ಪ್ರಸಾರ ಯಾವ ಮಟ್ಟ ಮುಟ್ಟಿದೆಯೆಂದರೆ ಈ ಸುಳ್ಳುಗಳನ್ನು ಬಯಲಿಗೆಳೆಯಲೆಂದೇ ಕೆಲವು ವೆಬ್ ತಾಣಗಳು ಹುಟ್ಟಿಕೊಂಡಿವೆ. ಮೇಲೆ ಹೇಳಿದ ಆಲ್ಟ್ ನ್ಯೂಸ್ ಎಂಬುದು ಇದರಲ್ಲಿ ಪ್ರಮುಖವಾದುದು. ಸುಳ್ಳು ಸುದ್ದಿಗಳ ಮೂಲಕ್ಕೆ ಹೋಗಿ ಪರೀಕ್ಷಿಸುವ ಇದು ಪ್ರತಿ ತಿಂಗಳು ತಾನು ಬಯಲಿಗೆಳೆದ ಸುಳ್ಳುಗಳ ಪಟ್ಟಿ ಪ್ರಕಟಿಸುತ್ತದೆ. ಡಿಸೆಂಬರ್ ತಿಂಗಳ ಪಟ್ಟಿಯಲ್ಲಿ ದೇಶದ ಪ್ರಧಾನ ಮಂತ್ರಿಗಳದ್ದೇ ಪ್ರಮುಖ ಸ್ಥಾನ ಎಂದು ಅದು ಹೇಳಿದೆ. ಚುನಾವಣಾ ಪ್ರಚಾರದ ತಿಂಗಳಾದ್ದರಿಂದ ಇದು ಅಸಹಜವೇನೂ ಅಲ್ಲ ಎನ್ನುವುದಾದರೆ, ಚುನಾವಣಾ ಪ್ರಚಾರ ಎಂದರೆ ಸುಳ್ಳುಗಳ ಕಂತೆ ಎಂದು ಒಪ್ಪಿಕೊಳ್ಳಬೇಕೇ?

ಅದಿರಲಿ, ಡಿಸೆಂಬರ್‌ನಲ್ಲಿ ಮಾತವಲ್ಲ, 2017 ರ ಇಡೀ ವರ್ಷದಲ್ಲಿ ಪ್ರಧಾನಿಗಳು ಕನಿಷ್ಟ 10 ಅರೆ ಸತ್ಯಗಳು ಅಥವ ಸುಳ್ಳುಗಳ ಮೂಲಕ ದೇಶವನ್ನು ತಪ್ಪುದಾರಿಗೆಳೆದಿದ್ದಾರೆ ಎಂದು ಅದು ಪಟ್ಟಿ ಮಾಡಿದೆ.

ಈಗ ತ್ರಿಪುರ ಸೇರಿದಂತೆ ಮೂರು ಈಶಾನ್ಯ ರಾಜ್ಯಗಳಲ್ಲಿ ಚುನಾವಣಾ ಪ್ರಚಾರ ಆರಂಭವಾಗಿದೆ. ಕರ್ನಾಟಕದಲ್ಲಿ ಇನ್ನೂ ನಾಲ್ಕು ತಿಂಗಳಿದ್ದರೂ ಆಗಲೇ ಆರಂಭವಾಗಿದೆ. ಅಂದರೆ ಸುಳ್ಳು ಸುದ್ದಿಗಳ ಮತ್ತು ಅವನ್ನು ಬಯಲಿಗೆಳೆಯುವ ವೆಬ್‌ತಾಣಗಳಿಗೆ ಇನ್ನು ಬಿಡುವಿಲ್ಲದ ಕೆಲಸ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ವಿದೇಶಾಂಗ ವ್ಯವಹಾರಗಳ ಮಂತ್ರಾಲಯ ಇನ್ನು ಮುಂದೆ 'ವಲಸೆ ತಪಾಸಣೆ ಬೇಕಾಗುವ'(ಇಸಿಆರ್) ವಿಧದ ಅಡಿಯಲ್ಲಿ ಬರುವವರಿಗೆ ಎಲ್ಲರಂತೆ ನೀಲಿ ಬಣ್ಣದ ಪಾಸ್‌ಪೋರ್ಟ್ ಬದಲು ಕಿತ್ತಳೆ ಬಣ್ಣದ ಪಾಸ್‌ಪೋರ್ಟ್ ನೀಡಲಾಗುವುದು ಎಂದು ಪ್ರಕಟಿಸಿದೆ. ಇದರಿಂದ ಮಾಧ್ಯಮಿಕ ಶಿಕ್ಷಣ ಪಡೆಯದ ಪಶ್ಚಿಮ ಏಶ್ಯಾಕ್ಕೆ ಕೆಲಸ ಅರಸಿ ಹೋಗುವವರಿಗೆ ನೆರವು ಒದಗಿಸಲು ಅನುಕೂಲತಂಗುತ್ತದೆ ಎಂಬುದು ಇಲಾಖೆಯ ಸಮರ್ಥನೆ. –ಸುದ್ದಿ

ಇದು ಯಾವುದೇ ರೀತಿಯ ಪಕ್ಷಪಾತವನ್ನು ನಿಷೇಧಿಸುವ ಮೂಲಭೂತ ಸಂವಿಧಾನಿಕ ತತ್ವಗಳಿಗೆ ವಿರುದ್ಧವಾದದ್ದು. ಚಾರಿತ್ರಿಕವಾಗಿ, ನಾಗರಿಕರನ್ನು ಪ್ರತ್ಯೇಕಿಸುವ ಗುರುತುಗಳು ವಿವಾದದ ವಿಷಯಗಳಾಗಿವೆ. ಇಂತಹ ಒಂದು ಆಧಾರದಲ್ಲಿ ನಾಗರಿಕರನ್ನು ಪ್ರತ್ಯೇಕಿಸುವುದು ಭಾರತ ಬದ್ಧವಾಗಿರುವ ಸಮಾನತೆಯ ಯೋಜನೆಯ ಬಗ್ಗೆ ಸಂವೇದನಾಹೀನತೆಯನ್ನು ತೋರಿಸುತ್ತದೆ. ಗಾಂಧೀಜಿ 'ಸತ್ಯಾಗ್ರಹ'ವನ್ನು ಪರಿಪೂರ್ಣಗೊಳಿಸಿದ್ದು ದಕ್ಷಿಣ ಆಫ್ರಿಕಾದಲ್ಲಿ ವಿವಿಧ ಗುರುತುಗಳ ವಿರುದ್ಧ ಪ್ರತಿಭಟನೆಯಲ್ಲಿ ಎಂದು ನಾವು ಮರೆಯಬಾರದು

–ಸೀತಾರಾಂ ಯೆಚುರಿ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

2017– ಬುದ್ಧಿಪೂರ್ವಕವಾಗಿಯೇ ಆರ್ಥಿಕ ವಿನಾಶ ತಂದ ವರ್ಷ



2017ರ ವರ್ಷವು, ದೇಶದ ಸರಕಾರವೇ ತನ್ನದೇ ದುಡಿಯುವ ಜನರ ಮೇಲೆ ಉದ್ದೇಶಪೂರ್ವಕವಾಗಿ, ನೇರವಾಗಿ ಮತ್ತು ವಿನಾಕಾರಣ ಧಾಳಿಯನ್ನು ಹರಿಯಬಿಟ್ಟ ಒಂದು ಪರ್ವಕಾಲ ಎಂದು ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸದ ಪುಟಗಳಲ್ಲಿ ದಾಖಲಾಗಲಿದೆ. ಜನಸಾಮಾನ್ಯರು 2017ರಲ್ಲಿ ಅನುಭವಿಸಿರುವ ಆರ್ಥಿಕ ಸಂಕಟಗಳು ಸರಕಾರ ಮಾಡಬೇಕಾದ್ದನ್ನು ಮಾಡಿಲ್ಲ ಎಂಬ ಕಾರಣದಿಂದಾಗಿ ಅಲ್ಲ, ಅದುಬದಲಾಗಿ ಮಾಡಬಾರದ್ದನ್ನು ಉದ್ದೇಶಪೂರ್ವಕವಾಗಿ ಮಾಡಿರುವುದರಿಂದಾಗಿ. ಇದು ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸದಲ್ಲೇ ಕಂಡರಿಯದ ಸಂಗತಿಯಾಗಿದೆ – **ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಭಾರತಿ ಗಾಂವ್ಕರ್.

2017ನೇ ಇಸವಿಯ ವೈಶಿಷ್ಟ್ಯತೆಯೆಂದರೆ, ದೇಶ ಹಿಂದೆಂದೂ ಈ ವರ್ಷ ಕಂಡಷ್ಟು ಗಂಭೀರವಾದ ಸರಕಾರವೇ ಉಂಟುಮಾಡಿದ ಆರ್ಥಿಕ ಬಿಕ್ಕಟ್ಟನ್ನು ಕಂಡಿರಲಿಲ್ಲ. 1965–66, 1966–67 ಮತ್ತು 1973–74 ಮುಂತಾದ ಖಂಡಿತವಾಗಿಯೂ ಜನಸಾಮಾನ್ಯರಿಗೆ ಕೇಡು ತಂದ ವರ್ಷಗಳಿದ್ದವು, ಈ ಎಲ್ಲ ವರ್ಷಗಳು ಬೃಹತ್ ಹಣದುಬ್ಬರವನ್ನು ಕಂಡಿದ್ದವು. ಆದರೆ ಆರ್ಥಿಕ ಸಮಸ್ಯೆ ಉಂಟಾಗಲು ಬೇರೆ ಕಾರಣಗಳಿದ್ದವು, ತಕ್ಷಣದ ಸರಕಾರದ ನೀತಿಗಳಿಂದ ಆಗಿರಲಿಲ್ಲ. 1965–66 ಮತ್ತು 1966–67ರಲ್ಲಿ 'ಬಿಹಾರ ಬರಗಾಲ" ಉಂಟಾದಾಗ ಆಹಾರ ಧಾನ್ಯಗಳ ಉತ್ಪಾದನೆ ತೀವ್ರವಾಗಿ ಕುಸಿಯಿತು, ಮತ್ತು ಅದು ನಂತರ ಎರಡು ವರ್ಷಗಳ ಕಾಲ ಮುಂದುವರಿದಿತ್ತು. ಇಂತಹ ಒಂದು ಘಟನೆಯು 200 ವರ್ಷಗಳಿಗೊಂಮ್ಮೆ ಸಂಭವಿಸಬಹುದೆಂದು ಅಂಕಿಅಂಶ ಶಾಸ್ತ್ರಜ್ಞರು ಆಗ ನಮಗೆ ಹೇಳಿದ್ದರು.

ಆದರೆ ಕೇವಲ ಸಂಖ್ಯಾ ಶಾಸ್ತರಜ್ಞರ ಮಾತನ್ನೇ ನಂಬಬೇಕಾಗಿಲ್ಲ. ಅನೇಕ ಅರ್ಥಶಾಸ್ತ್ರಜ್ಞರು ಭಾರತದಲ್ಲಿ ಕೃಷಿ ಬೆಳವಣಿಗೆಯ ಉತ್ತೇಜನೆಗಳು 60ರ ದಶಕದ ಮಧ್ಯಭಾಗದಲ್ಲಿ(ಹಸಿರು ಕ್ರಾಂತಿ ಹೊಸ ಉತ್ತೇಜನವನ್ನು ಒದಗಿಸುವ ಮೊದಲು) ಒಣಗಿ ಹೋಗಿದ್ದವು, ಹಾಗಾಗಿಯೇ ಆಹಾರ ಧಾನ್ಯಗಳಲ್ಲಿನ ಕುಸಿತಕ್ಕೆ ಇದು ಕಾರಣವಾಯಿತು ಎಂದು ವಾದಿಸುತ್ತಾರೆ. 50ರ ದಶಕದ ಆರಂಭದಲ್ಲಿ ಒಟ್ಟು ಬಿತ್ತನೆಯಾಗಬೇಕಿದ್ದ ಭೂಪ್ರದೇಶಗಳ ವಿಸ್ತರಣೆಗೆ ಅವಕಾಶವಿತ್ತು,ಇದು ಕೃಷಿ ಬೆಳವಣಿಗೆಗೆ ಉತ್ತೇಜನೆ ನೀಡಿತ್ತು. ಈ ಉತ್ತೇಜನೆ ಕೊನೆಗೊಳ್ಳುತ್ತಿದ್ದಂತೆ, ಐವತ್ತರ ದಶಕದಲ್ಲಿ ಕೈಗೊಂಡ ನೀರಾವರಿ ಯೋಜನೆಗಳು ಫಲ ನೀಡಲಾರಂಭಿಸಿದ್ದವು. ಇದರಿಂದಾಗಿ ಬಹುಬೆಳೆ ವಿಧಾನಗಳು ಮತ್ತು ನೀರಾವರಿಯಿಂದಾಗಿ ಉಂಟಾದ ಭೂಮಿಯ ಉತ್ಪಾದಕತೆಯ ಹೆಚ್ಚಳದಿಂದ ಒಟ್ಟು ಬಿತ್ತನೆಯ ಪ್ರದೇಶದಲ್ಲಿ ಏರಿಕೆ ಕಂಡು ಬಂತು, ಆದರೆ 60ರ ದಶಕದ ಮಧ್ಯದ ಅವಧಿಯಲ್ಲಿ ಕೃಷಿ ಅಭಿವೃದ್ಧಿಯ ಈ ಉತ್ತೇಜನವೂ ಕೂಡ ಮುಗಿದುಹೋಯಿತು, ಇದರಿಂದಾಗಿ ಕೃಷಿ ಉತ್ಪಾದನೆ ಕುಸಿಯಿತು. 60ರ ದಶಕದ ಮಧ್ಯಾವಧಿಯ ಬರಗಾಲವು ಇಂತಹ ಸಮಯದಲ್ಲಿ ಬಂತು, ಅದರಿಂದಾಗಿ ಕುಸಿತ ಅಷ್ಟೊಂದು ತೀಕ್ಷ್ಣವಾಗಿತ್ತು.

ಸಾಕಷ್ಟು ಸಾಕ್ಷಾಧಾರಗಳಿರುವ ಈ ವಿವರಣೆಯನ್ನು ಒಪ್ಪಿಕೊಳ್ಳುವದಾದರೆ, ಸರಕಾರಕ್ಕೆ ಇಂತಹ ತೀಕ್ಷ್ಣತೆಯನ್ನು ತಪ್ಪಿಸುವ ಮುಂಗಾಣ್ಕೆ ಇರಲಿಲ್ಲ ಎಂದು ದೂರಬಹುದು. ಆದಾಗ್ಯೂ, ಈ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸರಕಾರವೇ ತಕ್ಷಣದ ಜವಾಬ್ದಾರನೆಂದು ಹೇಳಲಾಗದು. ಸರಕಾರ ಕಾರ್ಯಪ್ರವರ್ತನಾಗಲಿಲ್ಲ ಎಂದು ಆಪಾದಿಸಬಹುದೇ ವಿನಹ ಅದೇ ಆರ್ಥಿಕ ಸಂಕಷ್ಟವನ್ನು ಉಂಟುಮಾಡಿತು ಎಂದೇನೂ ಹೇಳಲಾಗದು.

ಇನ್ನು, 1973–74ನೇ ಇಸವಿಯು ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸದಲ್ಲೇ ಅತ್ಯಂತ ಕ್ಷಿಪ್ರವಾದ ವಾರ್ಷಿಕ ಹಣದುಬ್ಬರದ ದರದ ವರ್ಷವಾಗಿತ್ತು. ಇದರ ಹಿಂದಿದ್ದ ಕಾರಣ, ಕಳಪೆ ಫಸಲು ಮತ್ತು ಮೊದಲ "ತೈಲ ಆಘಾತ"ದ ಒಟ್ಟು ಪರಿಣಾಮ. ಸರಕಾರವು ಈ ಧಾನ್ಯಗಳ ಕೊರತೆಯ ಎರಡನೇ ಹಂತದ ದುಷ್ಪರಿಣಾಮಗಳನ್ನು ಕಳ್ಳದಾಸ್ತಾನುದಾರರ ಮೇಲೆ ಕಠಿಣ ಕ್ರಮಗಳ ಮೂಲಕ ಮತ್ತು ದಾಸ್ತಾನುಗಳಲ್ಲಿರುವ ಆಹಾರಧಾನ್ಯಗಳನ್ನು ಬಹಿರಂಗ ಮಾರುಕಟ್ಟೆಗೆ ಬಿಡುಗಡೆ ಮಾಡುವ ಬದಲು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕಬಿಡುಗಡೆ ಮಾಡುವದರ ಮೂಲಕ ತಡೆಯಬಹುದಾಗಿತ್ತು ಎಂದು ನಿಸ್ಸಂದೇಹವಾಗಿಯೂ ಹೇಳಬಹುದು. ವಾಸ್ತವವಾಗಿ ಬಹಿರಂಗ ಮಾರುಕಟ್ಟೆಗೆ ಇಂತಹ ಬಿಡುಗಡೆಯಿಂದಾಗಿ ಯಾವ ಸಟ್ಟಾಕೋರರನ್ನು ಸೋಲಿಸಬೇಕಾಗಿತ್ತೋ ಅವರೇ ಆ ಆಹಾರಧಾನ್ಯಗಳನ್ನು ಖರೀದಿಸಿಡಲು ಅನುಕೂಲವಾಯಿತು. ಆದರೆ ಆ ವರ್ಷದಲ್ಲಿ ಉಂಟಾದ ಆರ್ಥಿಕ ಸಂಕಷ್ಟಕ್ಕೆ ಇದೂ ಕೂಡ ಮೂಲ ಕಾರಣವಲ್ಲ.ಅವು ಹೊರಗಿನಿಂದ ಬಂದವು. ಈ ಎಲ್ಲ ಹೊರಗಿನ ಆಘಾತಗಳನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದಷ್ಟೇ ಆಗಿನ ಸರಕಾರವನ್ನು ಆಪಾದಿಸಬಹುದು.

ಆದರೆ 2017 ಈ ಎಲ್ಲವುಗಳಿಗಿಂತ ವಿಭಿನ್ನವಾದುದು. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಭಾರತ ಮತ್ತು ಚೀನಾದಂತಹ ರಾಷ್ಟ್ರಗಳ ಮೇಲೆ ಪ್ರಭಾವ ಬೀರತೊಡಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ, ಅವುಗಳ ಪರಿಣಾಮ ಈ ವರ್ಷದಲ್ಲಿ ಅನುಭವಕ್ಕೆ ಬಂದ ಸಂಕಷ್ಟಗಳ ಹಿಂದಿರುವ ಮುಖ್ಯಕಾರಣ ಅಲ್ಲ. ಚಾಲ್ತಿ ಖಾತೆ ಕೊರತೆ ವಿಸ್ತರಣೆಯಿಂದಾಗಿ ಪಾವತಿ ಬಾಕಿಯ ಮೇಲೆಅದರ ದುಷ್ಪರಿಣಾಮ ಅಪಾಯಕಾರಿ ಯಾಗಬಹುದಿತ್ತು ನಿಜ, ಆದರೆ ಪರ್ಯಾಪ್ತ ಹಣಕಾಸು ಬಂಡವಾಳದ ಒಳಹರಿವಿನ ಮೂಲಕ ಅದರಿಂದ ರಕ್ಷಣೆ ದೊರೆಯಿತು. ಈ ವರ್ಷ ಒಳ ಹರಿವು ಎಷ್ಟು ದೊಡ್ಡ ಪ್ರಮಾಣದಲ್ಲಿತ್ತೆಂದರೆ ವರ್ಷಾಂತ್ಯದಲ್ಲಿ ರೂಪಾಯಿ ಮೌಲ್ಯವು ಡಾಲರ್ ಮೌಲ್ಯಕ್ಕಿಂತ ಮೇಲೆ ಸಾಗಿತ್ತು.

ಜಾಗತಿಕ ಬಿಕ್ಕಟ್ಟಿನಿಂದಾಗಿ (ಅಮೆರಿಕಾದಂತಹ ದೇಶಗಳ "ನೆರಹೊರೆಯವರು ಭಿಕ್ಷುಕರಾದರೇನಂತೆ" ಎಂಬ ಸ್ವರಕ್ಷಣಾ ನೀತಿಗಳಿಂದಾಗಿ) ರಫ್ತು ಬೇಡಿಕೆ ಇಳಿದು ಉಂಟಾದ ನಿರುದ್ಯೋಗದ ಪರಿಣಾಮ ಜನರಮೇಲೆ ಇವುಗಳ ಪರಿಣಾಮ ಸರಕಾರವೇ ಬುದ್ಧಿಪೂರ್ವಕವಾಗಿ ಪರಿಚಯಿಸಿದ ಕ್ರಮಗಳಿಂದ ಉಂಟಾದ ಪರಿಣಾಮಗಳಿಗಿಂತ ಕಡಿಮೆಯೇ ಇತ್ತು.

ಇದೇ ರೀತಿ, ಅನೇಕ ವಾಣಿಜ್ಯ ಬೆಳೆಗಳ ಬೆಲೆಗಳಲ್ಲಿನ ಕುಸಿತಗಳು, ಜಾಗತಿಕ ಬಂಡವಾಳಶಾಹೀ ಬಿಕ್ಕಟ್ಟು ಬಂಡವಾಳಶಾಹೀ ವ್ಯವಸ್ಥೆಯ 'ಅಂಚಿನಲ್ಲಿರುವ' ದೇಶಗಳಿಗೂ ಹರಡಿರುವುದರಿಂದಾಗಿ ವ್ಯಾಪಾರೀ ಬಲಾಬಲ ಪ್ರಾಥಮಿಕ(ಅಂದರೆ ಕೃಷಿ) ಸರಕುಗಳಿಗೆ ಪ್ರತಿಕೂಲವಾಗಿ ಚಲಿಸುತ್ತಿರುವದರ ಭಾಗವಾಗಿವೆ ಈ ಬೆಲೆ ಕುಸಿತಗಳಿಂದಾಗಿ ರೈತಾಪಿ ಜನಗಳಿಗೆ ಉಂಟಾದ ಸಂಕಷ್ಟಗಳನ್ನು ಸರಕಾರದ ಹಟಮಾರಿ ಕ್ರಮಗಳು ಇನ್ನಷ್ಟು ಉಲ್ಬಣಗೊಳಿಸಿದವು.

ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಸರಕಾರದ ಕಾರ್ಯಚ್ಯುತಿ ಅಲ್ಲ ಬದಲಾಗಿ ಅದರ ಉದ್ದೇಶಪೂರ್ವಕವಾದ ಕಾರ್ಯಗಳೇ. ಜನಸಾಮಾನ್ಯರು 2017ರಲ್ಲಿ ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳ ಹಿಂದಿರುವ ಪ್ರಾಥಮಿಕ ಕಾರಣ. ಈ ರೀತಿ ಸರಕಾರವೇ ವಿನಾಕಾರಣ ಮಾಡಿದ ಕೆಲಸಗಳೇ ಜನಗಳಿಗೆ ವಿಪರೀತ ಸಂಕಟಗಳನ್ನು ಉಂಟು ಮಾಡಿದ್ದು ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸದಲ್ಲೇ ಕಂಡರಿಯದ ಸಂಗತಿಯಾಗಿದೆ.

ಜನಸಾಮಾನ್ಯರನ್ನು ಹಿಂಡಿರುವ ಎರಡು ಪ್ರಮುಖ ಹಟಮಾರಿ ಕ್ರಮಗಳೆಂದರೆ, ನವೆಂಬರ್ 2016ರಲ್ಲಿ ತಂದ,2017ರಲ್ಲಿಯೂ ಕಿರು ಉತ್ಪಾದನಾ ವಲಯವನ್ನು ಬಾಧಿಸುತ್ತಿರುವ ನೋಟುರದ್ಧತಿ ಮತ್ತು 2017ರಲ್ಲಿ ಬಹಳ ಆಡಂಬರದಿಂದ ಪರಿಚಯಿಸಿದ ಸರಕು ಮತ್ತು ಸೇವಾ ತರಿಗೆ ಅಥವ ಜಿಎಸ್‌ಟಿ.

ಜಿಡಿಪಿ ಬೆಳವಣಿಗೆಯ ಅಂಕಿಅಂಶಗಳನ್ನು ಉಲ್ಲೇಖಿಸುವದರ ಮೂಲಕ ಈ ಎಲ್ಲ ಕ್ರಮಗಳಿಂದಾಗಿ ಜನರ ಮೇಲಾಗುತ್ತಿರುವ ವಿಚ್ಛಿದ್ರಕಾರಿ ಪರಿಣಾಮಗಳನ್ನು ಕನಿಷ್ಟಗೊಳಿಸಿ ಬಿಡುವ ಪ್ರವೃತ್ತಿ ಇದೆ. ಜಿಡಿಪಿಯಲ್ಲೂ ಸ್ಪಷ್ಟ ಇಳಿಕೆ ಇದ್ದರೂ ಅದು ಅಷ್ಟೊಂದು ಆತಂಕಕಾರಿಯಾಗಿ ಕಾಣಿಸುತ್ತಿಲ್ಲವಲ್ಲ. ಈ ಜಿಡಿಪಿ ಅಂದಾಜಿನಲ್ಲಿಯೇ ದೌರ್ಬಲ್ಯಗಳಿವೆ ಎಂಬುದು ಬೇರೆ ಸಂಗತಿ. ಸ್ವತಃ ಸರಕಾರದ ಆರ್ಥಿಕ ಸಮೀಕೆಯೇ ಈಬಗ್ಗೆ ಟಿಪ್ಪಣಿ ಮಾಡಿದ್ದರೂ ಸರಕಾರ ತನ್ನ ಪ್ರಚಾರಗಳಿಗೆ ಇದನ್ನು ಬಳಸುತ್ತಿದೆ. ಅದೇನೇ ಇರಲಿ, ಅದು ನಿಖರವೆಂದು ಭಾವಿಸಿದರೂ, ಅದರಲ್ಲಿ ಒಂದು ಮೂಲಭೂತ ಕಾರ್ಯವಿಧಾನದ ಸಮಸ್ಯೆ ಇದೆ. ಜಿಡಿಪಿಯ ಲೆಕ್ಕಾಚಾರದಲ್ಲಿ ಸಣ್ಣದೊಂದು ಭಾಗವೆಂದು ಪರಿಗಣಿಸಿರುವ ವಲಯಗಳೇ ಶ್ರಮಿಕರ ಒಂದು ಬಹು ದೊಡ್ಡ ವಿಭಾಗಕ್ಕೆ ಉದ್ಯೋಗವನ್ನು ಒದಗಿಸುತ್ತಿರುವದರಿಂದ ಈ ಸಮಸ್ಯೆ ಉದ್ಭವವಾಗುತ್ತದೆ.

ಕೃಷೀ ವಲಯವನ್ನು ಉದಾಹರಣೆಯಾಗಿ ತೆಗೆದುಕೊಳ್ಳುವದಾದರೆ, ಜಿಡಿಪಿಯಲ್ಲಿ ಕೇವಲ 15% ಭಾಗವಾಗಿರುವ ಇದು ಒಟ್ಟೂ ದುಡಿಮೆಗಾರರಲ್ಲಿ ಸುಮಾರು ಅರ್ಧದಷ್ಟು ಮಂದಿಗೆ ಉದ್ಯೋಗ ಒದಗಿಸಿದೆ. ಈಗ ಒಂದು ಸರಳ ಗಣಿತವನ್ನು ಉದಾಹರಣೆಯಾಗಿ ಪರಿಗಣಿಸೋಣ. ಯಾವುದೇ ಒಂದು ವರ್ಷದಲ್ಲಿ ಕೃಷೀ ವಲಯ 3% ದರದಲ್ಲಿ ಬೆಳೆಯುತ್ತಿದ್ದು, ಕೃಷಿಯೇತರ ವಲಯ 10% (ಸರಳತೆಗೆಂದು ನಾನದನ್ನು ಸಮಗ್ರವಾಗಿ ತೆಗೆದುಕೊಂಡಿದ್ದೇನೆ) ದರದಲ್ಲಿ ಬೆಳೆಯುತ್ತಿದೆ ಎಂದು ಊಹಿಸೋಣ. ಹಾಗಾದಾಗ ಆ ವರ್ಷದಲ್ಲಿ ಆರ್ಥಿಕತೆಯ ಜಿಡಿಪಿ ಅಭಿವೃದ್ಧಿ ದರ 8.95% ಆದಂತಾಯಿತು. ಆದರೆ ಸರಕಾದ ಕೆಲವು ಕ್ರಮಗಳಿಂದಾಗಿ ಕೃಷಿ ವಲಯ 3% ದರದಲ್ಲಿ ಬೆಳೆಯುವ ಬದಲಾಗಿ 5% ಕುಸಿದು ಕೃಷಿಯೇತರ ವಲಯ 10% ಪ್ರತಿಶತ ದರದಲ್ಲಿ ಮುಂದುವರೆಯುತ್ತಿದೆ ಎಂದುಕೊಳ್ಳೋಣ; ಆಗ ಒಟ್ಟಾರೆ ಆರ್ಥಿಕತೆ ಅಭಿವೃದ್ಧಿ ದರ 7.75% ಕ್ಕೆ ಕುಸಿಯುತ್ತದೆ. ಜಿಡಿಪಿ ಅಭಿವೃದ್ಧಿ ದರ 1.2% ಕುಸಿಯುತ್ತದೆ, 8.95 ರಿಂದ 7.75ಕ್ಕೆ, ಇದೊಂದು ಸಣ್ಣ ಕುಸಿತದಂತೆ ಕಂಡರೂ; ದೇಶದ ಅರ್ಧದಷ್ಟು ಜನಸಂಖ್ಯೆ ತಮ್ಮ ಆದಾಯದಲ್ಲಿ 8% ಕುಸಿತ ಕಾಣುತ್ತದೆ, ಸರಕಾರ ಅಂತಹ ಕ್ರಮ ಕೈಗೊಂಡಿರದಿದ್ದರೆ 100ರಿಂದ 103ಕೆ ಏರಬೇಕಾಗಿದ್ದ ಆದಾಯ 95ಕ್ಕೆ ಕುಸಿಯುತ್ತದೆ.

ಆದ್ದರಿಂದ ಸರಕಾರದ ಕ್ರಮಗಳಿಂದ ಜಿಡಿಪಿಯ ದರದಲ್ಲಿ ಸಣ್ಣದೊಂದು ಬದಲಾವಣೆ ಮಾತ್ರ ಕಂಡಿರುವುದರಿಂದ ಅದರಿಂದ ಯಾವುದೇ ಹಾನಿಯಾಗಿಲ್ಲ ಎನ್ನುವದು ತಪ್ಪು ಎಣಿಕೆ. ಆದರೆ, ಅಧಿಕೃತ ವಕ್ತಾರರು ಇಂತಹ ಹೇಳಿಕೆಗಳನ್ನೇ ಕೊಡುತ್ತಿರುತ್ತಾರೆ.

ಮೇಲೆ ಹೇಳಿದಂತಹ ಉದಾಹರಣೆಯಲ್ಲಿ, ಕೃಷಿಯ ಬದಲಾಗಿ ರಾಷ್ಟ್ರೀಯ ಉತ್ಪನ್ನದ 45% ಭಾಗವಾಗಿರುವ, ಅದೇ ವೇಳೆ 85% ಶ್ರಮ–ಶಕ್ತಿಗೆ ಉದ್ಯೋಗ ಒದಗಿಸಿರುವ "ಅನೌಪಚಾರಿಕ" ವಲಯವನ್ನು ಇಟ್ಟು ನೋಡಬೇಕು. ಮೊದಲು ನೋಟುರದ್ಧತಿ, ಆನಂತರ ಜಿ.ಎಸ್.ಟಿ ಅಳಿಸಿಹಾಕಿದ್ದು ಈ ವಲಯವನ್ನೇ. ಈ ವಲಯದಲ್ಲಿ ನೋಟುರದ್ಧತಿಯ ಚರ್ಚೆ ಬಹಳಷ್ಟು ನಡೆದಿದೆ, ಆದರೆ ಜಿ.ಎಸ್.ಟಿ. ಬಗೆಗಿನ ಚರ್ಚೆ ಕಡಿಮೆ ಇದೆ, ಆ ಬಗ್ಗೆ ಮತ್ತಷ್ಟು ಚರ್ಚೆಯಾಗಬೇಕಿದೆ.

ಮೂರು ಸ್ಪಷ್ಟ ವಿಧಾನಗಳಿಂದ ಜಿ.ಎಸ್.ಟಿ ಅನೌಪಚಾರಿಕ ವಲಯವನ್ನು ಸಂಕಷ್ಟಕ್ಕೀಡು ಮಾಡಿದೆ: ಮೊದಲನೇಯದಾಗಿ, ಅರ್ಥಶಾಜ್ಞರು ಕರೆಯುವಂತೆ, ಇಂತಹ ವ್ಯಾಪಾರದ "ವಹಿವಾಟು ವೆಚ್ಚ'ಗಳನ್ನು ಹೆಚ್ಚಿಸಿದೆ, ಉದಾ; ಸಮಯ–ಸಮಯಕ್ಕೆ ಮತ್ತೆ–ಮತ್ತೆ ಅರ್ಜಿಗಳನ್ನು ತುಂಬುವಲ್ಲಿ. ನಿಸ್ಸಂದೇಹವಾಗಿ, ಎಲ್ಲಾ ವ್ಯವಹಾರಗಳಲ್ಲೂ ಈ ವಹಿವಾಟು ವೆಚ್ಚ ಹೆಚ್ಚಾಗಿದೆಾದರೆ ದೊಡ್ಡ ವ್ಯಾಪಾರಸ್ಥರು ಈಗಾಗಲೇ ಇದಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಹೊಂದಿದ್ದಾರೆ. ಅವರ ವೆಚ್ಚದ ಹೆಚ್ಚಳ ಬಹಳ ಅಲ್ಪಪ್ರಮಾಣದ್ದು. ಆದರೆ "ಅನೌಪಚಾರಿಕ" ವಲಯದಲ್ಲಿ ಹಾಗಾಗುವದಿಲ್ಲ.

ಎರಡನೇಯದಾಗಿ, ಅನೌಪಚಾರಿಕ ವಲಯದ ಕುತ್ತಿಗೆ ಹಿಸುಕಿರುವ ಅಂಶವೆಂದರೆ, ತೆರಿಗೆ ದರದ ಮೇಲಿನ ಸರಾಸರಿ ಏರಿಕೆ. ಜಿ.ಎಸ್.ಟಿ ಪದ್ಧತಿಯ ಉದ್ದೇಶಿತ ಗುರಿ "ತೆರಿಗೆ ತಟಸ್ಥತೆ"ಯನ್ನು ಸಾಧಿಸುವದಾಗಿತ್ತು; ಅಂದರೆ ಈ ಹಿಂದಿನ ತೆರಿಗೆ ಆಢಳಿತದ ಸಂದರ್ಭದಲ್ಲಿ ಸಂಗ್ರಹಿಸಲಾದಷ್ಟೇ ತೆರಿಗೆಯನ್ನು ಜಿ.ಎಸ್.ಟಿ ಅವಧಿಯಲ್ಲೂ ಸಂಗ್ರಹಿಸುವಂತೆ ಖಾತ್ರಿ ಮಾಡುವದು. ಅಂದರೆ "ಅನೌಪಚಾರಿಕ" ವಲಯದ ಮೇಲೆ ವಿಧಿಸಲಾದ ತೆರಿಗೆ–ದರದಲ್ಲಿನ ಸರಾಸರಿ ಏರಿಕೆಯಿಂದಾಗಿ, ಬೃಹತ್ ಬಂಡವಾಳಶಾಹೀ ವಲಯದ ಮೇಲಿನ ತೆರಿಗೆ–ದರ ಸರಾಸರಿ ಕಡಿತವಾದಂತಾಗುತ್ತದೆ. ಹಾಗಾಗಿ, ಜಿಎಸ್‌ಟಿ ಎಂಬುದು, "ತೆರಿಗೆ ತಟಸ್ಥತೆ" ಜಾರಿ ಇದ್ದಾಗಲೂ, ತೆರಿಗೆ ಹೊರೆಯನ್ನು ದೊಡ್ಡ ಬಂಡವಾಳಶಾಹೀ ವಲಯದಿಂದ "ಅನೌಪಚಾರಿಕ" ವಲಯದ ಮೇಲೆ ಪುನರ್‌ಹಂಚಿಕೆ ಮಾಡಿ ವರ್ಗಾಯಿಸುವ ಒಂದು ವ್ಯವಸ್ಥೆಯೇ ಆಗಿದೆ.

ಜಿ.ಎಸ್.ಟಿ. ಜಾರಿಗೆ ಬಂದಾಗಿನಿಂದ ತೆರಿಗೆ ಸಂಗ್ರಹ ಮೊದಲಿಗಿಂತ ಕುಸಿದಂತೆ ತೋರುತ್ತಿದೆ; ಅಂದರೆ ಈಗಿರುವ ತರಿಗೆ ದರಕ್ಕೆ ಯಾವುದೇ "ತರಿಗೆ ತಟಸ್ಥತೆ" ಇಲ್ಲ. ಹಾಗಾಗಿ, "ಅನೌಪಚಾರಿಕ" ವಲಯಕ್ಕೆ ತೆರಿಗೆ ದರದಲ್ಲಿ ಕಡಿತಮಾಡುವದರ ಮೂಲಕ ಯಾವುದೇ ನೆರವನ್ನು ಇಂತಹ ಸಂದರ್ಭದಲ್ಲಿ ನಿರೀಕ್ಷಿಸುವಂತಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅನೇಕಬಾರಿ ಅಧಿಕೃತವಾಗಿ ಅವರು ಹೇಳಿಕೊಳ್ಳುವಂತೆ, "ಅನೌಪಚಾರಿಕ" ವಲಯದ ಮೇಲಿನ ದಾಳಿ ಕೇವಲ ಒಂದು ಸಂಕ್ರಮಣ ಘಟ್ಟದ ತಾತ್ಕಾಲಿಕ ವಿದ್ಯಮಾನ ಅಲ್ಲ, ಬದಲಾಗಿ ಅದು ಖಾಯಂ ಆಗಿ ಉಳಿಯುವ ದಾಳಿ.

ಮೂರನೇಯದಾಗಿ, "ಅನೌಪಚಾರಿಕ" ಆರ್ಥಿಕತೆಗೆ ಜಿ.ಎಸ್.ಟಿ.ಯಿಂದಾಗಿ ಉಂಟಾಗುತ್ತಿರುವ ಹೊಡೆತವೆಂದರೆ, ಮರುಪಾವತಿ ಪಡೆಯಬಹುದಾದರೂ, ಪೂರ್ಣ ತೆರಿಗೆಯನ್ನು ಮೊದಲು ಪಾವತಿಸಬೇಕಾಗುತ್ತದೆ ಮತ್ತು ಮರುಪಾವತಿಯನ್ನು ಪಡೆಯುವುದು ಆಮೇಲೆಯೇ. ಇದರಿಂದಾಗಿ "ಅನೌಪಚಾರಿಕ" ಆರ್ಥಿಕತೆಯಲ್ಲಿ ವ್ಯವಹಾರ ನಡೆಸಲು ಬೇಕಾದ ಬಂಡವಾಳದ ವೆಚ್ಚದಲ್ಲಿ ಏರಿಕೆಯಾಗುತ್ತದೆ. ಇನ್ನು ಮುಂದೆ ಇದೇ ರೀತಿಯ ತೆರಿಗೆ ಪಾವತಿ ಪದ್ಧತಿ ಜಾರಿಯಲ್ಲಿರುವದರಿಂದ, ಈ ವೆಚ್ಚದ ಏರಿಕೆ ಸಹ ಕೇವಲ ಒಂದು ಸಂಕ್ರಮಣ ಘಟ್ಟದ ತಾತ್ಕಾಲಿಕ ವಿದ್ಯಮಾನವಾಗಿ ಉಳಿಯಲಾರದು.

ಜಿಎಸ್‌ಟಿ ರಾಜ್ಯಗಳನ್ನು ಅವುಗಳ ಸಂವಿಧಾನಿಕ ಹಕ್ಕುಗಳಿಂದ ವಂಚಿಸುವ ಸಾಧನ ಮತ್ತು ಆಮೂಲಕ ನಮ್ಮ ರಾಜಕೀಯ ವ್ಯವಸ್ಥೆಯ ಒಕ್ಕೂಟ ರಚನೆಯನ್ನು ಬುಡಮೇಲು ಮಾಡುವಂತದ್ದು ಎಂಬುದನ್ನು ಈಗಾಗಲೇ ವ್ಯಾಪಕವಾಗಿ ಗುರುತಿಸಲಾಗಿದೆ. ಆದರೆ ಅದರೊಂದಿಗೇ, ಜಿ.ಎಸ್.ಟಿಯು "ಅನೌಪಚಾರಿಕ' ವಲಯದ ಮೇಲೆ ಒಂದು ಬುದ್ಧಿಪೂರ್ವಕ ದಾಳಿಯೂ ಆಗಿದೆ. ಮತ್ತು ಇದು ಕೇವಲ ಯಾವುದೇ ಒಂದು ಯೋಜನೆಯ "ಆರಂಭಿಕ ಸಮಸ್ಯೆ" ಅಲ್ಲ: ಇದೊಂದ ಮೂಲ ಸಂರಚನಾತ್ಮಕ ವಿದ್ಯಮಾನವಾಗಿದೆ.

ಹಾಗಾಗಿ 2017ರ ವರ್ಷವು, ದೇಶದ ಸರಕಾರವೇ ತನ್ನದೇ ದುಡಿಯುವ ಜನರ ಮೇಲೆ ಉದ್ದೇಶಪೂರ್ವಕವಾಗಿ, ನೇರವಾಗಿ ಮತ್ತು ವಿನಾಕಾರಣ ಧಾಳಿಯನ್ನು ಹರಿಯಬಿಟ್ಟ ಒಂದು ಪರ್ವಕಾಲ ಎಂದು ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸದ ಪುಟಗಳಲ್ಲಿ ದಾಖಲಾಗಲಿದೆ.

ರಾಜ್ಯಗಳ ಸುತ್ತ

ಬಿಜೆಪಿ ಮುಖಂಡರ ಸಭೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ

–ತ್ರಿಪುರಾದಲ್ಲಿ ಚುನಾವಣಾ–ಪೂರ್ವ ವಾತಾವರಣ ಕದಡಿಸಲು ಮತ್ತೊಂದು ಬಿಜೆಪಿ ಕ್ರಮ



ತ್ರಿಪುರಾದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಜಾನ್ ಧರ್ ಬಿಜೆಪಿ–ಐಪಿಎಫ್‌ಟಿ ವರ್ತನೆಗಳ ವಿರುದ್ಧ ಸಂಘಟಿಸಿದ್ದ ಒಂದು ಬೃಹತ್ ರ್‍ಯಾಲಿಯಲ್ಲಿ

ಜನವರಿ 14 ರಂದು ಕೇಂದ್ರ ಗೃಹಮಂತ್ರಿಗಳ ಅಧಿಕೃತ ನಿವಾಸದಲ್ಲಿ ತ್ರಿಪುರಾ, ಮೇಘಾಲಯ ಮತ್ತು ನಾಗಾಲ್ಯಾಂಡಿನಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳ ಬಗ್ಗೆ ಚರ್ಚಿಸಲು ಬಿಜೆಪಿ ಮತ್ತು ಆರೆಸ್ಸೆಸ್ ಮುಖಂಡರ ಸಭೆ ನಡೆಯಿತು, ಅದರಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ) ಅಜಿತ್ ದೋವಲ್ ಕೂಡ ಭಾಗವಹಿಸಿದ್ದರು ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯುಕ್ತರಿಗೆ ಪತ್ರ ಬರೆದ ತ್ರಿಪುರಾದ ಸಿಪಿಐ(ಎಂ) ಕಾರ್ಯದರ್ಶಿ ಬಿಜನ್ ಧರ್ (ಈ ಸಂಚಿಕೆಯ ಪುಟ 2ರಲ್ಲಿ ಪ್ರಕಟವಾಗಿರುವ ಸಿಪಿಯ(ಎಂ) ಪೊಲಿಟ್‌ಬ್ಯುರೊ ಹೇಳಿಕೆ ಮತ್ತು ಸುದ್ದಿ ನೋಡಿ)ಅವರು ಈ ಕುರಿತು ಒಂದು ಪತ್ರಿಕಾ ಸಮ್ಮೇಳನ ನಡೆಸಿದರು. ಬಿಜೆಪಿ ಮುಖಂಡರ ರಾಜಕೀಯ ಚರ್ಚೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರರು ಸಕ್ರಿಯವಾಗಿ ಭಾಗವಹಿಸಿರುವುದನ್ನು ಅವರು ಬಲವಾಗಿ ಖಂಡಿಸಿದರು.

ಒಂದು ಪಕ್ಷದ ಚುನಾವಣಾ–ಪೂರ್ವ ಸಭೆಯಲ್ಲಿ ಎನ್‌ಎಸ್‌ಎ ಹುದ್ದೆಯಲ್ಲಿರುವವರ ನೇರ ಭಾಗವಹಿಸುವಿಕೆ ಅತ್ಯಂತ ಕಳವಳಕಾರಿ, ಏಕೆಂದರೆ ಆರೆಸ್ಸೆಸ್–ಬಿಜೆಪಿ ರಾಜ್ಯದಲ್ಲಿ ಐಪಿಎಫ್‌ಟಿ(ಎನ್‌ಸಿ) ಎಂಬ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿದೆ. ಈ ಪಕ್ಷ ಈಗ ಕಾನೂನುಬಾಹಿರವಾಗಿರುವ ಪ್ರತ್ಯೇಕತಾವಾದಿ ಎನ್‌ಎಲ್‌ಎಫ್‌ಟಿಯ ರಾಜಕೀಯ ಮುಖವಾಡ.

ಇಷ್ಟೇ ಅಲ್ಲ, ಇತ್ತೀಚೆಗೆ ಒಬ್ಬ ಪತ್ರಕರ್ತನನ್ನು ಕೊಂದಿರುವ ಆಪಾದನೆಗೊಳಗಾಗಿ ನಾಪತ್ತೆಯಾಗಿದ್ದ ಇಬ್ಬರನ್ನು ಬಿಜೆಪಿಯ ರಾಜ್ಯ ಮುಖಂಡರು ತಮ್ಮ ಪಕ್ಷಕ್ಕೆ ಸೇರಿಸಿಕೊಂಡಿದ್ದಾರೆ. ಇವೆಲ್ಲ ಮುಂದಿನ ತಿಂಗಳು ನಡೆಯಲಿರುವ ಚುನಾವಣೆಗಳ ಹಿನ್ನೆಲೆಯಲ್ಲಿ ಅಪಾಯಕಾರಿ ಮುನ್ಸೂಚನೆಗಳು. ಆದ್ದರಿಂದ ಇದರ ಆಮೂಲಾಗ್ರ ತನಿಖೆ ನಡೆಸಿ ನಿಯಮಾವಳಿಗಳನ್ನು ಉಲ್ಲಂಘಿಸಿರುವವರ ಮೇಲೆ ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು ಎಂದು ಚುನಾವಣಾ ಆಯೋಗವನ್ನು ಬಿಜಾನ್ ಧರ್ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಕುತಂತ್ರದ ಹಾದಿಯಲ್ಲಿ ಈಗ ಬಿಜೆಪಿ

ಈ ಸಂದರ್ಭದಲ್ಲಿ ಇದೇ ರಾಜ್ಯದಲ್ಲಿ ಸರಿಯಾಗಿ ಮೂರು ದಶಕಗಳ ಹಿಂದೆ ನಡೆದ ಘಟನೆಗಳನ್ನು ಧರ್ ನೆನಪಿಸಿದ್ದಾರೆ.

ತ್ರಿಪುರಾದಲ್ಲಿ 1988ರ ವಿಧಾನಸಭಾ ಚುನಾವಣೆಗಳು ನಡೆಯಬೇಕಾಗಿದ್ದ ಸಂದರ್ಭದಲ್ಲಿ ಆಗ ಪ್ರಧಾನ ಮಂತ್ರಿಯಾಗಿದ್ದ ರಾಜೀವ ಗಾಂಧಿ ಮತ್ತು ಟಿಎನ್‌ವಿ ಉಗ್ರಗಾಮಿ ಮುಖಂಡ ಬಿಜೊಯ್ ಹ್ರಾಂಗ್‌ಖ್ವಾಲ್ ನಡುವೆ ಒಂದು ಗುಪ್ತ ವ್ಯವಹಾರ ನಡೆಯಿತು. ಇದರ ಮಧ್ಯಸ್ಥಿಕೆ ವಹಿಸಿದ್ದವರು ಆಗ ಮಿಜೋರಾಂ ಮುಖ್ಯಮಂತ್ರಿಯಾಗಿದ್ದ ಲಾಲ್ಥನ್‌ಹವ್ಲ. ಈ 'ಡೀಲ್' ಪ್ರಕಾರ ಮೂರು ವಾರಗಳಲ್ಲಿ ಸುಮಾರು ಒಂದು ನೂರು ಬುಡಕಟ್ಟೇತರ ಜನಗಳನ್ನು ಟಿಎನ್‌ವಿ ಉಗ್ರರು ರಾಜ್ಯದ ಹಲವೆಡೆಗಳಲ್ಲಿ ಸಾಯಿಸಿದರು. ಕೆಲವೆಡೆ ಈ ಕೃತ್ಯಗಳಲ್ಲಿ ಕೇಂದ್ರ ಗುಪ್ತಚರ ಪಡೆಯಾದ ರಾ(ಆರ್‌ಎಡಬ್ಲ್ಯು)ನ ಮುಸುಕುಧಾರೀ ಮಂದಿ ಕೂಡ ಭಾಗವಹಿಸಿದ್ದರು ಎಂದು ಆಮೇಲೆ ತಿಳಿದು ಬಂತು. ಕೇಂದ್ರ ಸರಕಾರ ಇದನ್ನೇ ನೆವ ಮಾಡಿಕೊಂಡು ರಾಜ್ಯದಲ್ಲೆಲ್ಲ 'ಗಲಭೆ ಪೀಡಿತ ಪ್ರದೇಶ ಕಾಯ್ದೆಯನ್ನು ಹಾಕಿತು, ಮತಗಣನೆ ಕೇಂದ್ರಗಳಲ್ಲಿ ಮಿಲಿಟರಿ ಅಧಿಕಾರಗಳನ್ನು ಜಾರಿ ಮಾಡಿ ಈ ಮೊದಲು ಸಿಪಿಐ(ಎಂ) ಅಭ್ಯರ್ಥಿಯ ಗೆಲುವನ್ನು ಘೋಷಿಸಿದ್ದ ಚುನಾವಣಾಧಿಕಾರಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದ ಎಂದು ಘೋಷಿಸುವಂತೆ ಮಾಡಲಾಯಿತು.

ಇದರಿಂದಾಗಿ 1983ರ ಚುನಾವಣೆಗಳಲ್ಲಿ ಒಟ್ಟು 60 ಸ್ಥಾನಗಳಲ್ಲಿ 40 ಅಂದರೆ ಮೂರನೇ ಎರಡು ಬಹುಮತ ಪಡೆದಿದ್ದ ಎಡರಂಗದ ಬಲವನ್ನು 28ಕ್ಕೆ ಇಳಿಸಲಾಯಿತು. ಇಷ್ಟೆಲ್ಲ ಪಿತೂರಿಗಳನ್ನು ನಡೆಸಿಯೂ ಕಾಂಗ್ರೆಸ್ ಪಡೆದದ್ದು ಸಿಪಿಐ(ಎಂ) ಪಡೆದದ್ದಕ್ಕಿಂತ 1 ಕಡಿಮೆ, ಎಂದರೆ 25. ಅದು 7 ಸ್ಥಾನಗಳನ್ನು ಪಡೆದಿದ್ದ ಪ್ರತ್ಯೇಕತಾವಾದಿ ಪಕ್ಷ ಟಿಯುಜೆಎಸ್‌ನೊಂದಿಗೆ ಮೈತ್ರಿ ಸರಕಾರ ರಚಿಸಿತು. ಇದು ಮುಂದೆ ಐದು ವರ್ಷಗಳ ಕಾಲ ಕಾಂಗ್ರೆಸ್–ಟಿಯುಜೆಎಸ್‌ನ ಅರೆ ಫ್ಯಾಸಿಸ್ಟ್ ಆಳ್ವಿಕೆಗೆ ನಾಂದಿಯಾಯಿತು.

ಇದು ಮೋಸದಿಂದ ಪಡೆದ ವಿಜಯ ಎಂದು ಮುಂದಿನ ಚುನಾವಣೆಗಳಲ್ಲಂತೂ ಎಲ್ಲರಿಗೂ ಸ್ಪಷ್ಟವಾಯಿತು. 1993ರಲ್ಲಿ ದೇಶದಲ್ಲಿ ಬದಲಾದ ಸನ್ನಿವೇಶದಲ್ಲಿ ನಡೆದ ಮುಕ್ತ ಚುನಾವಣೆಗಳಲ್ಲಿ ಎಡರಂಗದ ಬಲ 47ಕ್ಕೆ ಏರಿದರೆ, ಕಾಂಗ್ರೆಸ್‌ನ ಬಲ 25ರಿಂದ 10ಕ್ಕೆ(1983ರಲ್ಲಿ ಇದ್ದುದಕ್ಕಿಂತಲೂ ಕಡಿಮೆ) ಮತ್ತು ಅದರ ಮಿತ್ರಪಕ್ಷ ಟಿಯುಜೆಎಸ್ ಬಲ 7ರಿಂದ 1ಕ್ಕೆ ಇಳಿಯಿತು.

'ಕಾಂಗ್ರೆಸ್–ಮುಕ್ತ ಭಾರತ' ಮಾತಾಡುವ ಬಿಜೆಪಿ ಎಲ್ಲ ರಂಗಗಳಲ್ಲೂ ಕಾಂಗ್ರೆಸ್ ಹಿಡಿದ ತಪ್ಪು ದಾರಿಯಲ್ಲಿಯೇ ಸಾಗಿರುವುದರ ಇನ್ನೊಂದು ಉದಾಹರಣೆಯನ್ನು ಬಿಜಾನ್ ಧರ್ ತಮ್ಮ ಪತ್ರಿಕಾಸಮ್ಮೇಳನದಲ್ಲಿ ನೀಡಿದರು. ಬಿಜೆಪಿ ಈಗ ಜನವರಿ 5ರಂದು ಪ್ರಕಟಿಸಿದ ಮತದಾರರ ಪಟ್ಟಿಯ ಬಗ್ಗೆ ಬಹಳ ಗದ್ದಲ ಎಬ್ಬಿಸುತ್ತಿದೆ. ಕಾಂಗ್ರೆಸ್ ಕೂಡ ಇಂತಹುದೇ ಗದ್ದಲ ಎಬ್ಬಿಸಿತ್ತು.

ಸಿಪಿಐ(ಎಂ)ನ ಚುನಾವಣಾ ಪ್ರಚಾರ ಸಾಮಗ್ರಿಗಳು–ಪತಾಕೆಗಳು, ಫ್ಲೆಕ್ಸ್, ಬಾವುಟಗಳು ಇತ್ಯಾದಿಗಳನ್ನು ಹಾಳುಗೆಡಹುವ ಪ್ರಯತ್ನಗಳು ನಡೆಯುತಿವೆ, ಅಪರಾಧಿಗಳು ಈಗಾಗಲೇ ಸಿಕ್ಕಿಬಿದ್ದಿದ್ದಾರೆ ಎಂದಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಶಾಂತಿಯುತ ರಾಜ್ಯದ ಘನತೆಯ ರಾಜಕೀಯ ಸಂಸ್ಕೃತಿಗೆ ಮಸಿ ಬಳೆಯುವ ಇಂತಹ ಪ್ರಯತ್ನಗಳು ಮುಂದೆ ನಡೆಯುವುದಿಲ್ಲ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಒಂದು ಪ್ರಶ್ನೆಗೆ ಉತ್ತರಿಸುತ್ತ ಬಿಜಾನ್ ಧರ್, ಈ ಹಿಂದಿನಂತೆ ಈ ಬಾರಿಯೂ ಜನತೆಯ ಮಿತ್ರರು ಮತ್ತು ಶತ್ರುಗಳು ಚುನಾವಣಾ ರಂಗದಲ್ಲಿ ಎದುರು ಬದುರಾಗುತ್ತಿದ್ದಾರೆ ಎಂದರು. ಜನಗಳ ಮಿತ್ರರ ಪಾಳೆಯ ಹಿಂದಿನಂತೆ ಎಡರಂಗದ ನೇತೃತ್ವದಲ್ಲಿದೆ, ಆದರೆ ಜನತೆಯ ಶತ್ರುಗಳ ಪಾಳೆಯ ಈ ಬಾರಿ ಬಿಜೆಪಿ–ಐಪಿಎಫ್‌ಟಿ(ಎನ್‌ಸಿ) ನೇತೃತ್ವದಲ್ಲಿದೆ, ಈ ಬಾರಿ ಹೊಸ ರಾಜಕೀಯ ಅಂಶ ಪ್ರವೇಶಿಸಿದರೂ ಇದು ನಾವು ಎದುರಿಸುತ್ತ ಬಂದಿರುವ'ವರ್ಗಹೋರಾಟದ ಭಾಗವೇ ಆಗಿದೆ ಎಂದು ಬಿಜಾನ್ ಧರ್ ಹೇಳಿದರು.

ರಾಜ್ಯಾದ್ಯಂತ ಎಡರಂಗ ಈ ಹೋರಾಟಕ್ಕೆ ಅಣಿಯಾಗಿ ನಿಂತಿದೆ ಎಂಬುದು ಪ್ರತಿದಿನ ಬರುತ್ತಿರುವ ಕೆಮಬಾವುಟಗಳ ಮೆರವಣಿಗೆಗಳಲ್ಲಿ ಪ್ರದರ್ಶಿತವಾಗುತ್ತಿದೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ತ್ರಿಪುರ, ಮೇಘಾಲಯ ಮತ್ತು ನಾಗಾಲ್ಯಾಂಡ್ ವಿಧಾನಸಭೆಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಮುಖ್ಯ ಚುನಾವಣಾ ಕಮಿಶನರ್ ಪ್ರಕಟಿಸಿದ್ದಾರೆ.

ತ್ರಿಪುರಾದಲ್ಲಿ ಮತದಾನ ಫೆಬ್ರುವರಿ 18 ರಂದು ಮತ್ತು ಉಳಿದೆರಡು ರಾಜ್ಯಗಳಲ್ಲಿ ಫೆಬ್ರುವರಿ 27 ರಂದು ನಡೆಯಲಿದೆ. ಮತಗಣನೆ ಮೂರೂ ರಾಜ್ಯಗಳಲ್ಲಿ ಮಾರ್ಚ್ 3 ರಂದು ನಡೆಯಲಿದೆ. ಮೂರೂ ರಾಜ್ಯಗಳಲ್ಲಿ ವಿಧಾನ ಸಭಾ ಸೀಟುಗಳ ಸಂಖ್ಯೆ 60.

ಕೇರಳ: ಒಂದೂವರೆ ವರ್ಷದಲ್ಲೇ ನಷ್ಟದಲ್ಲಿದ್ದ ಸಾರ್ವಜನಿಕ ವಲಯದ ಘಟಕಗಳು ಈಗ ಮತ್ತೆ ಲಾಭದಲ್ಲಿ

ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಮತ್ತೆ ಅಧಿಕಾರಕ್ಕೆ ಬಂದ ಮೇಲೆ ನಷ್ಟಲ್ಲಿದ್ದ ರಾಜ್ಯದ ಸಾರ್ವಜನಿಕ ವಲಯದ ಘಟಕ(ಪಿಎಸ್‌ಯು)ಗಳು ಮತ್ತೆ ಲಾಭ ಮಾಡಲಾರಂಭಿಸಿವೆ.

ರಾಜ್ಯ ಸಾರ್ವಜನಿಕ ವಲಯ ಮತ್ತು ಸ್ವಾಯತ್ತ ಸಂಸ್ಥೆಗಳ ಅಧಿಕಾರಿಗಳ ಒಕ್ಕೂಟ ಕಲೆ ಹಾಕಿದ ಅಂಕಿ–ಅಂಶಗಳ ಪ್ರಕಾರ ಕೇರಳ ಸರಕಾರದ ಕೈಗಾರಿಕಾ ಇಲಾಖೆಯ ಅಡಿಯಲ್ಲಿ ಬರುವ 96 ಘಟಕಗಳು 2001–06 ರ ಯುಡಿಎಫ್ ಆಳ್ವಿಕೆಯಲ್ಲಿ ವಾರ್ಷಿಕ ಸರಾಸರಿ 213.74 ಕೊಟಿ ರೂ. ನಷ್ಟ ಅನುಭವಿಸಿದ್ದವು. 2006–11ರ ಎಲ್‌ಡಿಎಫ್ ಸರಕಾರದ ಅಡಿಯಲ್ಲಿ ಅವು ವಾರ್ಷಿಕ ಸರಾಸರಿ 292.45 ಕೋಟಿ ರೂ. ಲಾಭ ಗಳಿಸಿದವು. ಮತ್ತೆ 2011 ರಿಂದ 2014–15 ರ ನಡುವೆ ಯುಡಿಎಫ್ ಆಳ್ವಿಕೆಯಲ್ಲಿ ನಷ್ಟದ ಸರಾಸರಿ 645.92 ಕೋಟಿ ರೂ.

ಈಗಿನ ಎಲ್‌ಡಿಎಫ್ ಸರಕಾರ ಅಧಿಕಾರ ವಹಿಸಿಕೊಂಡಾಗ ರಾಜ್ಯದ ಪಿಎಸ್‌ಯುಗಳು ಒಟ್ಟಾಗಿ 131.6 ಕೋಟಿ ರೂ. ನಷ್ಟದಲ್ಲಿದ್ದವು. ಎಲ್‌ಡಿಎಫ್ ಆಳ್ವಿಕೆಯ ಮೊದಲ ವರ್ಷದಲ್ಲಿ ಈ ನಷ್ಟ ಕಡಿಮೆಯಾಯಿತು, ಈಗ ಅದು ಲಾಭದತ್ತ ಸಾಗುತ್ತಿದೆ. 2017–18ರಲ್ಲಿ ಒಟ್ಟಾಗಿ 34.19 ಕೋಟಿ ರೂ. ಲಾಭದಲ್ಲಿವೆ.

2016–17ರಲ್ಲೇ 40.37 ಕೊಟಿ ರೂ. ಲಾಭ ಗಳಿಸಿದ್ದ ಕೆಎಂಎಂಎಲ್ ಲಾಭ 2017–18ರಲ್ಲಿ 136 ಕೋಟಿ ರೂ.ಗಳಿಗೇರಿದೆ. ಟಿಟಿಪಿ ಲಾಭ ಗಳಿಕೆ 3 ಕೊಟಿ ರೂ.ನಿಂದ 20 ಕೋಟಿ ರೂ.ಗೇರಿದೆ. ತ್ರಾವಣ್‌ಕೋರ್–ಕೊಚಿನ್ ಕೆಮಿಕಲ್ಸ್(ಟಿಸಿಸಿ) ಲಾಭ ಗಳಿಕೆ 15 ಕೋಟಿ ರೂ.ನಿಂದ 18.87 ಕೋಟಿರೂ. ಗೇರಿದೆ. ಕಳೆದ ವರ್ಷ ನಷ್ಟದಲ್ಲಿದ್ದ ಕೆಎಸ್‌ಐಇ ಈ ವರ್ಷ ಲಾಭ ಮಾಡುತ್ತಿದೆ. ಎಲ್‌ಡಿಎಫ್ ಸರಕಾರ ಉದ್ದಿಮೆಗಳ ಆಧುನೀಕರಣಕ್ಕೆ ಮಾಡುವ ಖರ್ಚನ್ನು 100 ಕೊಟಿರೂ. ಗಳಿಂದ 270 ಕೋಟಿ ರೂ.ಗಳಿಗೆ ಏರಿಸಿದ್ದರಿಂದ ಕೆಇಎಲ್, ಕೆಎಎಲ್, ಟಿಇಎಲ್‌ಕೆ, ಆಟೋಕಾಸ್ಟ್ ಆಧುನೀಕರಣಗೊಳ್ಳುತ್ತಿದ್ದು ಲಾಭದತ್ತ ಸಾಗಿವೆ.

ಸರಕಾರ ಸಾರ್ವಜನಿಕ ವಲಯದ ಘಟಕಗಳನ್ನು ಲಾಭದಾಯಕಗೊಳಿಸಲು ಒಂದು ಸಮಗ್ರ ಮಧ್ಯಪ್ರವೇಶ ನಡೆಸಿದ್ದರಿಂದಾಗಿ ಇದು ಸಾಧ್ಯವಾಗಿದೆ, ಈ ಕಂಪನಿಗಳ ನವೀಕರಣಕ್ಕೆ ಸರಕಾರ ಒಂದು ವೃತ್ತಿಪರ ನಿಲುವು ಅಂಗೀಕರಿಸಿದೆ ಎಂದು ಕೈಗಾರಿಕಾ ಮಂತ್ರಿ ಎ ಸಿ ಮೊಯಿದ್ದೀನ್ ಹೇಳಿದ್ದಾರೆ.

ಹರ್ಯಾಣದಲ್ಲಿ ಮೂರು ದಿನಗಳಲ್ಲಿ ನಾಲ್ಕು ಅತ್ಯಾಚಾರದ ಪ್ರಕರಣಗಳು

ಹರ್ಯಾಣದಲ್ಲಿ ಕಳೆದ ವಾರ ಮೂರು ದಿನಗಳಲ್ಲೇ ನಾಲ್ಕು ಬಾಲಕಿಯರು/ಮಹಿಳೆಯರ ಮೇಲೆ ಅತ್ಯಾಚಾರದ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ ಮೂರು ಅತ್ಯಂತ ಘೋರ ರೀತಿಯಲ್ಲಿ ನಡೆದಿವೆ. ಕುರುಕ್ಷೇತ್ರ/ಜಿಂದ್, ಪಾಣಿಪತ್, ಪಿಂಜೋರ್ ಮತ್ತು ಫರಿದಾಬಾದ್ ನಿಂದ ಈ ಪ್ರಕರಣಗಳು ವರದಿಯಾಗಿವೆ.. ಪೋಲೀಸರಿಗೆ ಇನ್ನೂ ಇವುಗಳ ಸುಳಿಹು ಸಿಕ್ಕಿಲ್ಲ, ಆದರೆ ರಾಜ್ಯದ ಅಡಿಶನಲ್ ಡಿಜಿಪಿ ನಾವು ಕ್ರಿಮಿನಲ್‌ಗಳನ್ನು ಹಿಡಿಯುತ್ತೇವೆ ಎನ್ನುವಾಗಲೂ "ಇದು ನಮ್ಮ ಸಮಾಜದ ಭಾಗ. ಎಂದಿನಿಂದಲೂ ಇಂತಹ ಘಟನೆಗಳು ನಡೆಯುತ್ತಲೇ ಇವೆ" ಎಂದು ಹೇಳಿರುವುದಾಗಿ ವರದಿಯಾಗಿದೆ.

ಹರ್ಯಾಣ ಸರಕಾರದ ವಿಫಲತೆಯನ್ನು ಪ್ರತಿಭಟಿಸಿ ದಿಲ್ಲಿಯಲ್ಲಿ ಹರ್ಯಾಣ ಭವನದ ಎದುರು ಜನವಾದಿ ಮಹಿಳಾ ಸಂಘಟನೆ ಸೇರಿದಂತೆ ಹಲವು ಮಹಿಳಾ ಸಂಘಟನೆಗಳು ಜನವರಿ 17ರಂದು ಪ್ರತಿಭಟನೆ ಹರ್ಯಾಣದ ಮುಖ್ಯಮಂತ್ರಿಗಳ ಪ್ರತಿಕೃತಿಯನ್ನು ಸುಟ್ಟು ಆಕ್ರೋಶವನ್ನು ವ್ಯಕ್ತಪಡಿಸಿದವು. ಬಿಜೆಪಿ ಸರಕಾರ ತನ್ನ 'ಬೇಟಿ ಬಚಾವೋ' ಘೋಷಣೆಗೆ ಬದ್ಧವಾಗಿಲ್ಲ, ಮಹಿಳೆಯರಿಗೆ ರಕ್ಷಣೆ ಕೊಡಲಾರದ ಮುಖ್ಯಮಂತ್ರಿ ಖಟ್ಟರ್ ರಾಜೀನಾಮೆ ಕೊಡಬೇಕು ಎಂಬಿತ್ಯಾದಿ ಘೋಷಣೆಗಳು ಪ್ರತಿಭಟನೆಯಲ್ಲಿ ಕೇಳಬಂದವು.



ಚಿಲಿ – ಮತ್ತೆ ಬಲಪಂಥೀಯ ಅಧ್ಯಕ್ಷ

ಭಿನ್ನವಾಗಿ ಕಾಣದ ಸಮಾಜವಾದಿ ಪಕ್ಷದ ಸೋಲು–ಹೊಸ ಎಡ ವೇದಿಕೆಯ ರಚನೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಡಿಸೆಂಬರ್ 17 ರಂದು ನಡೆದ ಚಿಲಿಯ ಅಧ್ಯಕ್ಷೀಯ ಚುನಾವಣೆಯಲ್ಲಿ 'ಲೆಟ್ಸ್ ಗೋ ಚಿಲಿ' ಮೈತ್ರಿಕೂಟವನ್ನು ಪ್ರತಿನಿಧಿಸುವ ಬಲಪಂಥೀಯ ಅಭ್ಯರ್ಥಿ ಉದ್ಯಮಿ ಸೆಬಾಸ್ಟಿಯನ್ ಪಿನೆರಾ, ಶೇಕಡ 54 ರಷ್ಟು ಮತಗಳನ್ನು ಪಡೆದು ಮಧ್ಯ–ಎಡ ಮಯತ್ರಿಕೂಟವಾದ 'ನ್ಯೂ ಮೆಜಾಂಟಿ' ಅಭ್ಯರ್ಥಿ ಅಲೆಜಾಂಡ್ರೋ ಗಿಲಿಯರ್ ರವರನ್ನು ಸೋಲಿಸಿದ್ದಾರೆ. ಒಟ್ಟು ಚಲಾಯಿಸಿದ್ದ ಮತಗಳ ಪೈಕಿ ಮೊದಲ ಸುತ್ತಿನಲ್ಲಿ ಯಾವುದೇ ಅಭ್ಯರ್ಥಿ ಶೇ. 50 ಕ್ಕಿಂತ ಹೆಚ್ಚು ಮತಗಳನ್ನು ಪಡೆಯದ ಕಾರಣ, ನಿರ್ಣಾಯಕ ಸುತ್ತಿನ ಮತದಾನವನ್ನು ನಡೆಸಲಾಗಿತ್ತು. ಪಿನೆರಾ ವಿಜಯದೊಂದಿಗೆ ಚಿಲಿಯು ಇದೀಗ ದಕ್ಷಿಣ ಅಮೆರಿಕಾದಲ್ಲಿ ಸಂಪ್ರದಾಯವಾದಿ ಮುಖಂಡರ ನೇತರತ್ವದಲ್ಲಿರುವ ಅರ್ಜೆಂಟೈನಾ, ಬ್ರೆಜಿಲ್ ಮತ್ತು ಪೆರು ದೇಶಗಳ ಸಾಲಿಗೆ ಸೇರಿಕೊಂಡಂತಾಗಿದೆ.

ಚಿಲಿಯಲ್ಲಿ ನಡೆದ ಈ ಅಧ್ಯಕ್ಷೀಯ ಚುನಾವಣೆಗಳಲ್ಲಿ ತುಂಬ ಕಡಿಮೆ ಮತದಾನ ನಡೆದಿರುವುದನ್ನು ಗುರುತಿಸಬೇಕಾಗಿದೆ. ಮೊದಲ ಸುತ್ತಿನಲ್ಲಿ ಎಡಪಂಥೀಯ 'ಬ್ರಾಡ್ ಫ್ರಂಟ್' ಅಭ್ಯರ್ಥಿ ಒಳಗೊಂಡಂತೆ ಎಂಟು ಅಭ್ಯರ್ಥಿಗಳು ಸ್ಪರ್ಧೆಯ ಕಣದಲ್ಲಿದ್ದರೂ ಸಹ, ಶೇ. 50 ಕ್ಕಿಂತ ಕಡಿಮೆ ಮತದಾನವಾಗಿತ್ತು. ಎರಡನೇ ಹಂತದಲ್ಲಿ ಕೂಡಾ, ಶೇ. 44 ರಷ್ಟು ಮತಗಳು ಮಾತ್ರ ಚಲಾವಣೆಯಾಯಿತು. ಕಳೆದ ಬಾರಿ ಅಂದರೆ, 2013 ರ ಅಧ್ಯಕ್ಷೀಯ ಚುನಾವಣೆಯಲ್ಲಿಯೂ ಸಹ, ಕೇವಲ ಶೇ. 43 ರಷ್ಟು ಮತದಾನ ನಡೆದಿತ್ತು. ಜನರಲ್ಲಿ ಬೆಳೆಯುತ್ತಿರುವ ರಾಜಕೀಯ ಉದಾಸೀನತೆ ಅಥವಾ ಆಡಳಿತದ ಬಗ್ಗೆ ಅವರಲ್ಲಿನ ಅಸಮಾಧಾನ ಈ ರೀತಿ ಬಹಿರಂಗವಾಗಿಯೇ ವ್ಯಕ್ತವಾಗಿದೆ ಎಂದು ಇದರಿಂದ ಗುರುತಿಸಲಾಗಿದೆ.

ನಿರ್ಣಾಯಕ ಸುತ್ತಿನ ಮತದಾನದ ಮುನ್ನ ನಡೆದ ಜನಾಭಿಪ್ರಾಯ ಸಂಗ್ರಹ ವರದಿಯ ಶೇ. 29 ರಷ್ಟು ಚಿಲಿಯನ್ನರು ಎರಡೂ ಪ್ರಮುಖ ರಾಜಕೀಯ ಮೈತ್ರಿಕೂಟಗಳ ಬಗ್ಗೆ ನಿರಾಸಕ್ತಿ ವ್ಯಕ್ತಪಡಿಸಿದ್ದರು, ಅದರಲ್ಲಿ ಅರ್ಧದಷ್ಟು ಜನರು ರಾಜಕೀಯದ ಬಗ್ಗೆಯೇ ತಮ್ಮ ನಿರಾಸಕ್ತಿಯನ್ನು ವ್ಯಕ್ತಪಡಿಸಿದ್ದರು.

ಕಳೆದ ನಾಲ್ಕು ಅಧ್ಯಕ್ಷೀಯ ಚುನಾವಣೆಗಳಲ್ಲಿ ಚಿಲಿ ದೇಶವನ್ನು ಮಧ್ಯ–ಎಡ ಮೈತ್ರಿಕೂಟ ಮುನ್ನಡಿಸಿತ್ತು. 2010 ರಲ್ಲಿ ಒಮ್ಮೆ ಮಾತ್ರ ಬಲಪಂಥೀಯ ಮತ್ತು ಮಧ್ಯಪಂಥೀಯರು ಗೆಲುವು ಸಾಧಿಸಿದ್ದರು. 2006 ರಲ್ಲಿ ಚಿಲಿಯನ್ನರು ಸಮಾಜವಾದಿ ಪಕ್ಷದ ಮಹಿಳಾ ಅಭ್ಯರ್ಥಿಯಾದ ಮಿಚೆಲ್ ಬ್ಯಾಚೆಲೆಟ್‌ರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದರು. ಚಿಲಿಯ ಸಂವಿಧಾನದ ಪ್ರಕಾರ, ಯಾವುದೇ ಅಭ್ಯರ್ಥಿ ಸತತವಾಗಿ ಎರಡನೇ ಬಾರಿ ಅಧ್ಯಕ್ಷರ ಕಛೇರಿಗೆ ಪ್ರವೇಶಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಮಿಚೆಲ್ ರವರು 2010 ರಲ್ಲಿ ಪುನಃ ಎರಡನೆ ಸರದಿಗೆ ಸ್ಪರ್ಧಿಸಲು ಸಾಧ್ಯವಾಗಿರಲಿಲ್ಲ. ಆಕೆಯ ಪಕ್ಷದ ಅಭ್ಯರ್ಥಿ ಬಲ ಪಂಥೀಯ – ಮಧ್ಯಪಂಥೀಯ ಮೈತ್ರಿಕೂಟದ ಪಿನೆರಾ ಎದುರು ಸೋತರು. 2014 ರಲ್ಲಿ ಮತ್ತೆ ಮಿಚೆಲ್ ಬ್ಯಾಚೆಲೆಟ್ ಪಿನೆರಾರನ್ನೂ ಸೋಲಿಸಿ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ಇದೀಗ ಅವರ ಅವಧಿ 2018 ರ ಮಾರ್ಚ್ ಗೆ ಮುಗಿಯಲಿದೆ. ಈ ಬಾರಿಯ ಚುನಾವಣೆಯಲ್ಲಿ ಮತ್ತೆ ಪಿನೆರಾ ರವರೇ ಗೆಲುವು ಸಾಧಿಸಿ, ಮಿಚೆಲ್‌ರ ಸ್ಥಾನದಲ್ಲಿ ಅಧ್ಯಕ್ಷರಾಗಿ ಆಡಳಿತ ವಹಿಸಿಕೊಳ್ಳುತ್ತಾರೆ.



ಈ ಬಾರಿಯ ಚುನಾವಣೆಗಳಲ್ಲಿ ಚಿಲಿಯ ಕೆಳ ಸದನದಲ್ಲಿ ನಿರ್ಣಾಯಕ ಪಾತ್ರ ವಹಿಸಬಹುದಾದ ಎಡಪಂಥೀಯ 'ಬ್ರಾಡ್‌ಫ್ರಂಟ್'ನ ಅಧ್ಯಕ್ಷೀಯ ಅಭ್ಯರ್ಥಿ ಬೀಟ್ರಿಝ್ ಸಾಂಚೆಝ್ ಮತ್ತು ಬೆಂಬಲಿಗರು

ಧೋರಣೆಗಳಲ್ಲಿ ಭಿನ್ನತೆಯಿಲದ "ಎಡ–ಬಲ": ಜನಗಳಲ್ಲಿ ಭ್ರಮನಿರಸನ

ಸಮಾಜವಾದಿ ಪಕ್ಷದ ಮಿಚೆಲ್ ಬ್ಯಾಚೆಲೆಟ್ ಹಾಗೂ ಬಲ ಪಂಥೀಯ ಸೆಬಾಸ್ಟಿನ್ ಪಿನೆರಾ – ಇಬ್ಬರಧೋರಣೆಗಳಲ್ಲಿ ವ್ಯತ್ಯಾಸವೇನೂ ಇರಲಿಲ್ಲ. ಇಬ್ಬರೂ ನವ–ಉದಾರವಾದಿ ನೀತಿಗಳನ್ನೇ ಅನುಸರಿಸಿವೆ. ಚಿಲಿಯ ಮುಕ್ತ – ಮಾರುಕಟ್ಟೆಯ ಉದಾರವಾದಿ ಮಾದರಿಗೆ ಅವು ಪ್ರತಿ ಸವಾಲು ಒಡ್ಡಲಿಲರಿವು ಪರಸ್ಪರ ರಾಜಕೀಯ ಗುಂಪುಗಳು ಅಂದರೆ ಸಾಮಾನ್ಯವಾಗಿ ಹೇಳುವಂತೆ ಎಡ ಮತ್ತು ಬಲ ಎಂದಿದ್ದರೂ ಜನರಿಗೆ ಇವುಗಳ ನಡುವೆ ವ್ಯತ್ಯಾಸವೇನೂ ಕಾಣಲಿಲ್ಲ. ಒಂದು ಉದಾಹರಣೆ ನೀಡುವುದಾದರೆ, ಸಮಾಜವಾದಿ ಪಕ್ಷಕ್ಕೆ ಸೇರಿದ ಅಧ್ಯಕ್ಷೀಯ ಆಡಳಿತದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಗಳು ಉಗ್ರರೂಪ ತಳೆದವುಶಿಕ್ಷಣ ಕ್ಷೇತ್ರದ ರಾಷ್ಟ್ರೀಕರಣವಾಗಬೇಕು ಹಾಗೂ ವಿಪರೀತ ಶುಲ್ಕಗಳನ್ನು ಕಡಿತಗೊಳಿಸಬೇಕು ಎಂಬ ಪ್ರತಿಭಟನೆಕಾರರ ಬೇಡಿಕೆಗಳನ್ನು ಈಡೇರಿಸಲು ಸಮಾಜವಾದಿ ಅಧ್ಯಕ್ಷರ ಆಡಳಿತವೂ ನಿರಾಕರಿಸಿತ್ತು. ಅದೇ ರೀತಿ ಕಾರ್ಮಿಕ ವರ್ಗದ ಪ್ರತಿಭಟನೆಗಳು ಅವರ ಪ್ರಮುಖ ಬೇಡಿಕೆಯಾದ ಗಣಿಯ ರಾಷ್ಟ್ರೀಕರಣವನ್ನು ನಿರಾಕರಿಸಿದ್ದು ಚಿಲಿಯನ್ನರಲ್ಲಿ ಆಡಳಿತದ ಬಗ್ಗೆ ಭ್ರಮನಿರಸನವಾಗಿತ್ತು.

ಚಿಲಿಯ ಸಮಾಜವಾದಿ ಪಕ್ಷ ಮತ್ತು ಹೊರ ಹೋಗುತ್ತಿರುವ ಅಧ್ಯಕ್ಷೆ ಬ್ಯಾಚೆಲೆಟ್ ರವರು ತಮ್ಮ ಚುನಾವಣಾ ಸೋಲಿನಿಂದ ಪಾಠ ಕಲಿಯುವ ಯಾವುದೇ ಲಕ್ಷಣ ಕಂಡುಬರುತ್ತಿಲ್ಲ. ಮತ ಚಲಾಯಿಸಲು ನಿರಾಸಕ್ತಿ ತೋರಿದ ಅಜ್ಞಾನಿಗಳೆಂದು ಜನರನ್ನೇ ದೂಷಿಸಿದ್ದಾರೆ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅವು ನವ–ಉದಾರವಾದಕ್ಕೇ ಬದ್ಧವಾಗಿರುಉವದರಿಂದ ತಮ್ಮ ಮಟ್ಟಿಗೆ ಏನೂ ಬದಲಾಗವುದಿಲ್ಲ ಎಂದೇ ಅವರು ಮತದಾನದಲ್ಲಿ ಭಾಗವಹಿಸುತ್ತಿಲ್ಲ ಎಂಬುದನ್ನು ಒಪ್ಪಿಕೊಳ್ಳಲು ಅವರು ಈಗಲೂ ಸಿದ್ಧರಿಲ್ಲ

ಹೊಸ ರಾಜಕೀಯ ವೇದಿಕೆ – ಎಡಪಂಥಿಯ ವಿಶಾಲ ರಂಗ ರಚನೆ

ಚಿಲಿಯನ್ ಜನರ ರಾಜಕೀಯ ಉದಾಸೀನತೆಯ ಈ ವಾತಾವಣರಣದ ಮಧ್ಯದಲ್ಲಿಯೇ, ಈ ವರ್ಷ ಎಡ ಪಂಥೀಯರ ಒಂದು ಹೊಸ ರಾಜಕೀಯ ರಂಗ ರಚನೆಗೊಂಡಿದೆ– ಅದರ ಹೆಸರು 'ಬ್ರಾಡ್‌ಫ್ರಂಟ್', ಅಂದರೆ ವಿಶಾಲ ರಂಗ. ಅದರ ಅಧ್ಯಕ್ಷೀಯ ಅಭ್ಯರ್ಥಿ ಬೀಯೆಟ್ರ ಸಾಂಚೆಝ್ ಮೊದಲ ಸುತ್ತಿನಲ್ಲಿ ಚಲಾವಣೆಗೊಂಡ ಒಟ್ಟು ಮತದಲ್ಲಿ ಶೇ. 20.40 ರಷ್ಟು ಪಡೆದಿದ್ದಾರೆ. ವಿದ್ಯಾರ್ಥಿಗಳು ಮತ್ತು ಕಾರ್ಮಿಕರ ನಿರಂತರ ಹೋರಾಟಗಳ ಮೂಲಕ ಹೊರಹೊಮ್ಮಿರುವ ಬ್ರಾಡ್ ಫ್ರಂಟ್ ಪ್ರಗತಿಪರರು, ನವ–ಎಡಪಂಥೀಯರು, ಉದಾರವಾದಿ ಪಕ್ಷಗಳು, ಪ್ರತಿಭಟನಾ ಚಳುವಳಿಗಳು ಮತ್ತು ಪರಿಸರವಾದಿಗಳೂ ಸೇರಿರುವ ಒಂದು ವಿಶಾಲ ರಾಜಕೀಯ ರಂಗ. ಮೊದಲ ಸುತ್ತಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಎರಡನೇ ಸ್ಥಾನ ಪಡೆದ ಸಮಾಜವಾದಿ ಪಕ್ಷದ ಅಲೆಜಾಂಡ್ರೊ ಗಿಲಿಯನ್‌ಗಿಂತ, ಕೇವಲ ಎರಡು ಶೇಕಡಾ ಕಡಿಮೆ ಮತ ಪಡೆದ ಈ ಎಡಪಂಥೀಯ ಅಭ್ಯರ್ಥಿ ಚಿಲಿಯನ್ನರಿಗೆ ಮುಂದಿನ ದಿನಗಳಲ್ಲಿ ಹೊಸ ರಾಜಕೀಯ ರೂಪಾಂತರ ತರಬಹುದೆಂಬ ಉತ್ಸಾಹ ಮೂಡಿಸಬಹುದೇ ಎಂದು ಕಾದು ನೋಡಬೇಕಾಗಿದೆ. ಅಧ್ಯಕ್ಷೀಯ ಚುನಾವಣೆಗಳೊಮದಿಗೆ ನಡೆದ ಕೆಳಸದನದ ಚುನಾವಣೆಯಲ್ಲಿ ಯಾರಿಗೂ ಸ್ಪಷ್ಟ ಬಹುಮತ ಸಿಕ್ಕಲ್ಲ, ಆದ್ದರಿಂದ 21 ಸ್ಥಾನಗಳನ್ನು ಗೆದ್ದುಕೊಂಡಿರುವ ಈ ರಂಗ ಒಂದು ನಿರ್ಣಾಯಕ ಪಾತ್ರ ನಿರ್ವಹಿಸಲು ಅವಕಾಶವಿದೆ. ಅಲ್ಲಿ ಇವರು ತಳೆಯುವ ಧೋರಣೆಗಳು 'ಬ್ರಾಡ್‌ಫ್ರಂಟ್'ನ ಭವಿಷ್ಯವನ್ನು ನಿರ್ಧರಿಸುತ್ತದೆ.

●

ಪೂರ್ಣ ಚಂದ್ರಗ್ರಹಣದ ಸಂದರ್ಭವನ್ನು ಮೂಢನಂಬಿಕೆಗಳ ವಿರುದ್ಧ ಜಾಗೃತಿಗೆ ಹೇಗೆ ಬಳಸಬಹುದು?

ಪೂರ್ಣ ಚಂದ್ರಗ್ರಹಣದ ಸಂದರ್ಭವು ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸಲು ಒಂದು ಸದವಕಾಶ. ಭಾರತದಲ್ಲಿ ಇಂದಿಗೂ ಗ್ರಹಣದ ಬಗೆಗೆ ಅನೇಕ ಮೂಢನಂಬಿಕೆಗಳು ಉಳಿದಿವೆ. ಉದಾಹರಣೆಗೆ "..ಗರ್ಭಿಣಿಯರನ್ನು ಗ್ರಹಣದ ದುಷ್ಪರಿಣಾಮದಿಂದ ರಕ್ಷಿಸಬೇಕು.. ಗ್ರಹಣದಿಂದ ಸಿದ್ದ ಮಾಡಿಟ್ಟಿರುವ ಆಹಾರವು ಕಲುಷಿತವಾಗುತ್ತದೆ ಹಾಗೂ ವಿಷಪೂರಿತವಾಗುತ್ತದೆ.... ಆದ್ದರಿಂದ ಅಂತಹ ಆಹಾರವನ್ನು ಸೇವಿಸಬಾರದು. ಸಂಗ್ರಹಿಸಿಟ್ಟಿರುವ ನೀರು ಗ್ರಹಣದಿಂದ ಕಲುಷಿತವಾಗುವುದರಿಂದ ನೀರಿಗೆ ಹುಲ್ಲಿನ ಗರಿಕೆ (ದರ್ಬೆ) ಹಾಕಿಡಬೇಕು.." ಇತ್ಯಾದಿ ಇತ್ಯಾದಿ. ಮೂಢನಂಬಿಕೆಗಳು ಸ್ಥಳದಿಂದ ಸ್ಥಳಕ್ಕೆ ಸಂಸ್ಕೃತಿಯಿಂದ ಸಂಸ್ಕೃತಿಗೆ ಬದಲಾಗುತ್ತವೆ. ಉದಾಹರಣೆಗೆ ಇಟಲಿಯಲ್ಲಿ, ಗ್ರಹಣದ ಸಮಯದಲ್ಲಿ ನೆಟ್ಟ ಗಿಡದ ಹೂವು ಆ ವರ್ಷದ ಯಾವುದೇ ಸಮಯದಲ್ಲಿ ನೆಟ್ಟ ಗಿಡಕ್ಕಿಂತ ಹೆಚ್ಚು ಪ್ರಖರ ಬಣ್ಣದ ಹೂವುಗಳನ್ನು ಬಿಡುತ್ತದೆ ಎಂಬ ನಂಬಿಕೆ ಇದೆ. ಈ ಯಾವುದೇ ನಂಬಿಕೆಗಳನ್ನು ವೈಜ್ಞಾನಿಕ ಸಾಕ್ಷ್ಯಗಳು ದೃಢೀಕರಿಸಿಲ್ಲ. ಅದೂ ಅಲ್ಲದೇ ಭಾರತದಲ್ಲಿ ಮತ್ತು ಜಗತ್ತಿನ ನಾನಾ ಭಾಗಗಳಲ್ಲಿ ಸಹ ಅಸಂಖ್ಯಾತ ಜನರು ಸೂರ್ಯಗ್ರಹಣ, ಚಂದ್ರಗ್ರಹಣಗಳೆರಡನ್ನೂ ನೋಡಿ ಅನಂದಿಸಿದ್ದಾರೆ. ಗ್ರಹಣದ ಸಮಯದಲ್ಲಿ ಆಹಾರವನ್ನೂ ಸೇವಿಸಿದ್ದಾರೆ. ಆದರೆ ಅವರು ತಾತ್ಕಾಲಿಕ ಅಥವಾ ಧೀರ್ಘಕಾಲಿಕವಾದ ಯಾವುದೇ ತೊಂದರೆಯನ್ನೂ ನಕಾರಾತ್ಮಕ ಪರಿಣಾಮಗಳನ್ನೂ ಅನುಭವಿಸಿಲ್ಲ. ಇದಲ್ಲದೇ ಗ್ರಹಣ ಏಕೆ ಸಂಭವಿಸುತ್ತದೆ ಎಂಬುದು ನಮಗೆ ಗೊತ್ತಿದೆ. ಸೂರ್ಯನ ಬೆಳಕು ಚಂದ್ರನನ್ನು ತಲುಪದಂತೆ ಭೂಮಿಯು ಅಡ್ಡಬರುವುದರಿಂದ ಚಂದ್ರಗ್ರಹಣ ಸಂಭವಿಸುತ್ತದೆ. ಈ ನಿಸರ್ಗದ ವಿದ್ಯಮಾನ ಭೂಮಿಯ ಮೇಲೆ ಮಾಡಿಟ್ಟ ಅಡುಗೆಯನ್ನು ಕಲುಷಿತಗೊಳಿಸುವುದು ಸಾಧ್ಯವೇ ಇಲ್ಲ. ಈ ವಿಷಯದಲ್ಲಿ ಜಾಗೃತಿಯನ್ನು ಮೂಡಿಸುವ ಸಲುವಾಗಿ ಜನವರಿ 31, 2018 ರಂದು ಈ ಗ್ರಹಣದ ಸಮಯದಲ್ಲಿ ಆಹಾರವನ್ನು ಸೇವಿಸಿತೋರಿಸಬಹುದು. ಈ ಹಿಂದೆ ಇಂಥ ಸಂದರ್ಭದಲ್ಲಿ ಕಡಲೆ ಪುರಿ, ತಿಂಡಿ, ಲಘು ಉಪಹಾರ ಸೇವಿಸಿದ ಉದಾಹರಣೆಗಳಿವೆ. ಈ ಗ್ರಹಣವು ಸುಮಾರು ಒಂದು ಗಂಟೆಗಳ ಕಾಲ ಇರುವುದು ಸಹ ಒಂದು ಒಳ್ಳೆಯ ಅವಕಾಶ. ಈ ಅವಧಿಯಲ್ಲಿ ನಾವು ನಮ್ಮ ಬಳಿ ಇರುವ ಮೊಬೈಲ್ ಫೋನಿನ ಟಾರ್ಚನ್ನು ಬಳಸಿ ಒಂದು ನಾಣ್ಯ ಅಥವಾ ಪೆನ್ನಿನ ಮೇಲೆ ಬೆಳಕು ಬೀಳುವಂತೆ ವ್ಯವಸ್ಥೆಗೊಳಿಸಿ ತೋರಿಸುವ ಮೂಲಕ ಗ್ರಹಣದ ಖಂಡಛಾಯೆಯನ್ನು ಅರ್ಥ ಮಾಡಿಸಿ ವಿವರಿಸಬಹುದು. ಮತ್ತು ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದರಿಂದ ನಮಗೆ ಹೇಗೆ ಯಾವ ಅಪಾಯವೂ ಇಲ್ಲ ಎಂದೂ ವಿವರಿಸಬಹುದು.

ಗ್ರಹಣಗಳ ಬಗೆಗೆ ನಾನಾ ದೇಶಗಳಲ್ಲಿ ನಾನಾ ಬಗೆಯ ಕಥೆಗಳಿವೆ. ಭಾರತದಲ್ಲಿ ರಾಹು ಮತ್ತು ಕೇತು ಎಂಬುವವರು ಸೂರ್ಯ ಚಂದ್ರರನ್ನು ನುಂಗುವುದರಿಂದ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳು ಸಂಭವಿಸುತ್ತವೆ ಎಂದು ಕತೆಗಳು ಚಾಲ್ತಿಯಲ್ಲಿವೆ. ತೈಲ್ಯಾಂಡ್ ದೇಶದಲ್ಲಿ ಕಪ್ಪೆಯು ಸೂರ್ಯ ಮತ್ತು ಚಂದ್ರರನ್ನು ನುಂಗುವುದರಿಂದ ಗ್ರಹಣಗಳು ಸಂಭವಿಸುತ್ತವೆ ಎಂಬ ಕತೆಗಳಿವೆ. ಸೂರ್ಯ ಮತ್ತು ಚಂದ್ರರು ಪರಸ್ಪರ ಜಗಳವಾಡಿಕೊಳ್ಳುವುದರಿಂದ ಗ್ರಹಣಗಳು ಸಂಭವಿಸುತ್ತವೆ ಎಂದೂ ಕೆಲವೆಡೆ ಕತೆಗಳಿವೆ. ಈ ಚಂದ್ರಗ್ರಹಣದ ಸಂದರ್ಭದಲ್ಲಿ ಈ ಕತೆಗಳನ್ನು ನಾವು ನೆನಪಿಸಿಕೊಳ್ಳಬಹುದು. ಭಾರತದ ಜ್ಯೋತಿಷ್ಯಶಾಸ್ತ್ರದಲ್ಲಿ 'ನವಗ್ರಹ'ಗಳೆಂಬ ಕಲ್ಪನೆ ಇದೆ. ಅಂದರೆ ಒಟ್ಟು ಒಂಭತ್ತು ಗ್ರಹಗಳಿವೆ ಎಂದು ಅರ್ಥ. ಅದರಲ್ಲಿ ನಕ್ಷತ್ರವಾದ ಸೂರ್ಯನನ್ನು ಒಂದು ಗ್ರಹವೆಂದೂ ಇಲ್ಲಿ ಹೇಳಲಾಗಿದೆ. ಅದಲ್ಲದೇ ಭೂಮಿಯೆಂಬ ನಾವು ವಾಸಿಸುತ್ತಿರುವ ಈ ಗ್ರಹವನ್ನು ಸುತ್ತುವ ಉಪಗ್ರಹವಾದ ಚಂದ್ರನನ್ನು ಕೂಡ ಒಂದು ಗ್ರಹವೆಂದು ಹೇಳಲಾಗಿದೆ. ಈ ಅಂಶಗಳನ್ನು ನೆನಪಿಸಿಕೊಂಡು ನೋಡಿದಲ್ಲಿ ಚಂದ್ರಗ್ರಹಣದ ವೀಕ್ಷಣೆ ಒಂದು ಕುತೂಹಲಕರವೂ, ಪ್ರಕೃತಿಯ ಸತ್ಯವನ್ನು ಕಂಡುಕೊಳ್ಳುವ ಒಂದು ಉತ್ತಮ ಅವಕಾಶ.

(ಜನವರಿ 31, 2018 ರ ಗ್ರಹಣದ ಬಗ್ಗೆ ಮೂಲ ಲೇಖನ ಪುಟ 16 ರಲ್ಲಿ ಇದೆ)

JANASHAKTHI KANNADA VARA PATRIKE January 22-28, 2018 Price: Rs. 10/- Date of Publication: 19 January 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಜನವರಿ 31 ರಂದು ಅಪರೂಪದ
ತಾಮ್ರ ಚಂದ್ರೋದಯ, ಪೂರ್ಣ ಚಂದ್ರಗ್ರಹಣ!
ನೋಡಲು ಮರೆಯದಿರಿ !!

ಪ್ರಜ್ವರ್ ಶಾಸ್ತ್ರಿ, ವಿಜ್ಞಾನಿಗಳು, ಭಾರತೀಯ ಖಗೋಳ ವಿಜ್ಞಾನ ಸಂಸ್ಥೆ



2018 ರ ಜನವರಿ 31 ರಂದು ಇಡೀ ದಕ್ಷಿಣ ಏಷ್ಯಾದಲ್ಲೆಲ್ಲ ನೋಡಲು ಸಾಧ್ಯವಾಗುವ ಸಂಪೂರ್ಣ ಚಂದ್ರಗ್ರಹಣ ಸಂಭವಿಸುತ್ತದೆ. ಕರ್ನಾಟಕದಲ್ಲಿ ಚಂದ್ರೋದಯದ ಹೊತ್ತಿನಲ್ಲೇ ಗ್ರಹಣ ಸಂಭವಿಸುವುದರಿಂದ ತಾಮ್ರ ಬಣ್ಣದ ಚಂದ್ರ ರಾಜ್ಯದೆಲ್ಲೆಡೆ ಗೋಚರಿಸುತ್ತಾನೆ. ಪೂರ್ಣ ಚಂದ್ರಗ್ರಹಣವು ಸಾಧಾರಣ ಒಂದು ಗಂಟೆ ಕಾಲ ಗೋಚರಿಸುತ್ತದೆ. ಆನಂತರ ಎರಡು ಗಂಟೆಗಳ ಕಾಲ ಪಾರ್ಶ್ವ ಗ್ರಹಣ ಗೋಚರಿಸುತ್ತದೆ. ಚಂದ್ರಗ್ರಹಣ ವೀಕ್ಷಣೆಯಲ್ಲಿ ಯಾವುದೇ ಅಪಾಯವಿಲ್ಲ!! ಈ ಗ್ರಹಣವು ಸಂಜೆ ಚಂದ್ರೋದಯದ ಸಮಯದಲ್ಲಿ ಸಂಭವಿಸುವುದರಿಂದ ವೀಕ್ಷಿಸಲು ಅನುಕೂಲಕರ! ಚಂದ್ರೋದಯವಾಗುವಾಗಲೇ ಸಂಪೂರ್ಣ ಗ್ರಹಣವಾಗಿರುತ್ತದೆ!

ಬೇರೆ ಬೇರೆ ಪ್ರದೇಶಗಳಿಂದ ಚಂದ್ರಗ್ರಹಣವನ್ನು ವೀಕ್ಷಿಸುವ ಬಯಲೂಟವನ್ನು ಏರ್ಪಡಿಸಲು, ನಮ್ಮ ಸೌರವ್ಯೂಹದ ಬಗೆಗೆ, ಗ್ರಹಣಗಳ ಬಗೆಗೆ ಮತ್ತು ಬೆಳಕಿನ ಭೌತಶಾಸ್ತ್ರದ ಕುರಿತು ಅರಿವು ಮೂಡಿಸಲು ಹಾಗೂ ನೈಸರ್ಗಿಕ ವಿದ್ಯಮಾನಗಳ ಕುರಿತು ವೈಜ್ಞಾನಿಕ ಮನೋಭಾವ ರೂಪಿಸಲು ಇದೊಂದು ಅತ್ಯುತ್ತಮ ಅವಕಾಶ. ಪ್ರಕೃತಿಯ ಈ ಚಿತ್ತಾಕರ್ಷಕ ಬೆಳಕು ನೆರಳಿನಾಟವನ್ನು ವೀಕ್ಷಿಸುವುದನ್ನು ಮರೆಯದಿರಿ!

ಚಂದ್ರಗ್ರಹಣಗಳು ಏಕೆ ಸಂಭವಿಸುತ್ತವೆ?

ಚಂದ್ರ ನಮಗೆ ಪ್ರಕಾಶಮಾನವಾಗಿ ಕಾಣುವುದು ಸೂರ್ಯನ ಬೆಳಕನ್ನು ಪ್ರತಿಫಲಿಸುವುದರಿಂದ. ಹುಣ್ಣಿಮೆಯ ರಾತ್ರಿಯಂದು ನಮಗೆ ಅಭಿಮುಖವಾಗಿರುವ ಇಡಿಯ ಚಂದ್ರನ ಹೊರತಲದಿಂದ ಈ ಪ್ರತಿಫಲಿತ ಬೆಳಕು ನಮಗೆ ಗೋಚರಿಸುತ್ತದೆ. ಆದರೆ ಕೆಲವು ಹುಣ್ಣಿಮೆಗಳಂದು ಭೂಮಿಯು ಕೆಲಕಾಲ ಸೂರ್ಯ ಮತ್ತು ಚಂದ್ರನ ನಡುವೆ ಅದೇ ನೇರದಲ್ಲಿ ಬಂದು ಸೂರ್ಯನ ಬೆಳಕು ಚಂದ್ರನ ಮೇಲೆ ತಲುಪುವುದನ್ನು ತಡೆಯುತ್ತದೆ. ಈ ಸಂದರ್ಭದಲ್ಲಿ ಸಂಪೂರ್ಣ ಚಂದ್ರಗ್ರಹಣ ಸಂಭವಿಸುತ್ತದೆ.

ಚಂದ್ರಗ್ರಹಣವು ಹುಣ್ಣಿಮೆಯ ದಿನ ಮಾತ್ರ ಸಂಭವಿಸುತ್ತದೆ. ಯಾಕೆಂದರೆ ಆ ದಿನದಂದು ಸೂರ್ಯನ ಬೆಳಕಿನಿಂದ ಹೊಳೆಯುವ ಚಂದ್ರನ ಹೊರತಲ ಭಾಗ ನಮಗೆ ಅಭಿಮುಖವಾಗಿರುತ್ತದೆ. ಹಾಗೂ ಸೂರ್ಯ ಭೂಮಿಯು ಆ ಭಾಗಕ್ಕೆ ಹಿಂಭಾಗದಲ್ಲಿ ಇರುತ್ತದೆ. ಇದರಿಂದಾಗಿ ಈ ಸಂದರ್ಭದಲ್ಲಿ ಮಾತ್ರ ಭೂಮಿಯ ನೆರಳು ಚಂದ್ರನ ಮೇಲೆ ಬೀಳಲು ಸಾಧ್ಯವಾಗುತ್ತದೆ.

ಪ್ರತಿ ಹುಣ್ಣಿಮೆಯಲ್ಲಿ ಚಂದ್ರಗ್ರಹಣ ಸಂಭವಿಸುವುದಿಲ್ಲ ಏಕೆ?

ಚಂದ್ರನು ಭೂಮಿಯನ್ನು ಸುತ್ತುವ ಕಕ್ಷೆಯು, ಹಾಗೂ ಭೂಮಿಯು ಸೂರ್ಯನನ್ನು ಸುತ್ತುವ ಕಕ್ಷೆಯು ಒಂದೇ ತಲದಲ್ಲಿ ಇರದೆ 50(ಐದು ಡಿಗ್ರಿ) ಯಷ್ಟು ಓರೆಯಾಗಿರುತ್ತದೆ. ಆದ್ದರಿಂದ ಹೆಚ್ಚಿನ ಹುಣ್ಣಿಮೆಗಳಂದು ಚಂದ್ರ, ಭೂಮಿ ಹಾಗೂ ಸೂರ್ಯ ಒಂದೇ ನೇರದಲ್ಲಿರುವುದಿಲ್ಲ. ಇದರಿಂದಾಗಿ ಚಂದ್ರನು ಭೂಮಿಯ ನೆರಳಿನ ಹೊರಭಾಗದಲ್ಲಿರುತ್ತದೆ. ಕೆಲವು ಹುಣ್ಣಿಮೆಗಳಂದು ಮಾತ್ರ ಸೂರ್ಯ, ಭೂಮಿ ಮತ್ತು ಚಂದ್ರ ಈ ಮೂರೂ ಕಾಯಗಳು ಒಂದೇ ಸರಳ ರೇಖೆಯಲ್ಲಿರುತ್ತವೆ.


ಗ್ರಹಣ ಹಿಡಿದ ಚಂದ್ರ ಕೆಂಪಗೇಕೆ ಕಾಣುತ್ತದೆ?

ಸಂಪೂರ್ಣ ಚಂದ್ರಗ್ರಹಣದ ಸಮಯದಲ್ಲಿ ಸೂರ್ಯನ ನೇರ ಬೆಳಕಿನ ಕಿರಣಗಳು ಭೂಮಿಯಿಂದ ತಡೆಯಲ್ಪಡುವುದರಿಂದ ಚಂದ್ರನನ್ನು ತಲುಪುವುದಿಲ್ಲ. ಆದರೆ ಸೂರ್ಯನ ಕೆಲವು ಕಿರಣಗಳು ಭೂಮಿಯ ವಾತಾವರಣದ ಮೂಲಕ ಹಾದು ವಾತಾವರಣದಲ್ಲಿ ವಕ್ರೀಭವನಗೊಂಡು ಚಂದ್ರನನ್ನು ತಲುಪಿ ಚಂದ್ರನಿಂದ ಪ್ರತಿಫಲಿಸುತ್ತವೆ. ಈ ಕಿರಣಗಳು ಹೆಚ್ಚಾಗಿ ಕೆಂಪಗಿರುತ್ತವೆ, ಯಾಕೆಂದರೆ, ನೀಲಿ ಬಣ್ಣದ ಕಿರಣಗಳು ಹೆಚ್ಚಾಗಿ ವಾತಾವರಣದ ಮೂಲಕ ಹಾದು ಹೋಗುವಾಗ ಚದುರಿ ಹೋಗುತ್ತವೆ. (ಸೂರ್ಯಾಸ್ತ ಮತ್ತು ಸೂರ್ಯೋದಯದ ಸಂದರ್ಭಗಳಲ್ಲಿ ಸೂರ್ಯನು ಇದೇ ಕಾರಣಕ್ಕೆ ಕೆಂಪಗೆ ಕಾಣಿಸುತ್ತಾನೆ.)

ಪೂರ್ಣ ಚಂದ್ರಗ್ರಹಣದ ಅವಧಿಯಲ್ಲಿ ಈ ರೀತಿ ವಕ್ರೀಭವನಗೊಂಡ ಕೆಂಪು ಕಿರಣಗಳು ಮಾತ್ರ ಚಂದ್ರನಿಂದ ಪ್ರತಿಫಲಿಸುವುದರಿಂದ ಚಂದ್ರನು ತಾಮ್ರಬಣ್ಣ ತಾಳುತ್ತಾನೆ. ಗ್ರಹಣ ಇಲ್ಲದಾಗ ಹುಣ್ಣಿಮೆಯ ಚಂದ್ರನು ಈ ರೀತಿ ಕಾಣಿಸುವುದಿಲ್ಲ. ಯಾಕೆಂದರೆ ಸೂರ್ಯನ ನೇರ ಕಿರಣಗಳ ಪ್ರಮಾಣ ವಾತಾವರಣದ ಮೂಲಕ ಹಾದಿರುವ ಕೆಂಪು ಕಿರಣಗಳಿಂತ ಎಷ್ಟೋ ಹೆಚ್ಚಾಗಿರುತ್ತದೆ. ಈ ಪ್ರಕ್ರಿಯೆಯನ್ನು ಮುಂಬದಿ ಒಳ ರಕ್ಷಾಪುಟದಲ್ಲಿ ಚಿತ್ರೀಕರಿಸಲಾಗಿದೆ.

ಚಂದ್ರಗ್ರಹಣವನ್ನು ನೇರವಾಗಿ ನೋಡುವುದರಲ್ಲಿ ಅಪಾಯವಿದೆಯೇ ?

ಚಂದ್ರಗ್ರಹಣ ವೀಕ್ಷಣೆಯಲ್ಲಿ ಯಾವುದೇ ಅಪಾಯವಿಲ್ಲ! ಚಂದ್ರಗ್ರಹಣದ ಸಮಯದಲ್ಲಿ ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದರಿಂದ ಚಂದ್ರನು ಪ್ರತಿಫಲಿಸುವ ಬೆಳಕಿನ ಪ್ರಮಾಣ ಕಡಿಮೆಯಾಗುತ್ತದೆ. ಆದ್ದರಿಂದ ಚಂದ್ರಗ್ರಹಣವು ಅದು ಸಂಪೂರ್ಣವೇ ಆಗಿರಲಿ, ಪಾರ್ಶ್ವವೇ ಆಗಿರಲಿ, ಖಂಡಛಾಯೆಯ ಹಂತದಲ್ಲಿರಲಿ, ಬರಿಗಣ್ಣಿನಿಂದ ನೋಡಲಿ ಅಥವಾ ದೂರದರ್ಶಕ, ದುರ್ಬೀನುಗಳ ಮೂಲಕ ನೋಡಲಿ ಯಾವುದೇ ಅಪಾಯವಿಲ್ಲ. ಸಂಪೂರ್ಣ ಸುರಕ್ಷಿತವಾದುದು.



'ಚಂದ್ರಗ್ರಹಣ'ವು 'ಸೂರ್ಯಗ್ರಹಣ'ಕ್ಕಿಂತ ಹೇಗೆ ಭಿನ್ನ?

ಸೂರ್ಯಗ್ರಹಣವು ಚಂದ್ರನ ನೆರಳು ಭೂಮಿಯ ಮೇಲೆ ಬಿದ್ದಾಗ ಸಂಭವಿಸುತ್ತದೆ. ಭೂಮಿಯ ಮೇಲಿನಿಂದ ನೋಡಿದಾಗ ಕಾಣುವಂತೆ ಚಂದ್ರನು ಸೂರ್ಯನಿಗೆ ಅಡ್ಡ ಬರುತ್ತಾನೆ ಅಥವಾ ಚಂದ್ರನು ಸೂರ್ಯನನ್ನು ಮರೆಮಾಡುತ್ತಾನೆ. ಸೂರ್ಯನು ಭೂಮಿಯ ನೆರಳನ್ನು ಚಂದ್ರನ ಮೇಲೆ ಚೆಲ್ಲಿದಾಗ ಚಂದ್ರಗ್ರಹಣವಾಗುತ್ತದೆ. ಇದೇ ಕಾರಣಕ್ಕೇ ಚಂದ್ರಗ್ರಹಣವು ಹುಣ್ಣಿಮೆಯಂದು ಮಾತ್ರ, ಅಂದರೆ ಚಂದ್ರ ಮತ್ತು ಸೂರ್ಯನ ನಡುವೆ ಭೂಮಿ ಇರುವಾಗ ಮಾತ್ರ ಸಂಭವಿಸುತ್ತದೆ. ಹಾಗೂ ಸೂರ್ಯಗ್ರಹಣವು ಅಮಾವಾಸ್ಯೆಯ ದಿನ, ಅಂದರೆ ಚಂದ್ರ ಸೂರ್ಯ ಮತ್ತು ಭೂಮಿಯ ನಡುವೆ ಇರುವಾಗ ಮಾತ್ರ ಸಂಭವಿಸುತ್ತದೆ.

ಪೂರ್ಣ ಚಂದ್ರಗ್ರಹಣದ ಒಂದು ಅನನ್ಯತೆ ಏನೆಂದರೆ ಚಂದ್ರನು ನಮ್ಮ ಕಣ್ಣಿಗೆ ಮರೆಯಾಗುವುದಿಲ್ಲ. ಆದರೆ ತಾಮ್ರಬಣ್ಣ ತಳೆದಂತೆ ಕಾಣುತ್ತಾನೆ.

ಸೂರ್ಯಗ್ರಹಣವನ್ನು ನೋಡುವಾಗ ಎಚ್ಚರವನ್ನು ವಹಿಸಬೇಕಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಸಹ ಸೂರ್ಯನನ್ನು ಬರಿಗಣ್ಣಿನಿಂದ ದಿಟ್ಟಿಸಿ ನೋಡುವುದು ಕಣ್ಣಿಗೆ ಹಾನಿಕರ. ಅದೇ ರೀತಿ ಸೂರ್ಯಗ್ರಹಣದ ಸಮಯದಲ್ಲಿ ಸೂರ್ಯನನ್ನು ದಿಟ್ಟಿಸಿ ನೋಡುವುದು ಸಹ ಅಪಾಯಕರ. ಸೂರ್ಯಗ್ರಹಣದ ಸಂದರ್ಭದಲ್ಲಿ ಚಂದ್ರನು ಸೂರ್ಯನ ಬೆಳಕನ್ನು ಮರೆಮಾಡಿದ್ದರೂ ಸಹ ಪಾರ್ಶ್ವಗ್ರಹಣದ ಅವಧಿಯಲ್ಲಿ ಸೂರ್ಯನ ಬೆಳಕು ಸಾಕಷ್ಟು ಪ್ರಮಾಣದಲ್ಲಿ ಇದ್ದು ಕಣ್ಣಿಗೆ ಹಾನಿ ಉಂಟು ಮಾಡಬಹುದು. ಆದ್ದರಿಂದ ಸೂರ್ಯಗ್ರಹಣವನ್ನು, ಸುರಕ್ಷಿತ ಎಂದು ಪ್ರಮಾಣೀಕರಿಸಿದ ಸುರಕ್ಷತಾ ಕನ್ನಡಕದ ಮೂಲಕ ಮಾತ್ರವೇ ನೋಡಬೇಕು. ಆದರೆ ಚಂದ್ರಗ್ರಹಣವನ್ನು ನೋಡುವುದು ಸಂಪೂರ್ಣ ಸುರಕ್ಷಿತವಾದುದು.

ಜನವರಿ 31, 2018 ರ ಚಂದ್ರಗ್ರಹಣ ವಿಶೇಷ ಏಕೆ?

ಈ ಗ್ರಹಣವು ಕರ್ನಾಟಕದಾದ್ಯಂತ ಚಂದ್ರೋದಯದ ಅಂದರೆ ಸಂಜೆಯ ಹೊತ್ತಿಗೆ ಸಂಭವಿಸುವುದು, ಹಾಗೂ, ಜನವರಿ ತಿಂಗಳಲ್ಲಿ ಆಕಾಶವು ಮೋಡಗಳಿಂದ ಕವಿದಿರುವ ಸಾಧ್ಯತೆ ಕಡಿಮೆ. ಈ ಕಾರಣಗಳಿಂದ ವೀಕ್ಷಣೆಯ ವ್ಯವಸ್ಥೆ ಮಾಡಲು ಅತ್ಯಂತ ಅನುಕೂಲಕಾರಿಯಾಗಿದೆ. ಇಂತಹ ಅವಕಾಶಗಳು ವಿರಳ. ಉದಾಹರಣೆಗೆ ಮುಂದಿನ ಪೂರ್ಣ ಚಂದ್ರಗ್ರಹಣ ಮಳೆಗಾಲದಲ್ಲಿ, ಜುಲೈ ತಿಂಗಳಲ್ಲಿ, ನಡುರಾತ್ರಿಯಲ್ಲಿ ಸಂಭವಿಸುವುದು.


ಇದಲ್ಲದೇ ಚಂದ್ರಗ್ರಹಣವು ಸೂಪರ್‌ಮೂನ್ ದಿನದಂದು ಸಂಭವಿಸುತ್ತಿರುವುದು ಇನ್ನೊಂದು ವಿಶೇಷ

(ಅಂದರೆ ಭೂಮಿಯು ಮತ್ತು ಚಂದ್ರನ ನಡುವೆ ಕನಿಷ್ಟ ಅಂತರವಿರುವ ದಿನ.) ಮತ್ತೊಂದು ವಿಶೇಷವೆಂದರೆ ಜನವರಿ 31 ರ ಹುಣ್ಣಿಮೆಯನ್ನು ಬ್ಲೂಮೂನ್ ಎಂತಲೂ ಕರೆಯಲಾಗುತ್ತದೆ – ಹಾಗೆಂದರೆ ಒಂದೇ ಕ್ಯಾಲೆಂಡರ್ ತಿಂಗಳಿನಲ್ಲಿ ಎರಡು ಹುಣ್ಣಿಮೆಗಳು ಸಂಭವಿಸುವುದು. 3 ಡಿಸೆಂಬರ್ 2017, 1 ಜನವರಿ 2018 ರಲ್ಲಿ ಸೂಪರ್ ಮೂನ್‌ಗಳು ಸಂಭವಿಸಿದ್ದು, 31 ಜನವರಿ 2018 ರಂದು ಸಂಭವಿಸುತ್ತಿರುವುದು ಮೂರನೆಯ ಸೂಪರ್ ಮೂನ್ ಆಗಿರುವುದು.

ಚಂದ್ರ ಮತ್ತು ಜನವರಿ 31 ರ ಚಂದ್ರಗ್ರಹಣಕ್ಕೆ ಸಂಬಂಧಿಸಿದ ಕೆಲವು ಮಾಹಿತಿಗಳು:

- ಸೂಪರ್ ಮೂನ್ ಸಾಮಾನ್ಯ ಹುಣ್ಣಿಮೆಯ ಚಂದ್ರನಿಗಿಂತ 14% ಹೆಚ್ಚು ದೊಡ್ಡದಾಗಿ ಮತ್ತು 30% ಹೆಚ್ಚು ಪ್ರಕಾಶಮಾನವಾಗಿ ಕಾಣುತ್ತದೆ.
- 31 ಜನವರಿ 2018 ರಂದು ಕರ್ನಾಟಕದಲ್ಲಿ ಸಂಪೂರ್ಣ ಚಂದ್ರಗ್ರಹಣದ ಗರಿಷ್ಠ ಕ್ಷಣ 18.59 ಗಂಟೆಗೆ ಸಂಭವಿಸುತ್ತದೆ.
- ಕರ್ನಾಟಕದಲ್ಲಿ 2018 ರ ಜನವರಿ 31 ರಂದು ಚಂದ್ರೋದಯದ ಸಮಯದ ವ್ಯಾಪ್ತಿ: 18.13 ಗಂಟೆಯಿಂದ (ಉದಾ: ಮುಳಬಾಗಿಲು) 18.28 ಗಂಟೆಯವರೆಗೆ (ಉದಾ: ಕಾರವಾರ) ಇರುತ್ತದೆ.
- ಕರ್ನಾಟಕದಲ್ಲಿ 2018 ರ ಜನವರಿ 31 ರಂದು ಸಂಪೂರ್ಣ ಚಂದ್ರಗ್ರಹಣದ ಸಮಯದಲ್ಲಿ ಎತ್ತರದ ವ್ಯಾಪ್ತಿಯು ಪೂರ್ವದಲ್ಲಿ (ಉದಾ: ಮುಳಬಾಗಿಲು) 100(10 ಡಿಗ್ರಿಯಿಂದ) ಪಶ್ಚಿಮದಲ್ಲಿ (ಉದಾ: ಕಾರವಾರ) 6.50 (6.5 ಡಿಗ್ರಿಯವರೆಗೆ) ಇರುತ್ತದೆ.

(ಜನವರಿ 31, 2018 ರ ಗ್ರಹಣದ ಉತ್ತಮ ವೀಕ್ಷಣೆ ಹೇಗೆ? ಮತ್ತು ಈ ಸಂದರ್ಭವನ್ನು ಮೂಢನಂಬಿಕೆಗಳ ವಿರುದ್ಧ ಜಾಗೃತಿಗೆ ಹೇಗೆ ಬಳಸಬಹುದು? ಎಂಬ ಬಗ್ಗೆ ಪುಟ 11, 15 ರಲ್ಲಿ ಕೊಡಲಾಗಿದೆ)



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**